ಕಲ್ಯಾಣ ಕಿರಣ

ಜೂನ್ 2004

ಬೆಲೆ : ರೂ. 8-00





ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಸಂಪುಟ 35 | ಬಸವ ಶಕೆ 870 | ಆಜೀವ ಸದಸ್ಯತ್ವ 500 ರೂ
ಸಂಚಿಕೆ -04 | ಜೂನ್ 2004 | ವಾರ್ಷಿಕ ಚಂದಾ 50/- ರೂ

ಗುರು ಚರಣಕೆ ನುಡಿ ನೈವೇದ್ಯ



ಶ್ರೀಗುರುವೆ ನಾ ನಿಮ್ಮ ಅನುದಿನವು ನೆನೆಯುವೆನು
ಸದ್ಗುರು ಲಿಂಗಾನಂದ ಬಸವ ಕರುಣೆಯ ಕಂದ ॥ಪ॥
ಬಸವ ತತ್ತ್ವದ ಬೀಜ ಬಿತ್ತಿ ಬೆಳೆದಿಹ ತ್ಯಾಗಿ
ದಿವ್ಯ ಜಂಗಮವಾಗಿ ಚರಿಸಿದ ಸುವಿರಾಗಿ ॥ಅ.ಪ॥

ಅನುಭವ ಮಂಟಪದಿ ಹುಟ್ಟಿ ಬೆಳೆದಿಹ ಧರ್ಮ
ವನವಾಸಕೈದಿರಲು ಮತಾಂಧಕರ ದ್ವೇಷದಿಂ
ಹಳಕಟ್ಟಿ ಶರಣರು ಬೆಳಕಿಗಿಟ್ಟಿಹ ವಚನ
ವಾಙ್ಮಯವ ಮನೆ-ಮನಕೆ ಪಸರಿಸಿಹ ಗುರುಮರುತ ॥ 1 ॥

ಮನುಗೂಳಿಯಲಿ ಜನಿಸಿ ವಿಜಯಪುರದೊಳು ಓದಿ
ಬೆಳಗಾಂವಿಯ ನೆಲದಿ ಪದವಿಯಂ ಪಡೆದು
ಧಾರವಾಡದ ದಿವ್ಯ ಬಸವಗಿರಿ ಶೃಂಗದಲಿ
ಕಾಷಾಯ ಅಂಬರವ ಧರಿಸಿದ ಸುಜಂಗಮವೆ ॥ 2 ॥

ಲಿಂಗಾಯತ ಧರ್ಮವು ಜಾತಿ ಪಂಥ ಮತವಲ್ಲ
ಧರ್ಮಗುರು ಬಸವಣ್ಣ ಇದಕೆ ಮೂಲವು ಎಲ್ಲ
ಇಷ್ಟಲಿಂಗವು ಯಾವ ದೇವತೆಯ ಕುರುಹಲ್ಲ
ಬ್ರಹ್ಮಾಂಡ ತುಂಬಿಪ್ಪ ಚೇತನದ ಕುರುಹೆಂದ ॥ 3 ॥

ಬಸವ ಧರ್ಮಕೆ ಜಾತಿವಾದಿಗಳು ಹೊದಿಸಿದ್ದ
ಮಿಥ್ಯೆಗಳ ಮುಸುಕನು ಕಿತ್ತೆಸೆದು ಬೆಳಗಿಸಿದೆ
ಬಸವ ಗುರು ಬೋಧಿಸಿದ ಪ್ರಗತಿಪರ ಚಿಂತನೆ
ಸಮತೆ-ಮಾನವತೆಯ ಮಹತಿಯಂ ಬೋಧಿಸಿದ ॥ 4 ॥

ಶರಣರ ಜೀವನದ ಘನತೆಯನು ಮರಣದಲಿ
ಅರಿತು ನೋಡಲಿ ಬೇಕು ಎಂಬ ಶಿವವಾಣಿಯ
ದಿಟ ಮಾಡುವಂತೆ ನಗು ನಗುತ ಇಳೆ ತೊರೆದು
ಲಿಂಗದೇವನ ಒಡಲೋಳ್ ಒಂದಾದ ಚೇತನವೆ ॥ 6 ॥

ಹರಿವ ನದಿಯ ತೆರದಿ ಜ್ಞಾನಧಾರೆಯ ನೀಡಿ
ಉರಿವ ಜ್ಯೋತಿಯೆ ಆಗಿ ಹಲವು ದೀವಿಗೆ ಹಚ್ಚಿ
ಬಸವಾತ್ಮಜೆಯ ಭಕ್ತಿ ಬಸವ ಮಾರ್ಗದಿ ನಿಲಿಸಿ
ಸಚ್ಚಿದಾನಂದನ ಬೆರೆದ ಲಿಂಗಾನಂದ ಗುರುವರ ॥ 7 ॥

- ಮಾತಾಜಿ

★ ಕಲ್ಯಾಣ ಕಿರಣ ★

ಸಂಪುಟ 35 | ಬಸವ ಶಕೆ 870 | ಆಜೀವ ಸದಸ್ಯತ್ವ 500 ರೂ
ಸಂಚಿಕೆ -04 | ಜೂನ್ 2004 | ವಾರ್ಷಿಕ ಚಂದಾ 50 ರೂ

ಲೇಖನಗಳು — ಕಿರಣಗನ್ನಡಿ



9ನೇ ಲಿಂಗೈಕ್ಯ ಸಂಸ್ಮರಣೆ

ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳು 30-6-1995 ರಂದು ಲಿಂಗೈಕ್ಯರಾಗಿದ್ದು ಭಾನು(ದೇವ) ವಾರ ದಿ. 30-6-2004 ರಂದು 9 ನೇ ಲಿಂಗೈಕ್ಯ ಸಂಸ್ಮರಣೆ ಜರುಗಲಿದೆ.

ಎಲ್ಲ ರಾಷ್ಟ್ರೀಯ ಬಸವ ದಳಗಳವರು ಸಂಸ್ಮರಣಾ ಕಾರ್ಯಕ್ರಮ ಏರ್ಪಡಿಸಬೇಕೆಂದು ಕೋರುತ್ತೇವೆ.

ಅಡಿಯ ಇಟ್ಟು ನಡೆದಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ
ಗುರುದೇವ ಲಿಂಗಾನಂದ ಹೆಸರು ಅಮರವಾಗಿದೆ
ಸಚ್ಚಿದಾನಂದನ ಶುಭದೊಲುಮೆಯು ನಿಮಗಿದೆ.

ತ್ವರಿತ ಪತ್ರ ವ್ಯವಹಾರಕ್ಕೆ ಈ ವಿಳಾಕ್ಕೆ ಬರೆಯಿರಿ : ಬಸವ ಮಂಟಪ,
ನಂ. 2035, 20ನೇ ಮೇನ್, 2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು - 560010

KALYANA KIRANA- Reg. No. 19988/70. Monthly Magazine printed and published by B.Shambulingaiah, at Prabhudeva Printing Press, Basava Gangotri, Kumbalgodu, Bangalore-560074. Phone : 28437234

ತ್ವರಿತ ವ್ಯವಹಾರಕ್ಕೆ / ನಿಮ್ಮ ದೂರುಗಳಿಗಾಗಿ ಈ ದೂ. ಸಂಖ್ಯೆಗೆ ಕರೆ ಮಾಡಿ : 080 - 23325335

ಸಂಪಾದಕೀಯ

ಆಶಾ ಸಿದ್ಧಿ-ಮನಮೋಹನ ಸಿಂಗ್ ಪ್ರಧಾನಿ

- ಮಾತಾಜಿ

ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಚುನಾವಣಾ ಪ್ರಚಾರ ಸಭೆಯಲ್ಲಿ ಭಾಷಣ ಮಾಡುವ ಸಂದರ್ಭದಲ್ಲಿ ನಾನು ಹೇಳುತ್ತಿದ್ದುದುಂಟು, ''ನಮಗೆ ಕಾಂಗ್ರೆಸ್ ಬಗ್ಗೆ ದ್ವೇಷವಿಲ್ಲ; ಆದರೆ ಇಂದು ಅದರ ನೇತಾರರು ತಳೆದಿರುವ ದಾಸ್ಯ ಮನೋಭಾವದ ಬಗ್ಗೆ ಅಸಹನೆ ಇದೆ. ಒಂದು ಈಸ್ಟ್ ಇಂಡಿಯಾ ಕಂಪೆನಿ ವ್ಯಾಪಾರದ ಉದ್ದೇಶದಿಂದ ನಮ್ಮ ದೇಶಕ್ಕೆ ಬಂದು, ನಮ್ಮ ಜನರಲ್ಲಿರುವ ಆಂತರಿಕ ಸಂಘರ್ಷದ ಬಲದ ಮೇಲೆ ಇಡೀ ದೇಶವನ್ನು ತನ್ನ ಹಿಡಿತಕ್ಕೆ ತಂದುಕೊಂಡು ಬ್ರಿಟಿಷ್ ರಾಣಿಯ ಪದತಲಕ್ಕೆ ಒಪ್ಪಿಸಿತು. ಅಂಥ ವಸಾಹತುಶಾಹಿಯ ಬ್ರಿಟಿಷ್ ಆಳ್ವಿಕೆಯಿಂದ ದೇಶವನ್ನು ಸ್ವತಂತ್ರಗೊಳಿಸಲು ಮಹಾತ್ಮಾ ಗಾಂಧೀಜಿಯಂತಹವರ ನೇತೃತ್ವದಲ್ಲಿ ಎಂಥಾ ಹೋರಾಟ ನಡೆಯಿತು! ಆಜಾದ್, ಭಗತ್ ಸಿಂಗ್ ರಂತಹ ವೀರರು ಗಲ್ಲಿಗೆ ಏರಿಸಲ್ಪಟ್ಟರು. ಇಷ್ಟು ಕಷ್ಟಪಟ್ಟು ಗಳಿಸಿದ ಸ್ವಾತಂತ್ರ್ಯ ಕಳೆದುಕೊಳ್ಳುವಂತೆ ಪುನಃ ಐರೋಪ್ಯ ಮಹಿಳೆಯ ಕೈಗೆ ಒಪ್ಪಿಸುವುದೇ ಈ ದೇಶದ ಆಡಳಿತವನ್ನು ? ಈ ಕಾಂಗ್ರೆಸ್ಸಿಗರಲ್ಲಿ ದಾಸ್ಯ ಮನೋಭಾವ ಏಕೆ ? ಮನಮೋಹನ ಸಿಂಗ್, ಪ್ರಣವ ಮುಖರ್ಜಿಯಂತಹ ಅನುಭವಿಗಳು, ಮುತ್ಸದ್ದಿಗಳು ಇರುವ ಪಕ್ಷದಲ್ಲಿ ಅವರನ್ನೇಕೆ ಪ್ರಧಾನಿ ಹುದ್ದೆಯ ಅಭ್ಯರ್ಥಿಗಳನ್ನಾಗಿ ಮುಂದಿಡುತ್ತಿಲ್ಲ?'' ಎಂದು.

''ಏನೇ ಆದರೂ ಶತಾಯಗತಾಯ ಸೋನಿಯಾ ಪ್ರಧಾನಿ ಹುದ್ದೆಯ ಆಕಾಂಕ್ಷಿಯಾಗಿ ಅದನ್ನು ಬಿಟ್ಟುಕೊಡುವುದಿಲ್ಲ. ಏಕೆ ಈ ದೇಶಕ್ಕೆ ದುರಾದೃಷ್ಟ ಕಾಡುತ್ತಲಿದೆ ?'' ಎಂದು ನಾನು ಚಿಂತಿಸುತ್ತಲಿದ್ದೆ. ಆದರೆ ಏನಾಯಿತೋ ಏನೋ ಪ್ರಧಾನಿ ಹುದ್ದೆಗೆ ಇನ್ನು ಒಂದೇ ಒಂದು ಹೆಜ್ಜೆ ಇರುವಾಗ ಶ್ರೀಮತಿ ಸೋನಿಯಾ ಪ್ರಧಾನಿ ಪಟ್ಟವನ್ನು ನಿರಾಕರಿಸಿದರು. ಶ್ರೀ ಮನಮೋಹನ ಸಿಂಗ್ ಅವರನ್ನು ಸೂಚಿಸಿದರು. ಬಹುಪಾಲು ಭಾರತೀಯರ ಏರುತ್ತಿದ್ದ ರಕ್ತದೊತ್ತಡ ಇಳಿಯಿತು. ಈ ದೇಶದ ಪುಣ್ಯ ಒಬ್ಬ ಆದರ್ಶ ರಾಷ್ಟ್ರಪತಿ ನಮಗೆ ದೊರೆತಂತೆ ಸಮರ್ಥ ಪ್ರಧಾನಿಯೂ ದೊರೆತರು.

ಶ್ರೀ ಮನಮೋಹನ ಸಿಂಗ್ ಬಗ್ಗೆ ಎಲ್ಲರಿಗೂ ಗೌರವ-ಅಭಿಮಾನಗಳಿವೆ. ಕಾಂಗ್ರೆಸ್ ಪಕ್ಷದಲ್ಲೇ ಆ ಸಂಸ್ಕೃತಿಗೆ ಹೊರತಾದ ಶಾಂತ ಸ್ವಭಾವದ, ಸರಳ ಜೀವನ ಶೈಲಿಯ, ಚಿಂತನ ಶೀಲ ಅಪರೂಪದ ವ್ಯಕ್ತಿ ಎಂಬ ಅಭಿಪ್ರಾಯವಿದೆ. ಉತ್ತಮ ಅರ್ಥಶಾಸ್ತ್ರಜ್ಞರಾಗಿರುವ ಅವರು ಬಡತನ, ನಿರುದ್ಯೋಗದಂತಹ ಸಮಸ್ಯೆಗಳಿಂದ ತತ್ತರಿಸುತ್ತಿರುವ ಭಾರತ ದೇಶದ ಸಂಕಷ್ಟಕ್ಕೆ ಉತ್ತಮ ಪರಿಹಾರ ಕಂಡುಕೊಳ್ಳಬಹುದೆಂಬ ಭರವಸೆ ಮೂಡಿದೆ. ದೀರ್ಘಕಾಲದ ರಾಜಕೀಯ ಅನುಭವದ, ಆಡಳಿತದಲ್ಲಿ ದಕ್ಷತೆ ಹೊಂದಿದ, ಸಮತೋಲನದ ಮನಸ್ಸಿನ, ಮಾನವೀಯ ಹೃದಯದ ನೇತಾರ ಎಂಬ ಚಿತ್ರ ದೇಶದ ಜನರ ಮನಸ್ಸಿನಲ್ಲಿ ಮೂಡಿದ್ದು ಸ್ವದೇಶದಲ್ಲಿ ಮಾತ್ರವಲ್ಲ ವಿದೇಶಗಳಲ್ಲೂ ಮನಮೋಹನ ಸಿಂಗ್ ಬಗ್ಗೆ ತುಂಬು ಗೌರವವಿದೆ. ಅವರ ನೇತಾರತ್ವದಲ್ಲಿ ದೇಶವು ಈಗಿನ ಸಂಕಷ್ಟ ಪರಿಸ್ಥಿತಿಯಿಂದ ಹೊರ ಬರುವಂತಾಗಲೆಂದು ಹಾರೈಸೋಣ.

ಸೋನಿಯಾ ಗಾಂಧಿಯವರ ಸ್ವಯಂ ಪ್ರೇರಣೆಯ ನಿರಾಕರಣೆ

ಶ್ರೀಮತಿ ಸೋನಿಯಾ ಗಾಂಧಿ ಪ್ರಧಾನಿ ಪಟ್ಟದ ಅಂತಿಮ ಮೆಟ್ಟಿಲಲ್ಲಿ ನಿಂತಿದ್ದು, ರಾಷ್ಟ್ರಪತಿಯವರನ್ನು ಕಂಡು ಬಂದಿದ್ದರು. ಆದರೆ ಇದ್ದಕ್ಕಿದ್ದಂತೆಯೇ ದಿ. 18-5-2004ರಂದು ತಾವು ಪ್ರಧಾನಿಯಾಗಲು ಬಯಸುವುದಿಲ್ಲ, ಬೇರೆಯವರಿಗೆ ಆ ಅವಕಾಶ ತೆರೆದಿದೆ ಎಂದು ಘೋಷಿಸಿದರು. ದಿ. 19ರ ಪತ್ರಿಕೆ ಓದುತ್ತಲೇ ಸಮಾಧಾನದ ಉಸಿರು ಹೊರಹೊಮ್ಮಿತು. ''ಸೋನಿಯಾ ಸೂಕ್ತ ನಿರ್ಧಾರ ಕೈಗೊಂಡರು. ನಮ್ಮನ್ನೂ ಅನೇಕ ಸಮಸ್ಯೆಗಳಿಂದ ಪಾರು ಮಾಡಿದರು'' ಎನ್ನಿಸಿ ಸಮಾಧಾನವಾಯಿತು. ಈ ನಿರಾಕರಣಕ್ಕೆ ಮುಖ್ಯ ಕಾರಣ ಮಕ್ಕಳಾದ ಪ್ರಿಯಾಂಕ ಮತ್ತು ರಾಹುಲ ಅವರ ಕಳಕಳಿಯ ಒತ್ತಾಯ. ಸೋನಿಯಾ ಪ್ರಧಾನಿ ಪಟ್ಟದ ಬಳಿಗೆ ಬಂದು ನಿಲ್ಲುತ್ತಲೇ ಸಿಡಿದೆದ್ದ ಬಿ.ಜೆ.ಪಿ. ಮತ್ತು ಅದರ ಸಹೋದರ ಸಂಸ್ಥೆಗಳು ಪ್ರತಿಭಟನಾತ್ಮಕ ಹೇಳಿಕೆ ನೀಡಿ, ದೇಶ ವ್ಯಾಪಿ ಚಳುವಳಿ ಮಾಡುವ ನಿರ್ಧಾರ ಪ್ರಕಟಿಸಿದವು. ಪೂರ್ಣ ಬಹುಮತವಿಲ್ಲದ ಕಾಂಗ್ರೆಸ್ ಮಿತ್ರ ಪಕ್ಷಗಳೊಡನೆ ಆಡಳಿತ ಸೂತ್ರ ವಹಿಸಿಕೊಳ್ಳಬೇಕು. ಅದರಲ್ಲೂ ಕೆಲವು ಪಕ್ಷಗಳು ಸರ್ಕಾರ ರಚನೆಯಲ್ಲಿ ಪಾಲ್ಗೊಳ್ಳಲು ಮೀನಮೇಷ ಎಣಿಸುತ್ತಿವೆ. ದೇಶದ ತುಂಬಾ ವಿರೋಧದ ಅಲೆ ಎಳಿಸಲು ಬಿ.ಜೆ.ಪಿ. ಪ್ರಯತ್ನಿಸಬಹುದು, ಮಾತ್ರವಲ್ಲ, ''ಜೀವಭಯವನ್ನು ತಂದೊಡ್ಡಬಹುದು. ಅಪ್ಪನನ್ನು ಕಳಕೊಂಡಂತೆ ಅಮ್ಮನನ್ನು ಕಳೆದುಕೊಳ್ಳಲು ನಾವು ಸಿದ್ಧರಿಲ್ಲ'' ಎಂಬ ಮಕ್ಕಳ ಕರುಳ ಕರೆ ಸೋನಿಯಾರನ್ನು ಹಿಂಜರಿಯುವಂತೆ ಮಾಡಿತು ಎಂದು ಶ್ರೀ ಜ್ಯೋತಿ ಬಸು ಹೇಳಿದ್ದಾರೆ.

ಏನೇ ಕಾರಣ ಇರಲಿ. ಸೋನಿಯಾ ಗಾಂಧಿ ಒಳ್ಳೆಯ ನಿರ್ಧಾರವನ್ನು ಸೂಕ್ತ ಸಮಯದಲ್ಲಿ ತೆಗೆದುಕೊಂಡು, ತಾವೇ ಕಿಂಗ್ ಆಗುವುದಕ್ಕಿಂತ ಈಗ ಕಿಂಗ್ ಮೇಕರ್ ಆಗಿ ಇನ್ನು ಹೆಚ್ಚಿನ ಶಕ್ತಿ ಮತ್ತು ಅಭಿಮಾನ ಪಡೆದುಕೊಂಡರು, ಜೊತೆಗೆ ನಮ್ಮಂತಹವರಿಗೂ ಸಮಾಧಾನ ನೀಡಿ ಸ್ವಲ್ಪ ವಿರಾಮಕೊಟ್ಟರು. ನನಗಂತೂ ವಿಪರೀತ ತಳಮಳ ಆರಂಭವಾಗಿತ್ತು. ಇಡೀ ಜಗತ್ತಿನಲ್ಲಿ ಭಾರತ ದೇಶ ತನ್ನದೇ ಆದ ಹೆಸರು, ಗೌರವ ಪಡೆದುಕೊಂಡಿದ್ದು ಇಂಥ ಒಂದು ದೇಶದಲ್ಲಿ ಹುಟ್ಟಿನಿಂದ ಭಾರತೀಯರಾದ ಒಬ್ಬ ಮಹಿಳೆ ಅಥವಾ ಪುರುಷ ಪ್ರಧಾನಿಯಂತಹ ಉನ್ನತ ಹುದ್ದೆ ಸ್ವೀಕರಿಸುವವರು ಇಲ್ಲದೆ ಹೋಗಿ ಇಟಲಿ ಮೂಲದ ಓರ್ವ ಮಹಿಳೆಯನ್ನು ಪ್ರಧಾನಿ ಹುದ್ದೆಗೆ ಏರಿಸುವುದು ಎಷ್ಟು ಅವಮಾನಕಾರಕ! ಇದು ಈ ದೇಶದ, ಜನಾಂಗದ ನಿರ್ವೀರ್ಯತ್ವವನ್ನು ಎತ್ತಿತೋರಿಸುವುದು ಮಾತ್ರವೇ ಅಲ್ಲದೆ Indians are unable to rule themselves ಎಂಬ ಚರ್ಚಿಲ್ ಅವರ ಕುಹಕ ನುಡಿ ಮತ್ತೊಮ್ಮೆ ಸಾಬೀತಾಗುವುದಲ್ಲವೇ ಎಂಬ ಚಿಂತೆ. ಕಾಂಗ್ರೆಸ್ಸಿಗರಲ್ಲಿರುವ ವ್ಯಕ್ತಿಪೂಜೆ, ದಾಸ್ಯ ಮನೋಭಾವ ಸೋನಿಯಾ ಅವರನ್ನು ದೇವತೆಯ ಮಟ್ಟಕ್ಕೆ ಏರಿಸುವಷ್ಟು ಮುಂದೆ ಹೋಗಿದೆ. ಅವರಲ್ಲಿ ಏಕೆ ಸ್ವಾಭಿಮಾನವಿಲ್ಲ ಎಂಬ ಚಿಂತೆ ಇಂದು ಕಾಡುತ್ತಲಿದೆ. ರಾಜಕೀಯ ಕ್ಷೇತ್ರದಲ್ಲಿ ದೀರ್ಘವಾದ ಅನುಭವ, ಮುತ್ಸದ್ದಿತನ ಇರುವ ಶ್ರೀ ಮನಮೋಹನ ಸಿಂಗ್, ಪ್ರಣವ ಮುಖರ್ಜಿ, ನರಸಿಂಹರಾವ್ ಮುಂತಾದ ಹಿರಿಯರನ್ನು ನಗಣ್ಯರನ್ನಾಗಿ ಕಂಡು ವಿದೇಶಿ ಮೂಲದ ವ್ಯಕ್ತಿಯು, ಅನನುಭವಿಯೂ, ಭಾರತೀಯ

ದೇಶ-ಭಾಷೆ-ಸಂಸ್ಕೃತಿಯ ಒಳಹೊರಗು ಪರಿಚಯವಿಲ್ಲದ ವ್ಯಕ್ತಿಯನ್ನು ದೇಶದ ಅತ್ಯುನ್ನತ ಹುದ್ದೆಗೆ ಏರಿಸಲು ಏಕಿಷ್ಟು ತವಕ ? ಈ ತವಕದ ಹಿಂದೆ ಅಜ್ಞಾನವಿದೆಯೆ ಅಥವಾ ಸ್ವಾರ್ಥ ಉಂಟೆ ?

ಸಾಮಾನ್ಯ ಜನರು ಮಾತ್ರವಲ್ಲ ಕೆಲವು ವಿದ್ಯಾವಂತರು, ಬುದ್ಧಿ ಜೀವಿಗಳು ಸಹ ಸೋನಿಯಾ ಗಾಂಧಿ ಮನೆಗೆ (ದೇಶಕ್ಕೆ) ಸೊಸೆಯಾಗಿ ಬಂದವಳು. ಸೊಸೆಗೆ ಮನೆತನದ ವಿಷಯದಲ್ಲಿ ಹಕ್ಕುಗಳಿರುವಂತೆ ಸೋನಿಯಾಗೆ ಏಕಿರಬಾರದೆಂದೆನ್ನುತ್ತಾರೆ. Blood is thicker than water ಎಂಬ ಒಂದು ಇಂಗ್ಲಿಷ್ ಗಾದೆ ಇದೆ. ರಕ್ತವು ನೀರಿಗಿಂತಲೂ ದಪ್ಪ. ಬೇರೊಂದು ದೇಶದಲ್ಲಿ ಹುಟ್ಟಿ ಮದುವೆಯ ಕಾರಣದಿಂದ ಇಲ್ಲಿಯ ಪೌರತ್ವ ಪಡೆದವರು (ಇಲ್ಲಿಯೇ ಹುಟ್ಟಿದವರು ಮೊದಲನೆ ದರ್ಜೆಯ ನಾಗರಿಕರಾದರೆ) ಎರಡನೆಯ ದರ್ಜೆಯ ನಾಗರಿಕರು. ಸೋನಿಯಾ ಅವರ ಸಂಬಂಧ ಈ ದೇಶದೊಡನೆ ಅನ್ನ-ನೀರಿನ ಸಂಬಂಧ, ರಕ್ತಸಂಬಂಧ ಐರೋಪ್ಯ ಜನಾಂಗದೊಡನೆ. ಅವರು ಈ ದೇಶಕ್ಕೆ ಭಾರತದ ಮೇಲಿನ ಪ್ರೀತಿಯಿಂದ, ಅಭಿಮಾನದಿಂದ ಬರಲಿಲ್ಲ; ರಾಜೀವ್ ಅವರನ್ನು ಪ್ರೀತಿಸಿ, ವಿವಾಹವಾಗಿ ಬಂದರು. ಬಂದ ತಕ್ಷಣ ಇಲ್ಲಿಯ ಪೌರತ್ವ ಪಡೆಯಲಿಲ್ಲ. ಅಧಿಕೃತವಾಗಿ ನಾಗರಿಕತ್ವ ಪಡೆಯದೆ ಒಳಗಿಂದೊಳಗೆ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಸೇರಿಸಿಕೊಂಡು ಟೀಕೆಗೆ ಒಳಗಾಗಿದ್ದರು. ನಂತರ ಪೌರತ್ವ ಪಡೆದರು ಅದರಲ್ಲಿ ಸಾಕಷ್ಟು ದೌರ್ಬಲ್ಯಗಳಿವೆ. ರಾಜೀವರು ಪ್ರಧಾನಿಯಾಗಿದ್ದಾಗ ಸಾಕಷ್ಟು ಹಸ್ತಕ್ಷೇಪ ಮಾಡುತ್ತ ಕಟ್ರೋಚಿಯಂತಹ ಇಟಲಿಯ ದಲ್ಲಾಳಿಯನ್ನು ಮುಂಚೂಣಿಗೆ ತಂದರು. ಕ್ರೈಸ್ತ ಮಿಶನರಿ ಸಂಸ್ಥೆಗಳು ಸಾಕಷ್ಟು ಬೆಳೆಯುವಂತೆ ಪ್ರೋತ್ಸಾಹಿಸಿದ್ದಾರೆ. ಇಟಲಿ ಮೂಲದ ಸೋನಿಯಾ ಪ್ರಧಾನಿ ಹುದ್ದೆಯ ಹೊಸ್ತಿಲಲ್ಲಿ ನಿಂತಿದ್ದಾಗ ಆ ದೇಶದ ಎಷ್ಟೋ ಜನ ಸಂಭ್ರಮಿಸಿದ್ದಲ್ಲದೆ, ''ಇಟಲಿಯ ಮಹಿಳೆ ಭಾರತದಲ್ಲಿ ಅತ್ಯುನ್ನತ ಹುದ್ದೆ ಸ್ವೀಕರಿಸಲಿದ್ದಾರೆ. ಆದರೆ ಭಾರತೀಯ ಮೂಲದವರು ಈ ಇಟಲಿ ದೇಶದಲ್ಲಿ ಅಂಥದೊಂದು ಸ್ಥಾನ ಪಡೆಯುವುದು ಅಸೂಹ್ಯ'' ಎಂದು ಉದ್ಗರಿಸಿದರಂತೆ. ''ಬೀಸುವ ದೊಣ್ಣೆ ತಪ್ಪಿದರೆ ನೂರು ವರ್ಷ ಆಯುಷ್ಯ'' ಎಂಬ ಗಾದೆ ಇದೆ. ಸದ್ಯ, ತಾತ್ಕಾಲಿಕವಾಗಿಯಾದರೂ ಒಂದು ವಿಪತ್ತಿನ ಕಾರ್ಮೋಡ ಸರಿದಿದೆ. ಆಕೆಗೆ ಮತ್ತೆ ಗಾದಿಯ ಆಸೆ ಮರುಕಳಿಸಲೂ ಬಹುದು. ಎಚ್ಚರಿಕೆಯಿಂದಿರುವುದು ಅಗತ್ಯ. ಆ ಕಾವಲು ಕೆಲಸವನ್ನು ಬಿ.ಜೆ.ಪಿ. ಮಾಡುವುದರಿಂದ ಇನ್ನಿತರರಿಗೆ ನಿಶ್ಚಿಂತೆ !!

- ಮನಮೋಹನ ಸಿಂಗ್ ಅವರು ಪ್ರಧಾನಿಯಾದುದರಿಂದ ದೇಶದ ಸುರಕ್ಷಿತತೆಯ ಬಗ್ಗೆ ಆತಂಕ ಪಡುವ ಸನ್ನಿವೇಶ ತಪ್ಪಿಹೋಗಿ ಬಹುಪಾಲು ಭಾರತೀಯರ ಮನಸ್ಸು ನಿರುಮ್ಮಳವಾಯಿತು. ಕೆಲವರು ಅನ್ನಬಹುದು. ''ಮನಮೋಹನ ಸಿಂಗ್ ಸೋನಿಯಾ ಅವರು ಕುಣಿಸುವ ಸೂತ್ರದ ಬೊಂಬೆ. ಅವರ ಮೂಲಕ ಸೋನಿಯಾ, ಒಂದು ವೇಳೆ ದುರಾಲೋಚನೆ ಇದ್ದರೆ, ಅದನ್ನು ಸಾಕಾರಗೊಳಿಸಬಹುದು'' ಎಂದು. ನಿಜ, ಸೋನಿಯಾ ಅವರ ಅಂತರಂಗದಲ್ಲಿ ಯಾವುದು ಮಾತೃಭೂಮಿಯ ಸ್ಥಾನವನ್ನು ಪಡೆದುಕೊಂಡಿದೆಯೋ ದೇವನೊಬ್ಬನೇ ಬಲ್ಲ. ಅವರ ಧರ್ಮ ಭೂಮಿ ಮಾತ್ರ ವ್ಯಾಟಿಕನ್ ಇರುವ ಇಟಲಿ. ಆದರೆ ಮನಮೋಹನ ಸಿಂಗ್ ಅವರ ಅಂತರಂಗದಲ್ಲಿ ಭಾರತವು ತಮ್ಮ ಮಾತೃಭೂಮಿ ಮತ್ತು ಧರ್ಮಭೂಮಿ ಎರಡೂ ಆಗಿರುವುದರಿಂದ ಎಂಥಾ

ಪ್ರಸಂಗದಲ್ಲಿಯೂ ವಿಶ್ವಾಸದ್ರೋಹದಿಂದ ಉಂಟಾಗುವ ಅಭದ್ರತೆಯನ್ನು ನಿರೀಕ್ಷಿಸಲು ಸಾಧ್ಯವಿಲ್ಲ.

ಮನಮೋಹನ ಸಿಂಗ್ ಪ್ರಧಾನಿಯಾದ ಮೇಲೆ ಅವರ ವೈಯಕ್ತಿಕ, ಕೌಟುಂಬಿಕ ವಿವರ, ವಿದ್ಯಾರ್ಹತೆ, ಅನುಭವ, ಪರಿಣತಿ ಎಲ್ಲ ಪುಂಖಾನುಪುಂಖವಾಗಿ ಪತ್ರಿಕೆಗಳಲ್ಲಿ ಬರುತ್ತಲಿವೆ. ಇಂಥ ಒಬ್ಬ ಸಮರ್ಥ ಮುತ್ಸದ್ಧಿ ನಾಯಕನನ್ನು ಇರಿಸಿಕೊಂಡು, ಅವರನ್ನು ಮುಂದಿಟ್ಟುಕೊಂಡು ಮುನ್ನಡೆಯದ ಕಾಂಗ್ರೆಸ್ ಏಕೆ ಸೋನಿಯಾ ದಾಸ್ಯವನ್ನು ಪ್ರದರ್ಶಿಸಿತು ಎಂಬುದೇ ಅರ್ಥವಾಗದ ಸಂಗತಿ. ಏನೇ ಆಗಲಿ, ಅಂತೂ ಕಥೆ ಸುಖಾಂತ್ಯಗೊಂಡಿದೆ. ಈ ದಿಶೆಯಲ್ಲಿ ಅತ್ಯಂತ ಸೂಕ್ತ ಸಮಯದಲ್ಲಿ ತೀವ್ರ ಪ್ರತಿಭಟನೆ ನಡೆಸಿ ಸೋನಿಯಾರು ಸ್ವಯಂಪ್ರೇರಿತರಾಗಿ ಪ್ರಧಾನಿ ಹುದ್ದೆಯಿಂದ ಹಿಂಜರಿಯುವ ವಾತಾವರಣ ಸೃಷ್ಟಿಸಿದ ದೇಶಪ್ರೇಮಿ ಬಿ.ಜೆ.ಪಿ.ಯವರಿಗೆ ಧನ್ಯವಾದಗಳು.

☹ ಸಮಸ್ಯೆ? – ಸಮಾಧಾನ !☺

– ವಚನ ಸುಧಾ, ಶಿಕ್ಷಕಿ, ಬೀದರ್

? ಶಿವಮೂರ್ತಿ ಸ್ವಾಮಿಗಳು ಏನೇನನ್ನೋ ಹೇಳತೊಡಗಿ, ಬಸವ ಧರ್ಮೀಯರಿಗೆ ಮಾಂಸಾಹಾರ ನಿರ್ಬಂಧವಿಲ್ಲ ಎಂದೂ ಬಿಟ್ಟಿದ್ದಾರಲ್ಲ, ಎಂಥಾ ವಿಚಿತ್ರ ?!

★ ಅವರು ವಚನ ಸಾಹಿತ್ಯವನ್ನು ಚೆನ್ನಾಗಿ (ಅಪ) ಅರ್ಥ ಮಾಡುತ್ತಾರೆ. ನುಡಿದಂತೆ ನಡೆ, ನಡೆದಂತೆ ನುಡಿ ಎಂಬುದು ವಚನ ಸಾಹಿತ್ಯದ ಸಾರ. ಆದರೆ ಹೇಗೆ ನುಡಿಯಬೇಕು? ಧರ್ಮಪಿತರು ಹೇಳುತ್ತಾರೆ, "ಭಕ್ತಿ ಸುಭಾಷೆಯ ನುಡಿಯ ನುಡಿವೆ; ನುಡಿದಂತೆ ನಡೆವೆ". ಆದರೆ ಇದನ್ನೆಲ್ಲ ಬಿಟ್ಟು ಶ್ರೀಗಳು ಆಂತರಿಕವಾಗಿ ಹೇಗೆ ನಡೆದುಕೊಳ್ಳುತ್ತಿದ್ದಾರೋ ಹಾಗೆ ಹೊರಗೆ (ವಿಪರೀತವಾಗಿ) ನುಡಿಯುತ್ತಿರುವಂತೆ ತೋರುತ್ತಿದೆ.

– ಸುಮಂಗಲಾ ಪಾಟೀಲ್, ಹಾವೇರಿ

? ಧಾರವಾಡದ ಮತದಾರರನ್ನು ಅಪ್ರಬುದ್ಧರು ಎಂದು ತಾವು ಕರೆದುದಕ್ಕೆ ಮತದಾರರ ಆಕ್ರೋಶಕ್ಕೆ ತಾವು ಗುರಿಯಾಗಿ, ಸೋತಿರಿ ಎಂದು ದಿ. 15-5-04ರ ಕನ್ನಡ ಪ್ರಭಾದಲ್ಲಿ ಬರೆದಿದ್ದಾರೆ. ಇದು ಸತ್ಯವೆ ?

★ ಪತ್ರಿಕೆಗಳು ಸಾಮಾನ್ಯವಾಗಿ ತಮ್ಮ ಪ್ರಸಾರ ಹೆಚ್ಚಿಸಿಕೊಳ್ಳಲು, ಆಕರ್ಷಣೆ ಉಳಿಸಿಕೊಳ್ಳಲು ವಿವಾದಗಳನ್ನು ಸೃಷ್ಟಿಸುತ್ತವೆ. "ಬಸವನೆಂದರೆ ಪಾಪ ದೆಸೆಗೆಟ್ಟು ಹೋಗುವುದು; ವಶವರ್ತಿಯಹುದು ಪುಣ್ಯ" ಎಂದು ಕವಿ ಬರೆದುದನ್ನು "ಬಸವನೆಂದರೆ ಪಾಪ, ದೆಸೆಗೆಟ್ಟು ಹೋಗುವುದು ಪುಣ್ಯ" ಎಂದು ಪ್ರಚಾರ ಮಾಡಿದರೆ ಏನು ಮಾಡಲು ಸಾಧ್ಯ ?

ಚುನಾವಣೆಯು ದಿ. 26-4-2004 ರಂದು ಮುಗಿದಿತ್ತು. ಕಲ್ಯಾಣ ಪರ್ವದ ಬಗ್ಗೆ ಪ್ರಚಾರವನ್ನೇ ಕೊಟ್ಟಿರಲಿಲ್ಲವಾದ್ದರಿಂದ ದಿ. 27-4-2004 ರಂದು ಕಲ್ಯಾಣ ಪರ್ವ ಕುರಿತ ಪತ್ರಿಕಾಗೋಷ್ಠಿಯಲ್ಲಿ ಬೇರೊಂದು ಪ್ರಶ್ನೆಯ ಹಿನ್ನೆಲೆಯಲ್ಲಿ ನಾನು ಹಾಗೆ ಉತ್ತರಿಸಿದ್ದೆ.

– ಸೋಮಶೇಖರಪ್ಪ, ಎಳನಡು

? ಧರ್ಮಗುರು ಬಸವಣ್ಣನವರ ಈ ವಚನವನ್ನು ತೆಗೆದುಕೊಂಡು ಪ್ರಜಾವಾಣಿ ದಿ. 13-5-2004ರ ಪತ್ರಿಕೆಯಲ್ಲಿ, ಸೂಫಿ ಬಿಜಾಪುರಿ ಎನ್ನುವವರು ಆಹಾರವು ಖಾಸಗಿ ವಿಷಯವಾಗಿದೆ. ಆದ್ದರಿಂದ ಆಹಾರ ಸಂಸ್ಕೃತಿಯನ್ನು ಯಾರೂ ಪ್ರಶ್ನಿಸುವಂತಿಲ್ಲ ಎಂದು ಹೇಳಿ ಅಂತೆಯೆ ಬಸವಣ್ಣನವರು "ಎಡದ ಕೈಯಲಿ ಕತ್ತಿ, ಬಲದ ಕೈಯಲ್ಲಿ ಮಾಂಸ, ಬಾಯಲಿ ಸುರೆಯ ಗಡಿಗೆ, ಕೊರಳಲಿ ದೇವರಿರಲು ಅವರ ಲಿಂಗನೆಂಬೆ, ಸಂಗನೆಂಬೆ, ಅವರ ಮುಖಲಿಂಗಿಗಳೆಂಬೆನು" ಎಂದು ಹೇಳಿದ್ದಾರೆ. ಈ ವಚನ ನಮ್ಮನ್ನು ಗೊಂದಲಕ್ಕೆ ಕೆಡವಿದೆ. ಇದರರ್ಥವೇನು ?

★ ವಚನ ಸಾಹಿತ್ಯವನ್ನು ಭಾಷಣದಲ್ಲಿ, ಬರಹದಲ್ಲಿ ಬಳಸಿಕೊಳ್ಳುತ್ತ ಜನರಿಂದ ಮೆಚ್ಚುಗೆಗಳಿಸಿಕೊಳ್ಳುವವರಲ್ಲಿ ಕೆಲವರು ತಮ್ಮ ಆಲೋಚನೆಗೆ ಪೂರಕವಾದ ವಚನಗಳನ್ನು ಮಾತ್ರ ಬಳಸಿಕೊಳ್ಳಲು ಎಳಸುತ್ತಾರೆ. ಒಂದು ವಾಹನದ ಬಿಡಿಭಾಗ ಇರುವುದು ಎಂದುಕೊಳ್ಳೋಣ. ಆ ಬಿಡಿಭಾಗ ಎಲ್ಲಿ ಕೂರಬೇಕೋ ಅಲ್ಲಿ ಕೂತಾಗ ಅದರ ಸಾರ್ಥಕತೆ ಸಾಧ್ಯ. ಪ್ರತಿ ವಚನವನ್ನೂ ಓದುವಾಗ ಅದು ಯಾವ ಸಂದರ್ಭದಲ್ಲಿ ಯಾರು ಯಾರಿಗೆ ಹೇಳಿರಬಹುದು ಎಂಬುದನ್ನು ಚಿಂತಿಸಿ ಅರ್ಥಮಾಡಿಕೊಳ್ಳಬೇಕು.

ಚನ್ನಬಸವಣ್ಣ, ಮಡಿವಾಳ ಮಾಚಿದೇವರು, ಅಂಬಿಗರ ಚೌಡಯ್ಯ ಮುಂತಾದ ತತ್ತ್ವನಿಷ್ಠುರರು ದೀಕ್ಷೆ ತೆಗೆದುಕೊಳ್ಳುತ್ತಲೇ ದೀಕ್ಷಿತರು ಸಂಪೂರ್ಣ ಬದಲಾವಣೆ ಆಗಬೇಕು; ಇಲ್ಲದಿದ್ದರೆ ಅವರನ್ನು ಬಹಿಷ್ಕರಿಸಬೇಕು ಎಂಬ ಆಲೋಚನೆ ಹೊಂದಿದವರು. ಆದರೆ ಬಸವಣ್ಣನವರದು ಮಾತೃಹೃದಯ, ಹೆಂಗರುಳು. ಅತ್ಯಂತ ದೀನ ಮತ್ತು ಹೀನ ಸ್ಥಿತಿಯಲ್ಲಿದ್ದ ಕೆಲವರು ಉತ್ತಮ ಹಂಬಲದಿಂದ ದೀಕ್ಷೆಪಡೆದು, ಲಿಂಗಧಾರಿಗಳಾದರೂ ಹಿಂದಿನ ಸಂಸ್ಕಾರಗಳನ್ನು ಬಿಡಲಾರದೆ ಒದ್ದಾಡುತ್ತಾರೆ. ಅವರ ಬಗ್ಗೆ ಮರುಕದಿಂದ ಬಸವಣ್ಣನವರು ಹೇಳುತ್ತಾರೆ, "ಇರಲಿ, ಇನ್ನಷ್ಟು ಸಮಯಕೊಡೋಣ. ಅವನ ದೌರ್ಬಲ್ಯ ನೋಡಿ ತಕ್ಷಣ ಹೊರಗೆ ಹಾಕುವುದೇನು ದೊಡ್ಡ ವಿಷಯವಲ್ಲ. ಕೊರಳಲ್ಲಿ ದೇವರು ಇದೆ. ಅವನು ಶರಣರ ಸಂಗದಲ್ಲಿ ಒಡನಾಡಲಿ, ಖಂಡಿತಾ ಬದಲಾಗುತ್ತಾನೆ. ಕೊಲ್ಲುವಿಕೆ, ಮಾಂಸಾಹಾರ, ಮದ್ಯಪಾನಗಳಲ್ಲೇ ಬದುಕನ್ನು ಕಿಲುಬುಗಟ್ಟಿಸಿಕೊಂಡ ಅವನನ್ನು ಒಮ್ಮೆಗೇ ಶರಣ ಪರೀಕ್ಷೆಯಲ್ಲಿ ವಿಫಲಗೊಳಿಸುವುದು ಬೇಡ" ಎನ್ನುತ್ತಾರೆ. ಇದು ಮದ್ಯಪಾನ, ಮಾಂಸಾಹಾರಕ್ಕೆ ಕೊಟ್ಟ ಅಧಿಕೃತ ಪರವಾನಗಿ ಅಲ್ಲ, ತಿದ್ದಿಕೊಂಡು, ಸುಧಾರಿಕೊಳ್ಳಲು ಕೊಟ್ಟ ಸಮಯಾವಕಾಶ ಮಾತ್ರ ! ಮಾಂಸಾಹಾರಿ ಧರ್ಮೀಯನಿಗೆ ಸಸ್ಯಾಹಾರ ವೈಯಕ್ತಿಕ ಆಯ್ಕೆ ; ಸಸ್ಯಾಹಾರಿ ಧರ್ಮೀಯನಿಗೆ ಸಸ್ಯಾಹಾರ ಕಡ್ಡಾಯ ನಿರ್ಬಂಧ.

– ಆರ್.ಜಿ. ಶೆಟಗಾರ, ಗುಲಬರ್ಗಾ

? ಗುಲಬರ್ಗಾದ ಜಂಗಮಶ್ರೀ ಎಂಬ ಓರ್ವರ ಪತ್ರವು ಪ್ರಜಾವಾಣಿಯ ವಾಚಕರ ವಾಣಿ

(18-5-2004)ಯಲ್ಲಿ ಮುದ್ರಣಗೊಂಡಿದೆ.

ಮಾನ್ಯರೆ,

ರಾಮಕೃಷ್ಣಪರಮಹಂಸರು ಗುಡುಗುಡಿ (ಹುಕ್ಕಾ) ಸೇದುತ್ತಿದ್ದರು. ಸ್ವಾಮಿ ವಿವೇಕಾನಂದರು ಜರ್ದಾ ತಿನ್ನುತ್ತಿದ್ದರು. ಅಷ್ಟೇ ಅಲ್ಲ ಇಂಗ್ಲೆಂಡಿನಲ್ಲಿ ಇರುತ್ತಿದ್ದಾಗ ತಮ್ಮ ಆರೋಗ್ಯ ಸಂರಕ್ಷಣೆಗಾಗಿ ಒಣ ಮಾಂಸ ತಿನ್ನುತ್ತಿದ್ದುದಾಗಿ ಆಳಸಿಂಗ್ ಪೆರುಮಾಳರಿಗೆ ಬರೆದ ಒಂದು ಪತ್ರದಿಂದ ತಿಳಿದುಬರುತ್ತದೆ. ಗುರು ಗೋವಿಂದಭಟ್ಟರು ಹಾಗೂ ಶಿಶುನಾಳ ಶರೀಫರು ಕೂಡಿಯೇ ಹೆಂಡ ಕುಡಿಯುತ್ತಿದ್ದರು. ಹೆಂಡದ ಮಾರಯ್ಯನೆಂಬ ಶರಣನೊಬ್ಬ ಬಸವಣ್ಣನ ಕಲ್ಯಾಣದಲ್ಲಿದ್ದ. ಮುಸ್ಲಿಂ ಹಾಗೂ ಕ್ರೈಸ್ತರೆಲ್ಲ ಮಾಂಸಾಹಾರಿಗಳಾಗಿದ್ದಾರೆ. ಧರ್ಮವೆಂದರೆ ವಚನ, ತತ್ವ, ಸಿದ್ಧಾಂತಗಳಲ್ಲ, ಸಮುದಾಯ, ಸಮಾಜ ಅಥವಾ ಜನಾಂಗವಲ್ಲ, ಧರ್ಮವೆಂಬುದು ಜೀವಾತ್ಮ ಪರಮಾತ್ಮರ ಸಂಬಂಧ. ಲಿಂಗ ಅಂಗಗಳೆರಡು ಬೆರೆತು ಒಂದಾಗುವ ಪ್ರಕ್ರಿಯೆ. ಇದನ್ನೆ ಐಕ್ಯಸ್ಥಲವೆನ್ನುತ್ತದೆ ವೀರಶೈವ ಸಿದ್ಧಾಂತ. ಧರ್ಮ ಒಡಕಿನಲ್ಲಿಲ್ಲ, ಬೆರೆತು ಒಂದಾಗುವುದರಲ್ಲಿದೆ.

ಈ ಬಗ್ಗೆ ತಮ್ಮ ಅಭಿಪ್ರಾಯವೇನು ?

★ ನಮ್ಮ ದೇಶದಲ್ಲಿ ಧರ್ಮದ ಹೆಸರಿನಲ್ಲಿ ಪ್ರಾಣಬಲಿ, ನರಬಲಿ, ಮಾಂಸಾಹಾರ, ಮದ್ಯಪಾನ, ಅಫೀಮು ಸೇವನೆ, ಅನೈತಿಕ ಚಟುವಟಿಕೆ (ಕಾಪಾಲಿಕರಲ್ಲಿ) ನಡೆಯುತ್ತವೆ. ಅವೆಲ್ಲ ಧರ್ಮ ಸಮ್ಮತ ಎಂದು ಭಾವಿಸಬಾರದು. ಮತ್ತು ಕೆಲವರು ಜ್ಞಾನಿಗಳು ಎನ್ನಿಸಿಕೊಂಡವರು ಅಂಥ ಕೊಳಕು ಆಚರಣೆ ಮಾಡುತ್ತಿದ್ದರೆ ಅದು ಅವರ ದೌರ್ಬಲ್ಯ ಎಂದು ಕಡೆಗಣಿಸಿ ಅವರು ಹೇಳಿದ ಮಾತಿನಲ್ಲಿ ಒಳ್ಳೆಯದನ್ನು ಆರಿಸಿಕೊಳ್ಳಬೇಕು. ಆದರೆ ಶರಣನು ಮಾತ್ರ ಅಂತರಂಗ, ಬಹಿರಂಗ ಎರಡರಲ್ಲೂ ಶುದ್ಧನಾಗಿರಬೇಕೆಂದು ಧರ್ಮ ಗುರು ಬಸವಣ್ಣನವರು ಆದೇಶಿಸುತ್ತಾರೆ. ಹೀಗಾಗಿ ಅನ್ಯ ಸಂತರು ಬಸವ ತತ್ತ್ವಾನುಯಾಯಿಗೆ ಪೂರ್ಣವಾಗಿ ಅನುಕರಣೀಯರಲ್ಲ.

ಈ ಪುಣ್ಯಾತ್ಮ ಜಂಗಮಶ್ರೀಯಲ್ಲ ಮಂಗಶ್ರೀ ಎಂಬ ಅನಾಚಾರಿ ಇದ್ದಂತೆ ತೋರುತ್ತದೆ. ಧರ್ಮವೆಂಬುದು ಜೀವಾತ್ಮ ಪರಮಾತ್ಮರ ಸಂಬಂಧ, ಲಿಂಗ ಅಂಗಗಳೆರಡು ಬೆರೆತು ಒಂದಾಗುವ ಪ್ರಕ್ರಿಯೆ ಎಂದು ವ್ಯಾಖ್ಯಾನಿಸಿದ್ದಾರೆ. ಶುದ್ಧ ಚೇತನವಾದ ಲಿಂಗದೊಡನೆ ಅಶುದ್ಧ ಅಂಗ ಒಂದಾಗಬೇಕಾದರೆ ತ್ರೈಮಲಗಳು ಅಳಿಯಬೇಕು. ಸ್ಥೂಲ ಶರೀರದ ಕಾರ್ಮಿಕ ಮಲ, ಸೂಕ್ಷ್ಮ ಶರೀರದ ಮಾಯಾ ಮಲ, ಆಣವ ಶರೀರದ ಕಾರ್ಮಿಕ ಮಲ ಹೋಗಿ ಜೀವವು ಶುದ್ಧ "ಅಂಗ"ವಾಗಬೇಕಾದರೆ ಆಚಾರ-ಅರಿವು-ಅನುಭಾವ ಬೇಕು. ಆಚಾರದ ಒಂದು ಅಂಗವೇ ಶುದ್ಧ ಆಹಾರ ಸೇವನೆ!

– ಜೆ.ಸಿ. ಮನೋಹರ, ಚಿತ್ರದುರ್ಗ

? ಸಸ್ಯಗಳಲ್ಲೂ ಜೀವವಿರುತ್ತದೆ. ಅಂದಾಗ ಅದನ್ನೂ ತಿನ್ನುವುದು ಹಿಂಸೆಯಲ್ಲವೆ ? ಅದಕ್ಕಾಗಿ "ಆಹಾರವನ್ನು ಲಿಂಗಕ್ಕರ್ಪಿಸಿ ಪ್ರಸಾದವಕೊಂಡು ಶರಣರು ನಿರ್ದೋಷಿಗಳಾದರು" ಎಂಬ

ಬಸವಣ್ಣನವರ ವಚನವನ್ನು ಉಲ್ಲೇಖಿಸಿರುವ ಸೂಫಿ, ಬಿಜಾಪುರಿ ಇವರು ಎಸ್ಕಿಮೊ ಜನರು ಜಲಚರಗಳನ್ನು ತಿಂದು ಬದುಕುವರು. ಅದನ್ನೇ ದೇವರಿಗೆ ಅರ್ಪಿಸಿ ಸೇವಿಸಿದರೆ ಹಿಂಸಾದೋಷದಿಂದ ಮುಕ್ತರಾಗುವರು ಎಂದು ವಿವರಿಸಿದ್ದಾರೆ.

★ ಅದೇ ವಚನದಲ್ಲಿ ಒಂದು ಮಾತು ಹೇಳಲಾಗಿದೆ. ಜೀವರಾಶಿಯಲ್ಲಿ ಒಂದು ಇಂದ್ರಿಯ ಹೊಂದಿದವುಗಳಿಂದ ಹಿಡಿದು 5 ಇಂದ್ರಿಯ ಹೊಂದಿದವುಗಳ ತನಕ ವಿಕಾಸ ಕ್ರಿಯೆ ನಡೆದಿದೆ. ಇಂದ್ರಿಯಗಳ ಸಂಖ್ಯೆ ಹೆಚ್ಚಿದಷ್ಟೂ ಸುಖ-ದುಃಖಗಳ ಸಂವೇದನೆ ಹೆಚ್ಚುತ್ತದೆ. ಸಸ್ಯಗಳಲ್ಲಿ ಜೀವವಿದೆ ಆದರೆ ಆತ್ಮವಿಲ್ಲ. ಪ್ರಾಣಿಗಳಲ್ಲಿ ಆತ್ಮವಿದೆ, ಸುಖದುಃಖವಿದೆ; ಭಾವನಾತ್ಮಕ ಪ್ರತಿಕ್ರಿಯೆ ಇದೆ. ಅನಿವಾರ್ಯವಾಗಿರುವುದರಿಂದ ಎಸ್ಕಿಮೋ ಮುಂತಾದ ಜನರು ಪ್ರಾಣಿಗಳನ್ನು ಕೊಂದು ತಿನ್ನುವರು. ಅವರಿಗೆ ಮುಕ್ತಿಯಾಗದು. ತಮ್ಮ ಉತ್ತಮ ಗುಣಗಳಿಂದ ಊರ್ಧ್ವ ಜನ್ಮಗಳಿಗೆ ಹೋಗಿ ಅಂತಿಮವಾದ ಜನ್ಮದಲ್ಲಿ ಅಹಿಂಸಾತ್ಮಕ ಪರಿಶುದ್ಧ ಜೀವನ ನಡೆಸಿ ಪಾಪ-ಪುಣ್ಯಕ್ಕೆ ಅತೀತರಾಗಿ ಬದುಕಿದಾಗ ಮಾತ್ರ ಅವರು ಮುಕ್ತಿಹೊಂದುವರು. ಆದ್ದರಿಂದ ಏನನ್ನು ಬೇಕಾದರೂ ಲಿಂಗಕ್ಕೆ ಅರ್ಪಿಸಿ, ಶುದ್ಧರಾಗಲು ಸಾಧ್ಯವಿಲ್ಲ.

– ಮಲ್ಲಿಕಾರ್ಜುನ ಫಲದಿನ್ನಿ, ಬಿಜಾಪುರ

? ನಮ್ಮ ಊರಲ್ಲಿ ಕಮ್ಯುನಿಸ್ಟ್ ವಿಚಾರಧಾರೆಯವರು ಕೆಲವರು ಇದ್ದಾರೆ. ಮತ್ತೆ ಕೆಲವರು ವಿಜ್ಞಾನ ವೇದಿಕೆ ಎಂದು ಮಾಡಿಕೊಂಡು ಬಸವ ಧರ್ಮ ಆಹಾರ ಸೇವನೆ ಆಧರಿಸಿಲ್ಲ, ಅದು ನೀತಿಯ ನೆಲೆಗಟ್ಟಿನ ಮೇಲೆ ನಿಂತಿದೆ. ಮಾಂಸಾಹಾರವನ್ನು ಧರ್ಮದ ಜೊತೆ ಥಳಕು ಹಾಕುವುದೇ ಸರಿಯಲ್ಲ ಎಂದು ಗೋಷ್ಠಿ ನಡೆಸಿ ಅಭಿಪ್ರಾಯಪಟ್ಟರು (ಕನ್ನಡ ಪ್ರಭ 18 ಮೇ 2004) ಈ ಬಗ್ಗೆ ತಮ್ಮ ವಿಚಾರವೇನು ?

★ ಕಮ್ಯುನಿಸಮ್ ಚಿಂತನೆಯು ವಿಜ್ಞಾನ ಜಗತ್ತಿಗಷ್ಟೇ ಸೀಮಿತ. ವಿಜ್ಞಾನವು ಶರೀರ ಮತ್ತು ಜಡ ಜಗತ್ತನ್ನು ವಿಶ್ಲೇಷಿಸುತ್ತದೆ. ಕಮ್ಯುನಿಸಮ್ ಭೌತಿಕ ಪ್ರಗತಿ, ನೈತಿಕ ಉದ್ಧಾರ ಬೋಧಿಸುತ್ತದೆ. ಇದರಾಚೆಗಿನ ಪಾಪ-ಪುಣ್ಯ, ಸೂಕ್ಷ್ಮ ಜಗತ್ತನ್ನು ಕುರಿತು ಚಿಂತಿಸುವುದಿಲ್ಲ. ಕಮ್ಯುನಿಸಮ್‌ಗೆ ಸ್ಪಿರಿಚುಯಾಲಿಸಮ್ ಅಂದರೆ ಆಧ್ಯಾತ್ಮಿಕತೆ ಸೇರಿದಾಗ ಮಾತ್ರ ಅದು ಬಸವಾಯಿಸಮ್. ನೈತಿಕತೆಯು ಒಂದು ಮೆಟ್ಟಿಲು ಅಧ್ಯಾತ್ಮಿಕತೆಯು ಅದನ್ನು ಮೀರಿದ್ದು. ಬದುಕಲಿಕ್ಕಾಗಿ ಏನನ್ನಾದರೂ ತಿಂದರೆ ಸಾಕು ಎನ್ನುವುದು ವೈಜ್ಞಾನಿಕ ಭೌತಿಕವಾದ; ಕೇವಲ ಬದುಕುವುದೇ ಗುರಿಯಲ್ಲ. ಬದುಕು ದೇವರನ್ನೊಲಿಸುವ ಸಾಧನ ಆದ್ದರಿಂದ ಒಳ್ಳೆಯದನ್ನು ತಿನ್ನಬೇಕು. ಹೀಗಾಗಿ ಆಹಾರವು ಅಧ್ಯಾತ್ಮ ಜೀವನದ ಅವಿಭಾಜ್ಯ ಅಂಗ!

– ಗುರುಲಿಂಗಪ್ಪ ಪಾಟೀಲ್, ಗುಲಬರ್ಗಾ

? ಗುಲಬರ್ಗಾ ಬಸವ ಕೇಂದ್ರದವರು ಮಾಂಸಾಹಾರವನ್ನು ಪ್ರೋತ್ಸಾಹಿಸಲು ಹೊರಟ ಚಿತ್ರದುರ್ಗ ಸ್ವಾಮಿಗಳಿಗೆ ಎಚ್ಚರಿಕೆ ಪತ್ರ ಬರೆದು, ಅದರಲ್ಲಿ "ಈಗಾಗಲೇ ಮಾತೆ ಮಹಾದೇವಿಯ ಲಿಂಗದೇವನ ಗದ್ದಲವೇ ಸಮಾಜದಲ್ಲಿ ಸಾಕಷ್ಟು ರಾದ್ಧಾಂತ ಎಬ್ಬಿಸಿರುವಾಗ ಮತ್ತೇಕೆ ಈ ಹೊಸ ರಾದ್ಧಾಂತ" ಎಂದು ಕೇಳಿದ್ದಾರೆ. ಇದು ಸರಿಯೆ ? (ಕನ್ನಡ ಪ್ರಭ 20-5-2004)

★ ಬಸವ ಕೇಂದ್ರದ ಪ್ರಮುಖರು ತಮ್ಮ ಆರಾಧ್ಯ ದೈವವು, ನಮ್ಮನ್ನು ವಿರೋಧಿಸಿ ಕಿರುಕುಳ ಕೊಡಲು ಪ್ರೇರಣಾಶಕ್ತಿಯಾಗಿರುವ ತಮ್ಮ ನೇತಾರರಾದ ಚಿತ್ರದುರ್ಗ ಸ್ವಾಮಿಗಳನ್ನು ಪ್ರಶ್ನಿಸಿರುವುದು ನೂರಕ್ಕೆ ನೂರರಷ್ಟು ಸರಿ. ಆದರೆ ಬಸವ ತತ್ತ್ವದ ಜೀವಾಳವಾದ ಏಕದೇವೋಪಾಸನೆ (ಲಿಂಗಾಚಾರ)ಯ ಕೇಂದ್ರ ಬಿಂದುವಾದ 'ಲಿಂಗದೇವ' ತತ್ತ್ವವನ್ನು ಅರಿಯಲು ಅಸಮರ್ಥವಾಗಿ ಅದನ್ನು ಗದ್ದಲ ಎಂದು ಕರೆದುದು ಅವರ ದಡ್ಡತನವನ್ನು ತೋರಿಸುತ್ತದೆ.

– ಬಿ.ಕೆ. ಶಶಿಕಲಾ ಗುರುಮೂರ್ತಿ, ವಿಜಯನಗರ, ಬೆಂಗಳೂರು-40

? ಪಂಚ ಪೀಠಾಧೀಶರಲ್ಲಿ ಒಬ್ಬರಾದ ಕಾಶಿಯ ಜಗದ್ಗುರುಗಳ ಪ್ರವಚನ ಕೇಳಲು ಹೋಗಿದ್ದೆವು. ಅವರು ಪೂಜೆಯಲ್ಲಿ 2 ಬಗೆ ಔಪಚಾರಿಕ ಮತ್ತು ಸಮರಸ ಪೂಜೆ ಎಂದು. ಗೃಹಿಣಿ ಅತ್ತೆ ಮಾವಂದಿರು ಭಾವ-ಮೈದುನ ಅತಿಥಿ ಇವರಿಗೆ ಮಾಡುವ ಸೇವೆ ಔಪಚಾರಿಕ, ಗಂಡನಿಗೆ ಮಾಡುವ ಸೇವೆ ಸಮರಸ ಸೇವೆ. ಹಾಗೆ ಅನ್ಯದೇವತೆಗಳ ಪೂಜೆ ಔಪಚಾರಿಕ, ಇಷ್ಟಲಿಂಗ ಪೂಜೆ ಸಮರಸಿಕ ಎಂದರು. ಹಾಗೆ ಮನೆಯು ಭೋಗಭೂಮಿ, ತೀರ್ಥಕ್ಷೇತ್ರ ಯೋಗಭೂಮಿ ಎಂದು ಹೇಳಿದರು. ಇದು ಸರಿಯೆ ?

★ ಪಂಚಪೀಠಾಧೀಶರು ಬಸವ ತತ್ತ್ವವನ್ನು ಅನುಸರಿಸುವವರಲ್ಲ. ಅವರು ಏಕದೇವೋಪಾಸಕರಲ್ಲ ಬಹುದೇವತಾ ಉಪಾಸಕರು. ಬಸವೋಕ್ತ ಲಿಂಗಾಯತ ಧರ್ಮವು ಲಿಂಗದೇವನನ್ನು ಅಂಗಕ್ಕೆ ಕೊಟ್ಟು ಸಮರಸಭಾವದಿಂದ ಪೂಜಿಸಲು ಹೇಳುತ್ತದೆ. ಇಲ್ಲಿ ಆರಾಧ್ಯವಾದುವು ಗುರು-ಲಿಂಗ-ಜಂಗಮ ಮಾತ್ರ. ಈ ಮೂರಕ್ಕೆ ಹೊರತಾಗಿ ಬೇರೇನನ್ನೂ ಪೂಜಿಸುವುದು ಲಿಂಗಾಯತ ಧರ್ಮಕ್ಕೆ ಸಲ್ಲದ ಆಚರಣೆ. ಇಲ್ಲಿ ಮನೆ ಭೋಗಭೂಮಿ, ತೀರ್ಥಕ್ಷೇತ್ರ ಯೋಗಭೂಮಿ ಎಂಬ ಕಲ್ಪನೆಯಿಲ್ಲ. ಶರೀರವು ದೇವನನ್ನು ಒಲಿಸುವ ಸಾಧನವಾದಂತೆ, ಸಂಸಾರ-ಮನೆ ಎಲ್ಲವೂ ದೇವನನ್ನೊಲಿಸುವ ಸಾಧನವಾಗಬೇಕು. ಮನೆ ಮಹಾಮನೆಯಾಗುವುದೇ ಬಸವ ತತ್ತ್ವ. ಅದಕ್ಕಾಗಿ ದೇವರನ್ನು ತೀರ್ಥಕ್ಷೇತ್ರಗಳಲ್ಲಿ ಶರಣರು ಹುಡುಕುವುದಿಲ್ಲ, ತಮ್ಮಲ್ಲೇ ಸಾಕ್ಷಾತ್ಕರಿಸಿಕೊಳ್ಳುವರು.

– ಚಂದ್ರಮೌಳಿ ಲಿಂಗಾಯತ್, ಬೆಂಗಳೂರು

? ದಿ. 25-5-2004 ಪ್ರಜಾವಾಣಿಯ ವಾಚಕರ ವಾಣಿ ವಿಭಾಗದಲ್ಲಿ ನೀಲಗುಂದ ಸ್ವಾಮೀಜಿ ಎಂಬುವವರು ಮಾಂಸಾಹಾರ ಶರಣ ತತ್ತ್ವಕ್ಕೆ ಸಲ್ಲದ್ದು ಎಂದೇನೋ ಹೇಳಿದ್ದಾರೆ ಆದರೆ ಅನವಶ್ಯಕವಾಗಿ ನಿಮ್ಮ ಹೆಸರನ್ನು ಎಳೆದು ತಂದು ಮಾತೆ ಮಹಾದೇವಿಗಿಂತಲೂ ಅಪಾಯಕಾರಿ ಎಂದು ಪ್ರಸ್ತಾಪಿಸಿದ್ದಾರೆ ಮತ್ತೂ ತಮ್ಮದು ಒಬ್ಬರ ವಚನಾಂಕಿತ ತಿದ್ದುವ ಕೃತ್ಯ ಎಂದಿದ್ದಾರೆ. ಈ ಬಗ್ಗೆ ನಿಮ್ಮ ಪ್ರತಿಕ್ರಿಯೆ.

★ ನಮ್ಮ ಕೃತಿ ಅಪಾಯಕಾರಿ ಕೃತ್ಯವಲ್ಲ, ಬಸವ ತತ್ತ್ವವನ್ನು ನೇರ ಮಾಡುವ ಪ್ರಯತ್ನ; ಏಕೋದೇವ ಲಿಂಗದೇವನನ್ನು ಮನಸ್ಸಿನಲ್ಲಿ, ಸಿದ್ಧಾಂತದಲ್ಲಿ ಪ್ರತಿಷ್ಠಾಪಿಸುವ ಪ್ರಯತ್ನ. ಇಬ್ಬರೂ ಚಿತ್ರದುರ್ಗದವರೆಂದು ಉಭಯತರನ್ನೂ ಸಮಾನವಾಗಿ ಭಾವಿಸಿ ಹೋಲಿಸುವುದು, ಇಬ್ಬರ ಕೃತ್ಯಗಳನ್ನೂ ಸಮಾನವಾಗಿ ಭಾವಿಸಿ ಹೋಲಿಸುವುದು, ಇಬ್ಬರ ಕೃತ್ಯಗಳನ್ನೂ ಹೋಲಿಸುವುದು ಅಪರಾಧವೇ ಸರಿ ? ಚಿತ್ರದುರ್ಗ ಶ್ರೀಗಳು ಬಸವ ತತ್ತ್ವದ ಅವಿಭಾಜ್ಯ ಅಂಗವಾದ ಅಹಿಂಸೆಯ ಸಾವಿಗೆ ಕಾರಣರಾಗಿದ್ದರೆ, ನಾವು ಬಸವ ತತ್ತ್ವದ ಜೀವಾಳವಾದ ಏಕದೇವನಿಷ್ಠೆಯ ಪುನಶ್ಚೈತನ್ಯಕ್ಕೆ ಲಿಂಗದೇವ ಪದದ ಮೂಲಕ ಕಾರಣರಾಗಿದ್ದೇವೆ.

ಬಸವ ಧರ್ಮ ಸಮ್ಮೇಳನ ಮತ್ತು ಮಾಂಸಾಹಾರ ನಿರ್ಣಯ

– ಮಾತಾಜಿ

ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯ ಕ್ಷೇತ್ರವಾಗಿ ಧರ್ಮಕ್ಷೇತ್ರದ ಗೌರವಕ್ಕೆ ಪಾತ್ರವಾಗಿರುವ ಕೂಡಲಸಂಗಮದಲ್ಲಿ ಅಖಿಲಭಾರತ ಬಸವ ಧರ್ಮ ಸಮ್ಮೇಳನ ಎಂದು ಚಿತ್ರದುರ್ಗ ಶ್ರೀಗಳು ಸಂಯೋಜಿಸಿ ಹೋಳಿಗೆ ಊಟ ಮಾಡಿಸಿ ಕಡೆಯಲ್ಲಿ ಮಜ್ಜಿಗೆಯ ಬದಲು ಗಂಜಳ ಕುಡಿಸಿದಂತೆ ನಿರ್ಣಯ ಒಂದನ್ನು ತೆಗೆದುಕೊಂಡು ಬಸವ ತತ್ತ್ವದ 'ಹಂತಕ'ರ ಕೆಲಸವನ್ನು ಮಾಡಿದ್ದಾರೆ. ಇಂಥದೊಂದು ಸಂದರ್ಭಕ್ಕೆ ಹೊಂಚುಹಾಕಿ ಕುಳಿತಿದ್ದ ಪಂಚ ಪೀಠಾಧೀಶರು ಮತ್ತು ಅವರ ಅಭಿಮಾನಿಗಳು ಹಿಗ್ಗಾಮುಗ್ಗ ಚಿತ್ರದುರ್ಗ ಶ್ರೀಗಳನ್ನು ಟೀಕಿಸುವುದರ ಜೊತೆಗೆ ಸುಳ್ಳು ಇತಿಹಾಸವನ್ನು ಬಲವಾಗಿ ಸಮರ್ಥಿಸಿಕೊಳ್ಳುತ್ತಿದ್ದಾರೆ. ಕ್ರಾಂತಿಕಾರಿ, ಪ್ರಗತಿಪರ ವಿಚಾರದವರೆಂದು ಪ್ರಚಾರ ಪಡೆಯಲು ತವಕಪಡುವ ಶಿವಮೂರ್ತಿ ಸ್ವಾಮಿಗಳು ವಿಚಿತ್ರ ಪರಿಸ್ಥಿತಿಯೊಂದನ್ನು ಸೃಷ್ಟಿಸಿದ್ದಾರೆ. ವೈಯಕ್ತಿಕವಾಗಿ ನಮ್ಮ ಮೇಲೆ ಈರ್ಷೆ, ದ್ವೇಷ ಹೊಂದಿ ನಮಗೆ ನಿರಂತರ ಕಿರುಕುಳ ಕೊಡುತ್ತಲೇ ಬಂದರೂ ನಾವು ಮಾತ್ರ ಆ ಕಿರುಕುಳ ಸಹಿಸಿಕೊಂಡೆವೆ ವಿನಾ ಪ್ರತಿಯಾಗಿ ಅವರಿಗೆ ವಿರೋಧ ಮಾಡಲು ಹೋಗಲಿಲ್ಲ. ''ಎಂಟು ವರ್ಷಕ್ಕೆ ಮಗ ಅಪ್ಪನಿಗೆ ಅಪ್ಪ, ಅಮ್ಮನಿಗೆ ಅಮ್ಮ ಎಂದಂತೆ ಈ ವಿರಕ್ತ ಮಠದ ಸ್ವಾಮಿಗಳು ಮುರುಘೇಶಾಯ ನಮಃ ಬದಲಿಗೆ **ಶ್ರೀ ಗುರು ಬಸವ ಲಿಂಗಾಯ ನಮಃ** ಎನ್ನುತ್ತಿದ್ದಾರೆ, ಅನ್ನಿಸುತ್ತಿದ್ದಾರೆ. ಅವರ ಮಠದ ಸುತ್ತ ಇದ್ದ ಮಡಿವಂತ ಲಿಂಗಾಯತ ಭಕ್ತರನ್ನು ಬಸವ ಮಾರ್ಗಕ್ಕೆ ಕರೆ ತರುತ್ತಿದ್ದಾರಲ್ಲ; ಅಷ್ಟಾದರೂ ಮಾಡಲಿ'' ಎಂದು ಮೌನವಾಗಿದ್ದೆವು. ಕೂಡಲ ಸಂಗಮದಲ್ಲೇ ಸಮ್ಮೇಳನ ಮಾಡುತ್ತೇವೆಂದರೂ ನಾವು ವಿರೋಧದ ಒಂದು ಹೇಳಿಕೆ ಸಹ ನೀಡಲಿಲ್ಲ.

ಆದರೆ, ಕೋತಿ ಕೈಯಲ್ಲಿ ಖಡ್ಗ ಕೊಟ್ಟಂತೆ, ಇವರು ಸಮ್ಮೇಳನ ಮಾಡಿ ಲಜ್ಜೆಗೇಡಿ ನಿರ್ಣಯವನ್ನು ಮಂಡಿಸಿದ್ದು ನಿಜಕ್ಕೂ ಆಘಾತಕರ. ಒಬ್ಬ ರಾಜ ಒಂದು ಕೋತಿಯನ್ನು ತನ್ನ ಅಂಗರಕ್ಷಕನನ್ನಾಗಿ ಇರಿಸಿಕೊಂಡಿದ್ದನಂತೆ. ಒಮ್ಮೆ ಆತ ನಿದ್ರಿಸುತ್ತಿದ್ದ. ಕೋತಿ ಕೈಯಲ್ಲಿ ಕತ್ತಿ ಹಿಡಿದು ಕಾವಲು ಕಾಯುತ್ತಿತ್ತು. ಒಂದು ನೊಣ ಹಾರುತ್ತ ರಾಜನ ಮೂಗಿನ ಮೇಲೆ ಕುಳಿತುಕೊಳ್ಳುತ್ತಿತ್ತು. ಕೋತಿಗೆ ಬಹಳ ಕೋಪ ಬಂದಿತು. ''ನಮ್ಮ ರಾಜ ಸಾಮಾನ್ಯನೇನಲ್ಲ. ಅವನ ಹತ್ತಿರ ಮಾತನಾಡಲೂ ಯಾರಿಗೂ ಧೈರ್ಯವಿಲ್ಲ. ಹೀಗಿರುವಾಗ ಈ ಕ್ಷುದ್ರ ನೊಣಕ್ಕೆ ಎಷ್ಟು ಧೈರ್ಯ, ನಮ್ಮ ರಾಜನ ಮೂಗಿನ ಮೇಲೆ ಕೂರುತ್ತಿದೆ'' ಎಂದು ರಾಜನ ಮೇಲಿನ ಭಕ್ತಿ-ಅಭಿಮಾನದಿಂದ, ನೊಣದ ಮೇಲಿನ ಸಿಟ್ಟಿನಿಂದ ಕತ್ತಿಯನ್ನು ಬೀಸಿತು. ಮೂಗಿನ ಮೇಲೆ ಕುಳಿತ ನೊಣ ಹಾರಿಹೋಯಿತು. ಆದರೆ ರಾಜನ ರುಂಡ ಮುಂಡದಿಂದ ಬೇರಾಯಿತು. ಮಾಂಸಾಹಾರದ ನಿರ್ಬಂಧವಿಲ್ಲ ಬಸವ ಧರ್ಮೀಯರಿಗೆ ಎಂಬ ಶಿವಮೂರ್ತಿ ಶ್ರೀಗಳ ನಿರ್ಣಯವೂ ಹೀಗೆಯೇ ಅವಿವೇಕದ ಕೃತಿಯಾಗಿದೆ.

ಭಾಗ - 1 ಬಸವ ಧರ್ಮ ಸ್ಥಾಪಕರೆ ?

ಪ್ರಚಾರ ಪ್ರಿಯ ಶಿವಮೂರ್ತಿಯವರು ತಾವು ಬಸವ ಧರ್ಮ ಸ್ಥಾಪಕರೆಂದು ಬಿಂಬಿಸಿಕೊಳ್ಳ ತೊಡಗಿದ್ದು, ಅವರ ಹಿಂಬಾಲಕರು ಅದೇ ರೀತಿ ಪ್ರಚಾರ ಮಾಡುತ್ತಿದ್ದಾರೆ.

ಬಸವ ಧರ್ಮವು ಇವರಿಂದ ಸ್ಥಾಪನೆಯಾಗಿಲ್ಲ, 12ನೆಯ ಶತಮಾನದಲ್ಲೇ ಸ್ಥಾಪನೆಯಾಗಿದೆ. ಲಿಂಗಾಯತ ಧರ್ಮವೇ ಬಸವ ಧರ್ಮ. ಬಸವ ಯೋಗ, ಬಸವ ಧರ್ಮ ಎಂಬ ಪದಗಳು ಅಂದೇ ಪ್ರಯೋಗಗೊಂಡಿವೆ : ಶ್ರೀ ಸಿದ್ಧರಾಮೇಶ್ವರರು ಹೀಗೆ ಹೇಳಿದ್ದಾರೆ :

ಬಸವನ ಯೋಗದಿಂ ಹಸನಾಯಿತ್ತೆ ಲೋಕ

*

ಕರುಣಿ ಕಪಿಲಸಿದ್ಧ ಮಲ್ಲಿನಾಥಯ್ಯ
ಎನಗೂ ನಿನಗೂ ಬಸವಣ್ಣನ ಧರ್ಮವಯ್ಯ !

*

ಕರುಣಿ ಬಸವಾ ಕಾಲಹರ ಬಸವಾ
ನಿರ್ಮಳ ಬಸವಾ, ಶಿವಜ್ಞಾನಿ ಬಸವಾ
ನಿಮ್ಮ ಧರ್ಮವಯ್ಯ ಈ ಭಕ್ತಿಯ ಪಥವು

ಲಿಂಗಾಯತ ಧರ್ಮ ಎಂಬ ಪದವು ಬಸವಣ್ಣನವರು ಕೊಟ್ಟ ಧರ್ಮಕ್ಕೆ ಸೂಕ್ತಪದವಾಗಿದ್ದರೂ, ಪರ್ಯಾಯ ಪದಗಳೆಂದರೆ ವಚನ ಧರ್ಮ, ಬಸವ ಧರ್ಮ, ಶರಣ ಧರ್ಮ ಎಂಬುದಾಗಿವೆ. ವಚನ ಸಾಹಿತ್ಯದಲ್ಲಿ ಅಭಿವ್ಯಕ್ತಗೊಂಡ ಕಾರಣ ಇದು ವಚನ ಧರ್ಮ, ಬಸವಣ್ಣನವರೇ ಇದರ ಆದ್ಯರಾದ ಕಾರಣ ಇದು ಬಸವ ಧರ್ಮ. ಶರಣರು ಕೂಡಿ ಆಚರಿಸಿ, ಬೆಳೆಸಿದ ಕಾರಣ ಇದು ಶರಣ ಧರ್ಮ ಆದ್ದರಿಂದ ಧರ್ಮವಾಚಕವಾಗಿ, ಸಮಾಜ ಸಂಬಂಧಿಯಾಗಿ ಲಿಂಗಾಯತ ಎಂಬುದನ್ನು ಬಳಸಿದರೂ ಸಾಹಿತ್ಯದಲ್ಲಿ, ಭಾಷಣಗಳಲ್ಲಿ ಬಸವ ಧರ್ಮ ಎಂದು ನಾವು ಬಳಸಲು ಅಭ್ಯಂತರವಿಲ್ಲ.

ಶ್ರೀ ಅಡ್ವಾಣಿಯವರು ''ಭಾರತ ಉದಯ ಯಾತ್ರೆ'' ಎಂದು ಕೈಗೊಂಡರು. ಆ ಪದದಲ್ಲೇ ಅಸಂಬದ್ಧತೆ ಇದೆ. ಭಾರತವು 15 ಆಗಸ್ಟ್ 1947ರಂದೇ ಉದಯವಾಯಿತು. ನವಭಾರತ ಉದಯ ಯಾತ್ರೆ, ಭಾರತ ಉತ್ಥಾನ ಯಾತ್ರೆ - ಹೀಗೆ ಕರೆದಿದ್ದರೆ ಔಚಿತ್ಯಪೂರ್ಣವಾಗುತ್ತಿತ್ತು. ಹಾಗೆಯೇ ಶಿವಮೂರ್ತಿ ಸ್ವಾಮಿಗಳು ಬಸವ ಧರ್ಮ ಸ್ಥಾಪಕರು ಹೇಗಾಗುತ್ತಾರೆ ? ಅದು 12ನೇ ಶತಮಾನದಲ್ಲೇ ಸ್ಥಾಪನೆಯಾಗಿದೆ.

ಮೊದಲು ವೀರಶೈವದ ಕಟ್ಟಾವಾದಿಗಳಾಗಿದ ಪಂಚ ಪೀಠಾಧೀಶರು ಹೆಣೆದ ಜಾಲದಿಂದ ದೂರವಾಗಲು ನಾವು ಲಿಂಗಾಯತ ಪದವನ್ನು ಪ್ರಚಾರಕ್ಕೆ ತಂದೆವು. ಮತ್ತು ಹೇಗೆ ವೀರಶೈವ ಮತ್ತು ಲಿಂಗಾಯತ ಬೇರೆ ಬೇರೆ ಎಂಬುದನ್ನು ಸಾಧಾರಪೂರ್ವಕವಾಗಿ ವಿವರಿಸಿದೆವು. ಜನರಲ್ಲಿ, ಸಮಾಜದಲ್ಲಿ ಅಚ್ಚೊತ್ತಿದ್ದ ''ಲಿಂಗಾಯತ'' ಪದದ ವಿಶೇಷತೆ ವಿವರಿಸಿ ಕರ್ನಾಟಕದಲ್ಲಿ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಇರುವ ಎಲ್ಲ ಲಿಂಗಧಾರಿಗಳು ಲಿಂಗಾಯತರೇ ವಿನಾ ವೀರಶೈವರಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾ ಹೋದಾಗ ವೀರಶೈವವಾದಿ ಜಿಗಳೆಗಳು ಲಿಂಗಾಯತ ಪದಕ್ಕೂ ಅಂಟಿಕೊಂಡು ವೀರಶೈವಕ್ಕೆ ಬಾರ್ /ಹಾಕಿ ವೀರಶೈವ/ಲಿಂಗಾಯತ ಎಂದು ಎರಡನ್ನೂ ಸಮೀಕರಿಸಿ ಲಿಂಗಾಯತ

ಧರ್ಮಕ್ಕೂ ತೆಕ್ಕೆ ಬಿದ್ದು ಅನ್ಯಾಯ ಮಾಡತೊಡಗಿದ್ದಾರೆ. ಪೂಜ್ಯ ಲಿಂಗೈಕ್ಯ ಲಿಂಗಾನಂದ ಮಹಾಜಗದ್ಗುರುಗಳು ಹೇಳತೊಡಗಿದರು, ''ಈ ಧರ್ಮವನ್ನು ಬಸವ ಧರ್ಮ ಎಂದು ರೂಢಿಗೆ ತಂದಿದ್ದರೆ ಆಗ ಎಷ್ಟು ಸ್ಪಷ್ಟತೆ ಇರುತ್ತಿತ್ತು. ಗೌತಮ ಬುದ್ಧನಿಂದ ಬೌದ್ಧ ಧರ್ಮ ಬಂದಿತು ಎಂಬಂತೆ ಬಸವಣ್ಣನಿಂದ ಬಸವ ಧರ್ಮ ಬಂದಿತು ಎಂದು ಯಾವ ಗೊಂದಲವಿಲ್ಲದೆ ಪ್ರಚಾರವಾಗುತ್ತಿತ್ತು. ಬಸವ ಧರ್ಮವು ಬಸವಣ್ಣನಿಗೂ ಪೂರ್ವದಲ್ಲಿತ್ತು ಎಂದು ಯಾವ ಧೂರ್ತ ಪಂಡಿತನೂ ಸಾಧಿಸುತ್ತಿರಲಿಲ್ಲ, ಯಾವ ಮೂರ್ಖ ಭಕ್ತನೂ ನಂಬುತ್ತಿರಲಿಲ್ಲ''.

ಪೂಜ್ಯ ಗುರುಗಳ ಚಿಂತನೆಯ ಫಲವಾಗಿ ''ಬಸವ ಧರ್ಮ'' ಎಂಬ ಪದವನ್ನು ಜನಪ್ರಿಯಗೊಳಿಸಲು ನಾವು 1987ರಲ್ಲೇ ಬಸವ ಧರ್ಮ ಪೀಠ ಎಂಬ ಟ್ರಸ್ಟ್ ಮುಂಬಯಿ ಪಬ್ಲಿಕ್ ಟ್ರಸ್ಟ್ ಆಕ್ಟ್ ಪ್ರಕಾರ ನೋಂದಾಯಿಸಿದೆವು. 1992ರಲ್ಲಿಯೆ ಗುರು ಬಸವಣ್ಣನವರ ಹೆಸರಿನಲ್ಲಿ ಧರ್ಮ ಪೀಠ ಒಂದು ಇಲ್ಲದಿರುವ ಕೊರತೆಯನ್ನು ತುಂಬಲೋಸುಗ ಬಸವ ಧರ್ಮದ ಮಹಾಜಗದ್ಗುರು ಪೀಠವನ್ನು ಸ್ಥಾಪಿಸಿದೆವು. 1993ರಲ್ಲಿ ಅಖಿಲಭಾರತ ಪ್ರಥಮ ಬಸವ ಧರ್ಮ ಸಮ್ಮೇಳನವನ್ನು ಆರಂಭಿಸಿ ಪುನಃ 8 ಸಮ್ಮೇಳನಗಳನ್ನು ನಡೆಸಿದೆವು.

ಸತ್ಯ ಸಂಗತಿ ಹೀಗಿದ್ದು ಎಲ್ಲ ಜನರಿಗೂ ಸೂರ್ಯ ಪ್ರಕಾಶದಷ್ಟು ಇದು ನಿಚ್ಚಳವಾಗಿರುವಾಗ ''ಬಸವ ಧರ್ಮ'' ಎಂಬ ಧರ್ಮವನ್ನೇ ಹೊಸದಾಗಿ ಸ್ಥಾಪಿಸಿದರೇನೋ ಎಂಬಂತೆ ಪ್ರದರ್ಶಿಸಿ, ಪ್ರಚಾರ ಮಾಡಿಕೊಂಡಿದ್ದರ ಫಲವಾಗಿ ವೀರಶೈವ ವಾದಿಗಳು, ಪಂಚ ಪೀಠಾಧೀಶರು ಪುನಃ ಸುಳ್ಳಿನ ಕಂತೆಯನ್ನೇ ಬಿಚ್ಚಿ ಲೇಖನಗಳನ್ನು ಬರೆಯಲು ಆರಂಭಿಸಿದ್ದಾರೆ. ಅನೇಕ ಪ್ರಮುಖ ದಿನ ಪತ್ರಿಕೆಗಳು ವೈದಿಕ ಪುರೋಹಿತಶಾಹಿ ಜನರ ಕೈಯಲ್ಲಿದ್ದು ಅದಕ್ಕೆ ಹೊಂದುವ ವೀರಶೈವ ವಾದಿಗಳ ಲೇಖನಗಳನ್ನು ಅವು ಪ್ರಕಟಿಸಿ ಅದಕ್ಕೆ ಪ್ರತಿಯಾಗಿ ಬಸವಣ್ಣನವರಿಂದಲೇ ಲಿಂಗಾಯತ ಧರ್ಮ ಸ್ಥಾಪಕರು ಎಂಬ ಲೇಖನಗಳನ್ನು ಪ್ರಕಟಿಸದೆ ಮುಚ್ಚಿ ಇಡುವರು. ಹೀಗೆ ಚಿತ್ರದುರ್ಗ ಸ್ವಾಮಿಗಳ ಸಮ್ಮೇಳನ ಬಸವ ತತ್ತ್ವ ಪ್ರಸಾರಕ್ಕೆ ಮಾರಕವೇ ಆಯಿತು ಎಂಬುದು ಉತ್ಪ್ರೇಕ್ಷೆಯಲ್ಲ. ಬಸವ ಧರ್ಮವು ಸ್ಥಾಪನೆಯಾಗಿ 844 ವರ್ಷಗಳು ಸಂದುಹೋಗಿವೆ. ಇದನ್ನರಿಯದೆ ಡಾ|| ಚಿದಾನಂದ ಮೂರ್ತಿ, ಪಂಚ ಪೀಠಾಧೀಶರು ಮುಂತಾದವರು ಹೊಸ ಧರ್ಮದ ಅಗತ್ಯವೇನಿತ್ತು ? ಎಂದು ಹಾಸ್ಯಾಸ್ಪದವಾಗಿ ಮಾತನಾಡಲು ಶಿವಮೂರ್ತಿ ಶ್ರೀಗಳು ಅವಕಾಶವನ್ನು ಕಲ್ಪಿಸಿದಂತೆ ಆಯಿತು.

ಭಾಗ - 2 ಮಾಂಸಾಹಾರ ನಿರ್ಬಂಧ

ಇನ್ನೂ ಹೆಚ್ಚಿನ ಅಪಾಯಕಾರಿಯಾದ ನಿರ್ಣಯವೆಂದರೆ ಕೂಡಲ ಸಂಗಮದ ಸಮ್ಮೇಳನದಲ್ಲಿ ಮಾಂಸಾಹಾರಿಗಳಿಗೂ ಬಸವ ಧರ್ಮದಲ್ಲಿ ಪ್ರವೇಶಾವಕಾಶವಿದೆ ಎಂದುದು ಮಾತ್ರವಲ್ಲದೆ ಧರ್ಮ ಸ್ವೀಕಾರದ ನಂತರವು ಮಾಂಸಾಹಾರವನ್ನು ಮುಂದುವರಿಸಬಹುದೆಂದು ನಿರ್ಣಯ ಕೈಗೊಂಡುದು.

ಹೊಲಬನರಿಯದ ಗುರುವು ತಿಳಿಯಲರಿಯದ ಶಿಷ್ಯ
ನೆಲೆಯನಾರಯ್ಯದುಪದೇಶ। ಅಂಧಕನು
ಕಳನ ಹೊಕ್ಕಂತೆ ಸರ್ವಜ್ಞ ||

ಹಂದಿ ಚಂದನ ಸಾರ ಗಂಧವ ಬಲ್ಲುದೆ ?
ಒಂದುವ ತಿಳಿಯಲು ಅರಿಯದ ಗುರುವಿಗೆ
ನಿಂದ್ಯವೆ ಬಹುದು ಸರ್ವಜ್ಞ॥

ಕ್ರಾಂತಿಕವಿ ಸರ್ವಜ್ಞ ಉತ್ತಮ ಗುರುವಿನ ಲಕ್ಷಣ ವಿವರಿಸಿದಂತೆ ಮೂರ್ಖ ಗುರುವಿನ ಪರಿಸ್ಥಿತಿಯನ್ನೂ ವಿವರಿಸಿದ್ದಾನೆ. 'ಆಳಾಗ ಬಲ್ಲವನು ಅರಸಾಗಬಲ್ಲ' ಎಂಬಂತೆ ಜೀವನದಲ್ಲಿ ಹಂತಹಂತವಾಗಿ ಪಕ್ವವಾದ ವ್ಯಕ್ತಿಗೆ ಲೋಕಜ್ಞಾನ ಬಂದಂತೆ ಸುಖದ ಲೋಲುಪತೆಯಲ್ಲಿ ಬೆಳೆದವನಿಗೆ ಅರಸನ ಜವಾಬ್ದಾರಿ ಅರ್ಥವಾಗದು. ಅದೇ ರೀತಿ ಸಾಧಕರ ಪರಿಸ್ಥಿತಿಯು ಸಹ. ಚಿತ್ರದುರ್ಗ ಸ್ವಾಮಿಗಳಿಗೆ ಒಮ್ಮೆಲೇ ಒಂದು ದೊಡ್ಡ ಮಠಕ್ಕೆ ಅಧಿಕಾರಿಯಾಗುವ ಅವಕಾಶ ಬಂದಿತು. ಅದು ಅವರ ಪ್ರತಿಭೆಯಿಂದ ಗಳಿಸಿದ್ದಲ್ಲ, ಪಿತ್ರಾರ್ಜಿತ ಆಸ್ತಿಯಾಗಿ ಬಂದುದು. ಹೀಗಾಗಿ ಧರ್ಮದ ಬಗೆಗೆ ಇದ್ದ ಅಜ್ಞಾನದ ಜೊತೆಗೆ ಧನದ ಮದವೂ ಸೇರಿ ಅವರ ಆಲೋಚನಾ ಶಕ್ತಿಗೆ ಕೋತಿಗೆ ಕಳ್ಳು ಕುಡಿಸಿದಂತಾಯಿತು.

ಅತ್ತಿಂದಿತ್ತ ಇತ್ತಿಂದತ್ತ ಜಿಗಿಯುವ ಬುದ್ಧಿ, ಮನಸ್ಸುಗಳು ಸರಿಯಾಗಿ ಆಲೋಚನೆ ಮಾಡಬೇಕಾದರೆ ಅವಕ್ಕೆ ನಿಯಂತ್ರಣ ವ್ಯವಸ್ಥೆ ಇರಬೇಕು. ಈ ನಿಯಂತ್ರಣ ವ್ಯವಸ್ಥೆಯ ಅಂಗಗಳೆಂದರೆ ಗುರುವಿನ ಮಾರ್ಗದರ್ಶನ, ಶಾಸ್ತ್ರಾಧ್ಯಯನ, ಸತ್ಸಂಗ, ವಿವೇಕ ಜ್ಞಾನ.

ಚಿತ್ರದುರ್ಗದ ಬೃಹನ್ಮಠದ ಮುರುಘರಾಜೇಂದ್ರ ಶರಣರಿಗೆ ಈ ನಾಲ್ಕರಲ್ಲಿ ಯಾವುವು ಇವೆ ? ಗುರುಗಳ ಮಾರ್ಗದರ್ಶನ ಮೊದಲೇ ಇಲ್ಲ. ವಚನ ಶಾಸ್ತ್ರದ ಕ್ರಮಬದ್ಧ ಅಧ್ಯಯನವೂ ಇಲ್ಲ. ಒಂದು ಸಿದ್ಧಾಂತದ ಹಿನ್ನೆಲೆ ಹೊಂದಿರುವ ವಚನ ಸಾಹಿತ್ಯದ ಅಧ್ಯಯನವು ಕ್ರಮ ಬದ್ಧವಾಗಿ ಆಗಬೇಕಾದರೆ ಆ ಸಿದ್ಧಾಂತದ ಜ್ಞಾನ ಇರಬೇಕು. ಶರಣರ ಅನುಭವ ಮಂಟಪದಲ್ಲಿ ಹೇಗೆ ಮುಕ್ತ ಚಿಂತನೆ ನಡೆಯುತ್ತ ಎಲ್ಲ ಶರಣರು ತಮ್ಮ ತಮ್ಮ ಅಭಿಪ್ರಾಯಗಳನ್ನು ಧೈರ್ಯವಾಗಿ ಮಂಡಿಸುತ್ತಿದ್ದರೋ ಅಂಥ ಶರಣರ ಸತ್ಸಂಗ ಬೇಕು. ಸ್ವಾಮಿಗಳ ಧನಾಧಾರಿತವಾದ ವ್ಯವಸ್ಥೆಗೆ ಆಕರ್ಷಿತರಾಗಿರುವ ಅನೇಕ ಜನರು ಮತ್ತು ಶಾಖಾಮಠದ ಸ್ವಾಮಿಗಳು, ಇವರು ಮಾಡಿಟ್ಟ ಗೊಂಬೆಗಳಂತಿರುವ ಹಲವಾರು ಉಪಜಾತಿಗಳ ಸ್ವಾಮಿಗಳು ಅದೆಂತು ಇವರ ಆಲೋಚನಾ ಸರಣಿಯಲ್ಲಿರುವ ತಪ್ಪುಗಳನ್ನು ತೋರಿಸಬಲ್ಲರು ? ಇಳಕಲ್, ಗದಗ್ ಶ್ರೀಗಳು ಎದೆಯ ಮೇಲೆ ಲಿಂಗದೇವನನ್ನು ಧರಿಸಿಕೊಂಡು ಸಹ 'ಲಿಂಗದೇವ'ದಂತಹ ಅಮೂಲ್ಯ ಪರಿಕಲ್ಪನೆಗೆ ಅಕ್ಷರಶಃ ಉಗ್ರವಾದ (ಮತ್ತು ಹಿಂಸಾತ್ಮಕ) ಪ್ರತಿಭಟನೆ ಕೈಗೊಂಡರು. ಆದರೆ 'ಮಾಂಸಾಹಾರ' ಕುರಿತಾದ ಬಸವ ತತ್ತ್ವ ವಿರೋಧಿ ನಿರ್ಣಯವನ್ನು ಚಿತ್ರದುರ್ಗದ ಶ್ರೀಗಳು ತೆಗೆದುಕೊಂಡರೂ ಈಗ ತುಟಿಪಿಟಕ್ ಎನ್ನದೆ ದಿವ್ಯವಾದ ಮೌನವನ್ನು ಧರಿಸಿರುವುದು ನೋಡಿದರೆ ಅತೀವ ಆಶ್ಚರ್ಯ ಉಂಟಾಗುತ್ತದೆ. ಅಂದರೆ ಇವರು ಪ್ರಾಮಾಣಿಕ ಚಿಂತಕರಲ್ಲ; ಇವರಿಗೆ ಬೇಡವಾದುದುಬೆಲ್ಲವಿದ್ದರೂ ಕಹಿ, ಬೇಕಾದುದು ಬೇವಿದ್ದರೂ ಸಿಹಿ ಎಂಬ ಭಾವವು ಉಂಟಾಗುತ್ತದೆ. ಇನ್ನು ಭಾಲ್ಕಿಯ ಶ್ರೀಗಳಂತೂ ತಳವಿಲ್ಲದ ಮಗಿ, ಸ್ವಾಭಿಮಾನ ಶೂನ್ಯ ಜೀವ, ಸ್ವಂತ ಬುದ್ಧಿಯಂತೂ ಎಳ್ಳಷ್ಟೂ ಇಲ್ಲದವರು. ಬೀದರ್ ಜಿಲ್ಲೆಗೆ ಯಾವುದೇ ಸಂಬಂಧವಿಲ್ಲದಿದ್ದ ಚಿತ್ರದುರ್ಗದ ಬೃಹನ್ಮಠದವನರನ್ನು ಆಹ್ವಾನಿಸಿ, ವಿಪತ್ತನ್ನು ತಂದುಕೊಂಡು,

ಸ್ವಯಂಕೃತ ಅಪರಾಧ ಮಾಡಿ, ಅನುಭವ ಮಂಟಪದ ಟ್ರಸ್ಟ್‌ನಿಂದ ಆರೋಪ ಹೊರಿಸಿಕೊಂಡು ಹೊರಬಿದ್ದವರು. ಆಗಲೇ ಎಲ್ಲವನ್ನೂ ಮರೆತು ಮೇ 1-2ರ ಸಮ್ಮೇಳನದಲ್ಲಿ ಭಾಗವಹಿಸಿ, ಮಾಂಸಾಹಾರದ ನಿರ್ಬಂಧ ಸಡಲಿಸುವ ನಿರ್ಣಯ ತೆಗೆದುಕೊಂಡಾಗ ದಿವ್ಯ ಸನ್ನಿಧಿ ವಹಿಸಿ, ಈಗ ಮೌನ ತಳೆದವರು. ಅಂದಾಗ ಚಿತ್ರದುರ್ಗ ಶ್ರೀಗಳಿಗೆ ಬುದ್ಧಿವಾದ ಹೇಳುವವರು ಯಾರು? ಹೀಗಾಗಿ, ನನ್ನ ಸಮಾನರಾರಿಹರು? ಎಂಬ ಅಹಂ ಚಿತ್ರದುರ್ಗ ಶ್ರೀಗಳದು. ಇನ್ನು ನಾಲ್ಕನೆಯದಾದ ವಿವೇಕ ಜ್ಞಾನವಂತೂ ಶ್ರೀಗಳಿಂದ ಗಾವುದ ದೂರ! ಯಾರಾದರೂ ಏನಾದರೂ ಅರಿತು ಆಚರಿಸಿದರೆ ಅದನ್ನು ಯಾಂತ್ರಿಕವಾಗಿ ಅನುಸರಿಸಿ, ತಾವೇ ಅದರ ಪ್ರತಿಪಾದಕರು ಎಂದು ಪೋಸ್ ಕೊಡುವ ಹವ್ಯಾಸ ಬೇರೆ ಇವರದು.

1. ಬಸವ ಸಂಪ್ರದಾಯದ ವಿರಕ್ತಮಠ ಮುರುಘರಾಜೇಂದ್ರ ಬೃಹನ್ಮಠ. ಇದು ಶಿವಮೂರ್ತಿ ಸ್ವಾಮಿಗಳು ಕಟ್ಟಿದ ಮಠವಲ್ಲ, ಮೊದಲೇ ಇದ್ದ ಮಠಕ್ಕೆ ಇವರು ಬಂದರು. ಅಂದರೆ ಅದರ ಸಂಪ್ರದಾಯವನ್ನು ಒಪ್ಪಿಕೊಂಡು ಇವರು ಗದ್ದುಗೆ ಏರಿದವರು. ಅಂದಾಗ ಜಗದ್ಗುರು ಎಂಬ ಸಾಂಪ್ರದಾಯಿಕ ಬಿರುದನ್ನು ಇವರು ಬಿಡುವ ಅಧಿಕಾರ ಇವರಿಗೆ ಇರಲಿಲ್ಲ. ಒಂದು ಧರ್ಮವು ಸಂಸ್ಥೀಕರಣ ಹೊಂದುವಾಗ ಕೆಲವೊಂದು ಪದವಿ, ಬಿರುದಾವಳಿ ಅಗತ್ಯವೆನಿಸಿದಾಗ ಅವು ಆಚರಣೆಗೆ ಬರುತ್ತವೆ. ಅವುಗಳಿಗೆ ಸೈದ್ಧಾಂತಿಕ ಪರಿಕಲ್ಪನೆ ಇರುತ್ತದೆ. 'ಶರಣ' ಪದ ಸಾತ್ವಿಕನು, ಸನ್ಮಾರ್ಗಿಯೂ ಆದ ಗೃಹಸ್ಥನಿಗೆ ಅನ್ವಯವಾಗುತ್ತದೆ. ಅಂದಾಗ ವಿರಕ್ತರಾದ ಸ್ವಾಮಿಗಳು ಜಗದ್ಗುರು ಪದ ತ್ಯಜಿಸಿ 'ಶರಣ'ಎಂಬ ಪದ ಬಳಕೆ ಮಾಡಿಕೊಳ್ಳುವ ಬದಲು ಪೀಠ ತ್ಯಾಗ ಮಾಡಿ, ಬೇರೆಯವರಿಗೆ ಒಪ್ಪಿಸಿ ತಾವು 'ಶರಣ' ಎಂದು ಬರೆದು ಕೊಳ್ಳಬಹುದಿತ್ತು.

'ಶರಣ' ಪದಕ್ಕಾದರೂ ಅರ್ಹರೆ ? ಎಂಬ ಪ್ರಶ್ನೆ ಉದಿಸುತ್ತಿದೆ. ಶರಣ ಎಂಬ ಸಾತ್ವಿಕ ಜೀವವು ಗೂಂಡಾಗಿರಿ, ಅನ್ಯರ ಆಸ್ತಿ ಕಬಳಿಕೆ, ಹಿಂಸಾವೃತ್ತಿ ಮುಂತಾಗಿ ಮಾಡುವುದುಂಟೆ ? ಅಂಥ ಅನಿಷ್ಟ ಕ್ರಿಯೆಗಳಿಗೆ ಬೆಂಬಲ ನೀಡುವುದುಂಟೆ ? ಹೀಗೆ ಇವರು ಶರಣ ಪದಕ್ಕೂ ಸಹಿತ ಅಪಚಾರ ಮಾಡುತ್ತಿದ್ದಾರೆ.

2. ನಾವು ಬಸವ ಪ್ರೇರಣೆಯಂತೆ ಕೂಡಲ ಸಂಗಮ ಕ್ಷೇತ್ರಕ್ಕೆ ಹೋಗಿ ಅದನ್ನು ಧರ್ಮಕ್ಷೇತ್ರವೆಂದು ಘೋಷಿಸಿ ಕೈಲಾದಷ್ಟು ಕಾರ್ಯ ಮಾಡಿದ್ದೇವೆ. ನಮ್ಮ ಮೇಲೆ ಹೊಟ್ಟೆಯ ಕಿಚ್ಚಿಗೆ ''ಬಸವಣ್ಣನವರು ಕೂಡಲ ಸಂಗಮದಲ್ಲಿ ಲಿಂಗೈಕ್ಯರಾಗಿಲ್ಲ, ಶ್ರೀಶೈಲದಲ್ಲಿ ಆಗಿದ್ದಾರೆ'' ಎಂಬ ಸುಳ್ಳು ಕಥೆ (ಬಸವರ ನೋಟ ಎಂಬ ಪುಸ್ತಕದಲ್ಲಿ) ಬರೆಸಿ ಅದನ್ನು ಧರ್ಮ ಕೇಂದ್ರವನ್ನಾಗಿ ಮಾಡಲು ಯೋಚನೆ ಮಾಡಿದರು. ಅದರಲ್ಲೂ ಯಶಸ್ಸು ಸಾಧಿಸಲಿಲ್ಲ.

ನಂತರ ಅವರ ಗುರುಗಳ ಸಮಾಧಿ ಮಾಡಿರುವ ಹೊಳಲ್ಕೆರೆಯ ಒಂಟಿಕಂಭದ ಮಠದಲ್ಲಿ ಕಾರ್ಯಕ್ರಮವನ್ನು ಜನವರಿ 12,13,14 ರಂದೇ ಹಾಕಿಕೊಳ್ಳುವ ಯೋಜನೆಯನ್ನು ರೂಪಿಸಿದರು. ಅದರ ಉದ್ದೇಶವೇ ನಮ್ಮನ್ನು ನಿಂದಿಸುವುದು. ಎರಡು ವರ್ಷ ನಡೆಯಿತು. ನಂತರ ನಿಂತು ಹೋಯಿತು ಅಂತ ಕಾಣುತ್ತದೆ. ಶರಣ ಮೇಳಕ್ಕೆ ತೊಂದರೆ ಕೊಡಲು ಯೋಜಿಸಿದ ಅವರ ತಂತ್ರಗಳು ಎಷ್ಟು ಭಯಂಕರವಾಗಿದ್ದವು ಎಂಬುದನ್ನು ಈಗಾಗಲೇ ಕಲ್ಯಾಣ ಕಿರಣಗಳಲ್ಲಿ ಬರೆಯಲಾಗಿದೆ.


3. ನಮ್ಮ ಕಾರ್ಯಕ್ರಮಕ್ಕೆ ಬರುವ ಬಸವ ಭಕ್ತರನ್ನು ಬಿಡಿಸಿ ತಮ್ಮತ್ತ ಸೆಳೆಯಲು ಅವರು ಮಾಡದ ತಂತ್ರಗಳೇ ಇಲ್ಲ. ಬಸವ ಕಲ್ಯಾಣಕ್ಕೆ ಹೋಗಿ ಏನಾದರೂ ಕಾರ್ಯಯೋಜನೆ ಹಮ್ಮಿಕೊಳ್ಳಬೇಕು ಎಂದು ನಾವು ಜಾಗವೊಂದನ್ನು ಖರೀದಿಸುತ್ತಲೇ ಅವರ ಕುತಂತ್ರ ಬುದ್ಧಿ ಜಾಗ್ರತವಾಯಿತು. ಕಾಶಪ್ಪ ಮೂಲಿಗೆ ಎಂಬ ಅನಾಮಿಕ ವ್ಯಕ್ತಿಯೊಬ್ಬನನ್ನು ಪ್ರಚೋದಿಸಿ ವಿನಾ ಕಾರಣ ನಮ್ಮ ಜಮೀನಿನ ಮೇಲೆ ಕೇಸ್ ಮಾಡಿಸಿದ್ದೇ ಅಲ್ಲದೆ ಭೀಮಣ್ಣ ಖಂಡ್ರೆ, ಸಚಿವ ಮಲಕರೆಡ್ಡಿ ಮೂಲಕ ಮುಖ್ಯಮಂತ್ರಿ ಎಸ್.ಎಂ.ಕೃಷ್ಣರ ಮೇಲೆ ಒತ್ತಡ ಹೇರಿ ಮೊದಲನೆಯ ಕಲ್ಯಾಣ ಪರ್ವಕ್ಕೆ ಬಂದ ಜನರಿಗೆ ಬಹಳಷ್ಟು ಯಾತನೆ ನೀಡಿದರು. ಡಿ.ಸಿ. ಮತ್ತು ಎಸ್.ಪಿ. ಕಾನೂನಿನ ಎಲ್ಲೆ ದಾಟಿ ಜನರ ಮೇಲೆ ಕೌರ್ಯವನ್ನು ಪ್ರದರ್ಶಿಸಲು ಪೋಲೀಸರನ್ನು ನಿಯೋಜಿಸಿದರು.

ಅನುಭವ ಮಂಟಪವನ್ನು ಅಕ್ರಮವಾಗಿ ಪ್ರವೇಶಿಸಿ, ಸ್ವತಂತ್ರ ಬುದ್ಧಿ-ಆತ್ಮಬಲ ಎರಡೂ ಇಲ್ಲದ ಭಾಲ್ಕಿಯ ಸ್ವಾಮಿಗಳ ಮೇಲೆ ಆರೋಪ ಹೊರಿಸಿ ಚಿತ್ರದುರ್ಗದ ಶ್ರೀಗಳು ಭಾಲ್ಕಿಯ ಸ್ವಾಮಿಗಳನ್ನು ಹೊರಹಾಕಿಸಿ ಭೀಮಣ್ಣ ಖಂಡ್ರೆಯವರ ನೆರವಿನಿಂದ ತಾವು ಅದರ ಕಬ್ಜಾ ಪಡೆದು ತಮ್ಮ ರಬ್ಬರ್ ಸ್ಟಾಂಪ್ ಆಗಿರುವ ವಿ. ಸಿದ್ಧರಾಮಣ್ಣ ಅವರನ್ನು ಅಧ್ಯಕ್ಷರನ್ನಾಗಿರಿಸಿ, ಕಲ್ಯಾಣ ಪರ್ವಕ್ಕೆ ಏಳೆಂಟು ದಿವಸ ಮೊದಲಿಗೆ ಕಿತಾಪತಿ ಎಬ್ಬಿಸಿ ರಕ್ತಪಾತವಾಗುತ್ತದೆ ಎಂದು ಪತ್ರಿಕಾ ಹೇಳಿಕೆ ಕೊಡಿಸುವರು. ಇಂತಹ ಹಿಂಸಾ ಪ್ರವೃತ್ತಿಯ 'ರಕ್ತದಾಹಿ'ಗಳಿಗೆ ಶರಣ ಪದ ನಿಜಕ್ಕೂ ಶೋಭಿಸುವುದೆ ?


4. ಬಸವ ಕೇಂದ್ರ ಎಂಬ ಹೆಸರಿನ ಸಂಸ್ಥೆಗಳನ್ನು ರಾಷ್ಟ್ರೀಯ ಬಸವ ದಳಕ್ಕೆ ಸ್ಪರ್ಧಿಯನ್ನಾಗಿ ಹುಟ್ಟು ಹಾಕಿದರು. ಅವುಗಳಿಗೆ ವಿಧಾಯಕವಾದ ಯಾವುದೇ ವಿಶಿಷ್ಟ ಕಾರ್ಯಯೋಜನೆ ಇಲ್ಲ. ರಾಷ್ಟ್ರೀಯ ಬಸವ ದಳ ಒಡೆಯುವುದು, ಜನರನ್ನು ನಮ್ಮ ವಿರುದ್ಧ ಎತ್ತಿಕಟ್ಟಲು ಪ್ರಚೋದಿಸುವುದಷ್ಟೆ ಅವುಗಳ ಕೆಲಸ ಕೆಲವು ಕಡೆ ಮಾತ್ರ ಕೆಲವು ಚಿಂತನಶೀಲ ಪದಾಧಿಕಾರಿಗಳು ''ಮಾತಾಜಿಯವರನ್ನು ದ್ವೇಷಿಸುವುದಾದರೆ ನಾವು ಇರಲೊಲ್ಲೆವು. ಬೇರೆ ಏನಾದರೂ ವಿಧಾಯಕ ಕಾರ್ಯಕ್ರಮ ಇದ್ದರೆ ಮಾಡುತ್ತೇವೆ'' ಎಂದು ಸ್ಪಷ್ಟವಾಗಿ ಹೇಳಿದ್ದಾರಂತೆ.

5. ತಮಗೆ ಸಂಬಂಧವಿಲ್ಲದ ಆಸ್ತಿಗಳನ್ನು ಕಬಳಿಸಲು ಅವರು ಮತ್ತು ಅವರ ಆಡಳಿತಾಧಿಕಾರಿಗಳು (ಇದಕ್ಕಾಗಿಯೇ ಒಂದು ವಕೀಲರ ವಿಶೇಷ ತಂಡವು ಇದೆಯಂತೆ!) ಮಾಡುವ ಕಾರ್ಯತಂತ್ರಗಳು ನಿಜಕ್ಕೂ ವಿಸ್ಮಯಕರ. ಭಸ್ಮಾಸುರನಂತೆ ಯಾರ ತಲೆಯ ಮೇಲಾದರೂ ಕೈಯಿಟ್ಟು ಅವರ ಆಸ್ತಿಯನ್ನು, ವಾರಸುದಾರರಿಲ್ಲದ ಮಠಗಳನ್ನು, ವಾರಸುದಾರರಿದ್ದರೂ ಅವರನ್ನು ಓಡಿಸಿ ಕಬಳಿಸುವ ಜಾಣ್ಮೆಯನ್ನು ರೂಢಿಸಿಕೊಂಡಿದ್ದಾರೆಂದು ಎಲ್ಲರೂ ಆಡಿಕೊಳ್ಳುತ್ತಾರೆ.


6. ಸಹಜ ಶಿವಯೋಗ : ಜನಪ್ರಿಯತೆ ಪಡೆಯಲು ಇನ್ನಿತರರನ್ನು ಅನುಕರಿಸುವ ಹವ್ಯಾಸ ಅವರದು. ಸಹಜ ರಾಜಯೋಗಕ್ಕೆ ಬದಲು ಸಹಜ ಶಿವಯೋಗ! ಲಿಂಗಾಯತ ಧರ್ಮದಲ್ಲಿ ಇಷ್ಟಲಿಂಗಾರ್ಚನೆಯೇ ಜೀವಾಳ. ಅದರಲ್ಲಿ 5 ಹಂತ. ಅಷ್ಟವಿಧಾರ್ಚನೆ, ಲಿಂಗ ಸ್ತವನ, ಲಿಂಗಾನುಸಂಧಾನ, ಲಿಂಗಧ್ಯಾನ, ತೀರ್ಥ (ಕರುಣ)ಪ್ರಸಾದ ಸ್ವೀಕಾರ ಇವುಗಳಲ್ಲಿ ಕೆಲವನ್ನು



ಮಹಾಮನೆಯ ಬಸವ ಮಂಟಪದಲ್ಲಿ ಅಮೃತಶಿಲಾ ಮೂರ್ತಿ ಪ್ರತಿಷ್ಠಾಪನೆ, ದಿ. 1-5-2004ರಂದು




ಪೂಜ್ಯ ಲಿಂಗಾನಂದ ಅಪ್ಪಾಜಿಯವರ ಪ್ರತಿಕೃತಿ




ಸಮಾವೇಶಕ್ಕೆ ಜ್ಯೋತಿಗಳೊಡನೆ ಆಗಮಿಸುತ್ತಿರುವ ಪೂಜ್ಯ ಮಾತಾಜಿ, ಯೋಗೀಶ್ವರಿ ಮತ್ತಿತರರು




ಉದ್ಘಾಟನಾ ಸಮಾವೇಶಕ್ಕೆ ಆಗಮಿಸುತ್ತಿರುವ ಪೂಜ್ಯರು ಹಾಗೂ ಅತಿಥಿಗಳು



ಉದ್ಘಾಟಕರಾದ ಅಮೇರಿಕಾದ ಆಸ್ಟಿನ್‌ದಲ್ಲಿರುವ ಯೂನಿವರ್ಸಲ್ ಸೆಂಟರ್ ಆಫ್ ಬಸವ ಫಿಲಾಸಫಿಯ ಪ್ರಧಾನ ಕಾರ್ಯದರ್ಶಿ ಯೋಗೀಶ್ವರಿ ಅವರಿಂದ ಆದಿಪ್ರಮಥ ಬಸವಣ್ಣನವರ ಪೂಜೆ



ಉದ್ಘಾಟನಾ ಸಮಾವೇಶದ ವೇದಿಕೆ




ಉದ್ಘಾಟನೆಗೆ ಮುನ್ನ ಪೂಜ್ಯ ಮಾತೆ ಗಂಗಾದೇವಿ ಅವರಿಂದ ಬಸವ ಧ್ವಜಾರೋಹಣ



ಯೋಗೀಶ್ವರಿ ಅವರಿಂದ ಮೂರನೆಯ ಕಲ್ಯಾಣ ಪರ್ವ ಉದ್ಘಾಟನೆ



ಧ್ವಜ ವಂದನೆಯಲ್ಲಿ ಭಾಗವಹಿಸಿರುವ ಶರಣರು




ಧ್ವಜ ವಂದನೆಯಲ್ಲಿ ಭಾಗವಹಿಸಿರುವ ಶರಣೆಯರು




ಕಲ್ಯಾಣ ಪರ್ವ - ಹುತಾತ್ಮ ಶರಣ ಹರಳಯ್ಯ ವೇದಿಕೆ




ಕಲ್ಯಾಣ ಪರ್ವದ ವೇದಿಕೆ ಮೇಲೆ ಅತಿಥಿಗಳು, ಮಾರುತಿ ಹುಣಜೀಕರ್, ಶಿವರಾಜ್ ಪಾಟೀಲ್, ಸುರೇಂದ್ರ ದಂಡೆ, ಶರಣ ಬಸಪ್ಪ ಖೇಣಿ, ಸುಭಾಷ್ ಅಷ್ಟಾರೆ




ರಾಷ್ಟ್ರೀಯ ಭಾವೈಕ್ಯತಾ ಗೋಷ್ಠಿ 1-5-2004, ಸಂಜೆ 6-00 ಚನ್ನಬಸವರಾಜ ಸ್ವಾಮಿಗಳಿಂದ ಉದ್ಘಾಟನೆ-ಎಡದಿಂದ ಬಲಕ್ಕೆ ಪುಟ್ಟರುದ್ರಪ್ಪ ಶಂಕರಪ್ಪ ಮಹಾಂತಗೋಳ್, ಕೆ. ಬಸವರಾಜ್, ಚನ್ನಬಸವಾನಂದ ಸ್ವಾಮೀಜಿ, ಬಸವಕುಮಾರ್ ಸ್ವಾಮೀಜಿ




ಎಡದಿಂದ ಬಲಕ್ಕೆ ಗಂಗಾಂಬಿಕೆ ಬಸವರಾಜ್, ವಿಠ್ಠಲ್ ಡಾಕುಳಗೆ, ಶಿವಪ್ಪ ಹೊಳಕುಂದೆ, ರಮೇಶ್



2-5-2004, ಬೆಳಿಗ್ಗೆ 10-30 ಶರಣ ವಂದನೆಗೆ ಮೊದಲು ಧ್ವಜವಂದನೆ, ಪುಟ್ಟರುದ್ರಪ್ಪನವರಿಂದ ಧ್ವಜಾರೋಹಣ




ಶರಣ ವಂದನೆ, ಶರಣರಿಗೆ ಶರಣಾರ್ಥಿ, ಸಿದ್ಧರಾಮೇಶ್ವರ ವಿರಚಿತ ಮಿಶ್ರ ಸ್ತೋತ್ರ ತ್ರಿವಿಧಿಯ ಪಠಣ, ಪೂಜ್ಯ ಮಾತಾಜಿ, ಪೂಜ್ಯ ಗಂಗಾ ಮಾತಾಜಿ, ಪೂಜ್ಯ ಅಲ್ಲಮಪ್ರಭು ಸ್ವಾಮೀಜಿ, ಪೂಜ್ಯ ಚನ್ನಬಸವರಾಜ ಸ್ವಾಮೀಜಿ, ಪೂಜ್ಯ ಚನ್ನಬಸವಾನಂದ ಸ್ವಾಮೀಜಿ, ಪೂಜ್ಯ ಸಿದ್ಧರಾಮೇಶ್ವರ ಸ್ವಾಮೀಜಿ, ಪೂಜ್ಯ ಬಸವಕುಮಾರ ಸ್ವಾಮೀಜಿಯವರಿಂದ




ಶರಣ ವಂದನೆಯಲ್ಲಿ ತಲ್ಲೀನರಾಗಿರುವ ಶರಣ ಸಮೂಹ




ಶರಣ ವಂದನೆಯಲ್ಲಿ ತಲ್ಲೀನರಾಗಿರುವ ಶರಣೆಯರ ಸಮೂಹ



ಮಡಿವಾಳ ಮಾಚಿದೇವ ಜಯಂತಿಯ ಉದ್ಘಾಟನೆ ಅರುಣಕುಮಾರ್ ಪಾಟೀಲರಿಂದ




ಸನ್ನಿಧಿ : ಬಸವರಾಜ ದೇವರು ಸ್ವಾಮೀಜಿ ಮುಖ್ಯ ಅತಿಥಿ, ಯೋಗೀಶ್ವರಿ




ಸಾಮೂಹಿಕ ಇಷ್ಟಲಿಂಗಾರ್ಚನಾ ಪ್ರಾತ್ಯಕ್ಷಿಕೆ ಪೂಜ್ಯ ಶ್ರೀ ಅಲ್ಲಮಪ್ರಭು ಸ್ವಾಮೀಜಿ ಮತ್ತು
ಪೂಜ್ಯ ಶ್ರೀ ಚನ್ನ ಬಸವಾನಂದ ಸ್ವಾಮೀಜಿ ಅವರಿಂದ



ಇಷ್ಟಲಿಂಗಾರ್ಚನೆಯಲ್ಲಿ ತಲ್ಲೀನರಾಗಿರುವ ಶರಣೆಯರ ವಿಭಾಗ




ಪೂಜ್ಯ ಗಂಗಾ ಮಾತಾಜಿಯಿಂದ ಜಗದ್ಗುರು ಅಲ್ಲಮಪ್ರಭು ಶೂನ್ಯಪೀಠದ ಬಗ್ಗೆ ಪ್ರಾಸ್ತಾವಿಕ ಭಾಷಣ



ಪೀಠಾರೋಹಣ ವಾರ್ಷಿಕೋತ್ಸವ ಉದ್ಘಾಟನೆ ಜಗದ್ಗುರು ರೇವಣಸಿದ್ಧೇಶ್ವರ ಮಠದ
ಪೂಜ್ಯ ಬಸವರಾಜ ದೇವರು ಸ್ವಾಮಿಗಳಿಂದ




ಜಗದ್ಗುರು ಅಲ್ಲಮಪ್ರಭು ಶೂನ್ಯ ಪೀಠಾರೋಹಣಕ್ಕೆ ಪೂರ್ವದಲ್ಲಿ
ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರಿಂದ ಪೂಜೆ




ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳಿಂದ ಆದಿಪ್ರಮಥ ಬಸವಣ್ಣನವರ ಪೂಜೆ




ಪೀಠಾರೋಹಣ ಮಾಡಿದ ಅಲ್ಲಮಪ್ರಭು ಸ್ವಾಮಿಗಳಿಗೆ ಪೂಜ್ಯ ಮಾತಾಜಿಯವರಿಂದ ಮುಕುಟಧಾರಣೆ



ಪೂಜ್ಯ ಮಾತಾಜಿಯವರಿಂದ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿಯವರಿಗೆ ಆರತಿ




ಪೂಜ್ಯ ಶೂನ್ಯ ಪೀಠಾಧೀಶರಿಗೆ ಗೌರವಾರ್ಪಣೆ



ಪೀಠಾರೋಹಣದ ನಂತರ ಪೂಜ್ಯ ಶೂನ್ಯಪೀಠದ ಜಗದ್ಗುರುಗಳಿಂದ ಸಂದೇಶ




ಎಲ್ಲರಿಗೆ ಬೆಲ್ಲಾದ ಕಲ್ಯಾಣ ಬಸವಯ್ಯ-ಕಲ್ಯಾಣ ಕ್ರಾಂತಿಯ ನೃತ್ಯರೂಪಕ ಕುಮಾರಿ ಪ್ರತಿಭಾ ಗರಗ ಕುಮಾರಿ ವಚನಸುಧಾ ಮತ್ತು ಸಂಗಡಿಗರಿಂದ



ವಚನ ಸಾಹಿತ್ಯ ರಕ್ಷಣೆಗಾಗಿ ಖಡ್ಗ ಹಿಡಿದು ಹೋರಾಡಿದ ಮಡಿವಾಳ ಮಾಚಿದೇವ (ಚನ್ನಬಸವರಾಜ ಸ್ವಾಮೀಜಿ ಮತ್ತು ಅಕ್ಕ ನಾಗಮ್ಮ (ಶಾಂತಾ) ಖಡ್ಗಧಾರಿಗಳಾಗಿ ಸೈನಿಕರೊಡನೆ ಹೋರಾಡುತ್ತಿರುವುದು



ಧರ್ಮ ಚಿಂತನಗೋಷ್ಠಿಯ ಉದ್ಘಾಟನೆ



ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಭದ್ರಾವತಿಯ ಈಗಿನ ಶಾಸಕ ಶ್ರೀ ಸಂಗಮೇಶ್ವರ್ ಅವರಿಂದ ಭಾಷಣ



ಬೀದರ್‌ದಲ್ಲಿ ಬಸವ ಜಯಂತಿಯ ಮೆರವಣಿಗೆಯಲ್ಲಿ ಬಸವೇಶ್ವರ ಮತ್ತು ಅಕ್ಕಮಹಾದೇವಿ ಪಾತ್ರಧಾರಿಗಳು



ಮೆರವಣಿಗೆಯ ನಂತರ ಉಪನ್ಯಾಸ ಕಾರ್ಯಕ್ರಮ



ಬೆಂಗಳೂರು ಬಸವ ಮಂಟಪದಲ್ಲಿ ಬಸವ ಜಯಂತಿ ಕಾರ್ಯಕ್ರಮ



ಪ್ರಾರ್ಥನಾ ಕಾರ್ಯಕ್ರಮದಲ್ಲಿ ಭಾಗಿಗಳಾದ ಶರಣ ಬಂಧುಗಳು

ತೆಗೆದುಹಾಕಿ 'ಭಕ್ತಿ ರಹಿತವಾದ' ಅನುಸಂಧಾನ ಕಲಿಸುವರಂತೆ. ಇನ್ನೊಂದು ತಮಾಷೆ ಎಂದರೆ ಜೈಲಿನಂತಹ ಎಲ್ಲ ಜಾತಿಮತಪಂಥ ಧರ್ಮಗಳು ಇರುವ ಸ್ಥಳದಲ್ಲಿ ಎಲ್ಲರಿಗೂ ಇಷ್ಟಲಿಂಗಗಳನ್ನು ಗೋಲಿಗಜ್ಜುಗಗಳಂತೆ ವಿತರಿಸಿ, ದೃಷ್ಟಿಯೋಗ ಮಾಡಲು ಕಲಿಸುವರಂತೆ. ಯಾವುದೇ ಪೂರ್ವಸಿದ್ಧತೆ, ತರಬೇತಿ ಇಲ್ಲದೆ ಹಾಗೆ ಇಷ್ಟಲಿಂಗಗಳನ್ನು ಹಂಚುವುದು ಉಚಿತವೆ ?

ಮದುವೆಯಲ್ಲಿ ರುದ್ರಾಕ್ಷಿಯನ್ನು ಮಾಂಗಲ್ಯದ ಬದಲಿಗೆ ಕಟ್ಟಿಸುವ 'ಕ್ರಾಂತಿ'(ಭ್ರಾಂತಿ)ಕಾರಕ ವಿಷಯ ಒಮ್ಮೆ ಒಂದು ಪ್ರಮುಖ ಪತ್ರಿಕೆಯಲ್ಲಿ ಬಂದಿತ್ತು. ರುದ್ರಾಕ್ಷಿ ಅಷ್ಟಾವರಣಗಳಲ್ಲಿ ಒಂದು. ಗುರುವು ಆಶೀರ್ವದಿಸಿ ರುದ್ರಾಕ್ಷಿಯನ್ನು ಭಕ್ತರಿಗೆ ಹಾಕುವುದುಂಟು. ಹಾಗೆ ಓರ್ವ ಪುರುಷ ಗುರುವು ಸ್ತ್ರೀ ಭಕ್ತರಿಗೆ ಹಾಕಿದರೆ ಬೃಹಸ್ಮರದ ಶ್ರೀಗಳ ಕ್ರಾಂತಿಯ ಕಲ್ಪನೆಯಲ್ಲಿ ಪತಿಯೇ ಆದಂತೆ ಅಲ್ಲವೆ ? ಧಾರ್ಮಿಕ ಲಾಂಛನವನ್ನು ಪತಿಯ ಕುರುಹನ್ನಾಗಿ ಬಳಸುವುದು ಅವಿವೇಕ ರಮಣೀಯವಲ್ಲವೆ ?

7. ಜಾತಿಗೊಂದೊಂದು ಪೀಠ : ಜಾತಿ ಉಪಜಾತಿಗಳಿಗೊಂದೊಂದು ಪೀಠ ಮಾಡಿ, ಆ ಗುಂಪುಗಳಲ್ಲಿ ಸೀಳು ಹುಟ್ಟಿಸಿ, ಅವನ್ನು ಬಲಪಡಿಸುವುದು ಬಸವಣ್ಣನವರ ಕ್ರಾಂತಿಯ ಉದ್ದೇಶವಾಗಿರಲಿಲ್ಲ. ಮಾನವ ಸಮಾಜ ದೇವ ನಿರ್ಮಿತ. ಆದರೆ ಮಾನವರನ್ನು ಉದ್ಯೋಗಗಳ ಆಧಾರದ ಮೇಲೆ ವಿಭಜಿಸಿ, ಉದ್ಯೋಗಗಳನ್ನು ಮೇಲುಕೀಳೆಂದು ವಿಂಗಡಿಸಿದ್ದಲ್ಲದೆ ಆ ಉದ್ಯೋಗಗಳನ್ನು ಹಿಡಿದು ಉದ್ಯೋಗಿಗಳನ್ನು ಮೇಲು-ಕೀಳೆಂದು ವರ್ಗೀಕರಿಸಿದರು. ಇದು ತಪ್ಪು. ಎರಡೇ ಜಾತಿಗಳು ಸತ್ಯ ಸ್ತ್ರೀ-ಪುರುಷ ಎಂದು. ಇಲ್ಲಿ ಸಹ ಮೇಲು-ಕೀಳು ಎಂಬುದು ತಪ್ಪು. ನೈಸರ್ಗಿಕ ಕರ್ತವ್ಯ ಪಾಲನೆಗಾಗಿ ಸ್ತ್ರೀ-ಪುರುಷರ ಸೃಷ್ಟಿಯಾಗಿದೆ. ಇಬ್ಬರೂ ಸಮಾನರು. ಎರಡು ವರ್ಗಗಳಿವೆ; ಅವೆಂದರೆ ಮಾನವ-ಶರಣ, ಮರೆತವ ಮಾನವ, ಅರಿತವ ಶರಣ. ಮರೆವಿನ ಸೃಷ್ಟಿಯಲ್ಲಿ ಬಂದ ಮಾನವ ಅರಿವಿನ ಸೃಷ್ಟಿಗೆ ಏರಲು ಎಲ್ಲ ಅವಕಾಶ ಹೊಂದಿದ್ದಾನೆ. ಆಚಾರದಿಂದ ಭಕ್ತ, ಅರಿವಿನಿಂದ ಗುರು, ಅನುಭಾವದಿಂದ ಜಂಗಮ ಯಾರು ಬೇಕಾದರೂ ಈ ಸಾಧನೆಯಿಂದ ಮೇಲೇರಬಹುದು. ಅಂಥ ಅರ್ಹತೆ ಹೊಂದಿದವನನ್ನು ವರ್ಣ ಜಾತಿ ಭೇದ ಮಾಡದೆ ಪೀಠಕ್ಕೆ ಏರಿಸಬಹುದು. ಇದು ಬಸವ ತತ್ತ್ವ. ಇದರ ತಳಹದಿಯ ಮೇಲೆಯೇ ಶೂದ್ರಾತಿಶೂದ್ರ ಕುಲದಲ್ಲಿ ಹುಟ್ಟಿದ್ದರೂ ಮಹಾಜ್ಞಾನಿಯಾದ ಪ್ರಭುದೇವರನ್ನು ಬಸವಣ್ಣನವರು ಶೂನ್ಯಪೀಠದ ಪ್ರಥಮಗುರುವನ್ನಾಗಿ ಮಾಡಿದರು. ಅದೇ ರೀತಿ ಶಿವಮೂರ್ತಿ ಸ್ವಾಮಿಗಳು ಬಸವ ತತ್ತ್ವ ಪಾಲಕರೇ ಆಗಿದ್ದಿದ್ದರೆ ಬೇರೆ ಬೇರೆ ಜಾತಿ, ಉಪಜಾತಿಗೊಂದೊಂದು ಪೀಠ ಮಾಡುವ ಬದಲು ತಮ್ಮ ಶಾಖಾ ಮಠಗಳಿಗೆ ಅವರುಗಳನ್ನು ಅಧಿಕಾರಿಗಳನ್ನಾಗಿ ಮಾಡಿ, ಅವರುಗಳನ್ನು ಧರ್ಮಪ್ರಚಾರಕ್ಕೆ ತೊಡಗಿಸಬಹುದಿತ್ತು. ಅವರು ಅರ್ಹತೆಯ ಬಲದ ಮೇಲೆ ಎಲ್ಲರಿಗೂ ಗುರುವಾಗುತ್ತಿದ್ದರು; ಈಗಿನಂತೆ ಅವರ ಜಾತಿ, ಉಪಜಾತಿಗಷ್ಟೇ ಸೀಮಿತವಾಗಿ ಗುರುವಾಗುತ್ತಿರಲಿಲ್ಲ ಮತ್ತು ಅವರ ಜಾತಿಗಳವರನ್ನು ಮತ್ತು ಇತರ ಎಲ್ಲರನ್ನು ಉದ್ಧರಿಸುವವರಾಗುತ್ತಿದ್ದರಲ್ಲವೆ ?

ಅವರನ್ನು ಗುರು ಜಂಗಮರನ್ನಾಗಿ ಸ್ವೀಕರಿಸಲು ಬೇಕಾದ ಬೌದ್ಧಿಕ ತರಬೇತಿಯನ್ನು ವಚನ ಸಾಹಿತ್ಯದ ಮೂಲಕ ಲಿಂಗಾಯತರಿಗೆ ಮತ್ತು ಇತರ ಸವರ್ಣೀಯರಿಗೆ ಕೊಡಬಹುದಿತ್ತು. ಸಮಸ್ಯೆ

ಎಲ್ಲಿದೆ ? ಅದಕ್ಕೆ ಪರಿಹಾರ ಹೇಗೆ ? ಎಂಬುದನ್ನು ಸರಿಯಾಗಿ ಚಿಂತಿಸದೆ ಶಿವಮೂರ್ತಿ ಸ್ವಾಮಿಗಳು ಒಡ್ಡೊಡ್ಡಾಗಿ ಪರಿಹಾರ ಹುಡುಕುತ್ತ, ಕ್ರಾಂತಿಕಾರಿ ಎನಿಸದೆ ಭ್ರಾಂತಿಕಾರಿ ಎನಿಸುವರು.

ಈಗ ಅವರು ಕೈಗೊಂಡ ನಿರ್ಣಯವಂತೂ ತೀರಾ ವಿಲಕ್ಷಣ. ''ಸಹವಾಸದಿಂದ ಸನ್ಯಾಸಿ ಕೆಟ್ಟ'' ಎಂಬ ಗಾದೆ ಇವರ ವಿಷಯದಲ್ಲಿ ಸಾಕಾರ ರೂಪ ತಳೆದಂತೆ ತೋರುತ್ತದೆ. ಕೂಡಲ ಸಂಗಮವನ್ನೇ ಆಯ್ದುಕೊಂಡು ಸಮ್ಮೇಳನ ಮಾಡಿ, ಅದಕ್ಕೆ ಬಸವ ಧರ್ಮ ಸಮ್ಮೇಳನ ಎಂದು ಕರೆದು, ಹಲವಾರು ಅವರ ಬೆಂಬಲಿಗ ಸ್ವಾಮಿಗಳು ಮತ್ತು ಭಕ್ತರನ್ನೂ ಸಿಕ್ಕಿಹಾಕಿಸುವಂತೆ ''ಬಸವ ಧರ್ಮ ಸ್ವೀಕರಿಸುವವರಿಗೆ ಮಾಂಸಾಹಾರದ ನಿರ್ಬಂಧವಿಲ್ಲ'' ಎಂದು ಪತ್ರಿಕಾ ಹೇಳಿಕೆ ಕೊಟ್ಟರು. ಉಳಿದ ಸ್ವಾಮಿಗಳು ಇಂಗುತಿಂದ ಮಂಗನಂತಾದರು. ಇವರನ್ನು ತಕ್ಷಣವೇ ವಿರೋಧಿಸುವ ಧೈರ್ಯವಿಲ್ಲ. ಈ ಹೇಳಿಕೆ ವಿಪರೀತ ಚರ್ಚೆಗೆ ಗ್ರಾಸವಾಗಿದೆ.

ಈ ಹೇಳಿಕೆಯಲ್ಲಿ ಎರಡು ಭಾಗಗಳಿವೆ. **1. ಬಸವ ಧರ್ಮ ಸ್ವೀಕಾರಕ್ಕೆ ಮಾಂಸಾಹಾರಿಗಳಿಗೆ ನಿರ್ಬಂಧವಿಲ್ಲ.** ಪೂರ್ವಾರ್ಧದ ಈ ಮಾತು ಸರಿ. ಮಾನವ ಜೀವಿಯಾಗಿ ಹುಟ್ಟಿದ ಎಲ್ಲರಿಗೂ ಜಾತಿ, ಕುಲ, ವರ್ಣ, ವರ್ಗ, ಉದ್ಯೋಗ, ಲಿಂಗ ಭೇದವಿಲ್ಲದೆ ಧರ್ಮ ಸಂಸ್ಕಾರವು ಸಿಗಬೇಕು. ಧಾರ್ಮಿಕ, ಸಾಮಾಜಿಕ ಹಕ್ಕುಗಳು ಎಲ್ಲರಿಗೂ ಲಭ್ಯವಾಗಬೇಕು. ಇದೇ ಕ್ರಾಂತಿಪುರುಷ ಬಸವಣ್ಣನವರ ಹೋರಾಟದ ಧ್ಯೇಯವಾಗಿತ್ತು. ಆದ್ದರಿಂದ ಮಾಂಸಾಹಾರಿಯೇ ಇರಲಿ, ಸಸ್ಯಾಹಾರಿಯೇ ಇರಲಿ, ನರಭಕ್ಷಕರೇ ಇರಲಿ. ಬಸವ ಧರ್ಮವನ್ನು ಅಥವಾ ಬಸವ ಸಂಸ್ಥಾಪಿತ ಲಿಂಗಾಯತ ಧರ್ಮವನ್ನು ಸೇರುವ ಅವಕಾಶ ಮುಕ್ತವಾಗಿರಬೇಕು. ಇದಕ್ಕೆ ಕೆಲವು ಬ್ರಾಹ್ಮಣ ಮತ್ತು ವೀರಶೈವ ಪುರೋಹಿತಶಾಹಿಗಳ ಒಪ್ಪಿಗೆ ಇರದಿದ್ದರೂ ಬಸವ ತತ್ತ್ವಾನುಯಾಯಿಗಳ ಸಹ ಮತ ಪೂರ್ಣವಾಗಿ ಇರುತ್ತದೆ.

ಆದರೆ ಮುಂದಿನ ಉತ್ತರಾರ್ಧದ ಹೇಳಿಕೆಯ ಸಾರ ಹೀಗಿದೆ : **2. ''ದೀಕ್ಷಾ ನಂತರವೂ ಮಾಂಸಾಹಾರ ಮುಂದುವರಿಸಿಯೂ ಬಸವ ಧರ್ಮಿ ಆಗಿರಬಹುದು. ಏಕೆಂದರೆ ಆಹಾರವು ವೈಯಕ್ತಿಕ ಅಭಿರುಚಿಗೆ ಸೇರಿದ್ದು''.**

ಈ ಭಾಗವೇ ಇಂದು ವಿವಾದಕ್ಕೆ ಒಳಗಾಗಿರುವುದು. ''ಮಾಂಸಾಹಾರಿಗಳಿಗೆ ಧರ್ಮ ಸ್ವೀಕಾರಕ್ಕೆ ನಿರ್ಬಂಧವಿಲ್ಲ'' ಎಂಬುದನ್ನು ಶಿವಮೂರ್ತಿ ಸ್ವಾಮಿಗಳೇನು ಹೇಳುವುದಿದೆ ? 12ನೆಯ ಶತಮಾನದಲ್ಲೇ ಮಡಿವಂತ ಜಾತಿಗಳವರ ವಿರೋಧ ಎದುರಿಸಿ ಧರ್ಮಪಿತರೇ ಕ್ಷತ್ರಿಯರು, ಶೂದ್ರರು, ಶೂದ್ರಾತಿಶೂದ್ರರು ಮತ್ತು ಅಸ್ಪೃಶ್ಯರೆಲ್ಲರಿಗೂ ಅವರು ಮಾಂಸಾಹಾರಿಗಳಾಗಿದ್ದರೂ ದೀಕ್ಷೆಯನ್ನು ನೀಡಿದ್ದಾರೆ.

ಸಾಮಾನ್ಯವಾಗಿ ಮತಾಂತರಕ್ಕೆ 3 ಕಾರಣಗಳಿರುತ್ತವೆ.

1. ಬೌದ್ಧಿಕ (Intellectual)
2. ಅಧ್ಯಾತ್ಮಿಕ (Spiritual)
3. ಸಾಮಾಜಿಕ (Social)

ಒಂದು ಧರ್ಮದ ತತ್ತ್ವವನ್ನು ಬೌದ್ಧಿಕವಾಗಿ ಮೆಚ್ಚಿಕೊಂಡು ಆ ಧರ್ಮವನ್ನು

ಸ್ವೀಕರಿಸುವುದು. ಉದಾಹರಣೆಗೆ ಬಸವಣ್ಣನವರ ಏಕದೇವೋಪಾಸನೆ, ಸಮಾನತೆ ಮುಂತಾದುವನ್ನು ಅರಿತು ದೀಕ್ಷೆ ಪಡೆಯುವುದು ಬೌದ್ಧಿಕ ಕಾರಣಕ್ಕೆ ಆಗುವ ಮತಾಂತರ.

ಇಲ್ಲಿಯ ದೃಷ್ಟಿ(ತ್ರಾಟಕ)ಯೋಗ, ಅನುಭೂತಿ, ದಾರ್ಶನಿಕ ಮೌಲ್ಯಗಳಿಗೆ ಮನಸೋತು ಆಗುವ ಮತಾಂತರ ಅಧ್ಯಾತ್ಮಿಕ. ಹಿಂದು ಸಮಾಜದೊಳಗಣ ತಿರಸ್ಕಾರ, ಅಸ್ಪೃಶ್ಯತೆ ಮುಂತಾದವುಗಳಿಂದ ಮನನೊಂದು ಸಾಮಾಜಿಕ ಸ್ಥಾನಮಾನ (Social status) ಹಕ್ಕುಗಳು (rights) ಮುಂತಾದ್ದಕ್ಕೆ ಆಗುವುದು ಸಾಮಾಜಿಕ ಮತಾಂತರ. ಮೂರನೆಯ ಮತಾಂತರದಲ್ಲಿ ವ್ಯಕ್ತಿಗಳ ಆಂತರಿಕ ಬದಲಾವಣೆ ನಗಣ್ಯ. ಅಲ್ಲಿ ಕೇವಲ ಬಹಿರಂಗಿಕ ಬದಲಾವಣೆ, ನಾಮಾಂತರ ಮಾತ್ರವೇ ಇರುತ್ತದೆ. ಬೌದ್ಧಿಕ ಮತಾಂತರದಲ್ಲಿ ಭಾವುಕತೆಗಿಂತಲೂ ವೈಚಾರಿಕತೆ ಪ್ರಧಾನವಾಗಿರುತ್ತದೆ. ಅಧ್ಯಾತ್ಮಿಕ ಮತಾಂತರದಲ್ಲಿ ಆಂತರಿಕ ಬದಲಾವಣೆ, ಸಾಧನೆಗೆ ಪ್ರಾಧಾನ್ಯವಿರುತ್ತದೆ. ಈ ಹಂಬಲದವರು ಬಸವ ಧರ್ಮದ ಸಾತ್ವಿಕತೆ, ಅಧ್ಯಾತ್ಮಿಕತೆ, ಆಹಾರ ಶುದ್ಧಿ, ವಿಚಾರ ಶುದ್ಧಿಗೆ ಆಕರ್ಷಿತರಾಗಿ ಬರುತ್ತಾರೆ. ಹೀಗೆ ಸ್ವಯಂ ಪ್ರೇರಣೆಯಿಂದ ಲಿಂಗಾಯತೇತರ ಜಾತಿಗಳಿಂದ ಬಂದ ನಮ್ಮ ಅನೇಕ ಶರಣರ ಆಚರಣೆ ನೋಡಿ ಜಾತಿಯಿಂದ ಲಿಂಗಾಯತ ಎಂದುಕೊಳ್ಳುವವರು ನಾಚಿ ನೀರಾಗುವುದುಂಟು. **''ರತ್ನ, ಮೌಕ್ತಿಕದಚ್ಚು ಲಿಂಗದೇವನ ಶರಣರು''** ಎಂದು ಇಂಥವರನ್ನು ಕಂಡಾಗ ಉದ್ಗರಿಸುವಂತೆ ಆಗುತ್ತದೆ.

ಯಾವುದೇ ಆಂತರಿಕ ಬದಲಾವಣೆ ಹೊಂದದೆ ಮೊದಲು ಇದ್ದಂತೆಯೇ ಇರಬಯಸುವ ಮತಾಂತರಾಸಕ್ತರು ಬಸವ ಧರ್ಮಕ್ಕೆ ಆಕರ್ಷಿತರಾಗುವುದು ಕಡಿಮೆ. ಅಧ್ಯಾತ್ಮಿಕ ಆಸಕ್ತರು ಬರುವುದೇ ಬಸವ ಧರ್ಮದ ಸಾತ್ವಿಕ ಸ್ವರೂಪ ಅರಿತು. ಅಂದಾಗ ಮಾಂಸಾಹಾರ ನಿರ್ಬಂಧ ಸಡಲಿಸಿದರೆ ಸಾತ್ವಿಕ ಸ್ವಭಾವದ ಅನುಭಾವಾಸಕ್ತರನ್ನು ಕಳೆದುಕೊಳ್ಳುವಂತೆ ಆಗುವುದು ನಿಶ್ಚಿತ.

ಕಬ್ಬಿಣದ ಕೋಡಗವ ಪರುಷ ಮುಟ್ಟಲು
ಹೊನ್ನಾದರೇನು ಮತ್ತೇನಾದರೇನು
ಮುನ್ನಿನ ರೂಹು ಬಿಡದನ್ನಕ್ಕ ?

ಎನ್ನುತ್ತಾರೆ ಧರ್ಮಪಿತರು. ಬಹಿರಂಗ ಶುದ್ಧಿ-ಅಂತರಂಗ ಶುದ್ಧಿ ಎರಡನ್ನೂ ನಿರೀಕ್ಷಿಸುವ ಬಸವಣ್ಣನವರು ಬರೀ ತೋರಿಕೆಯ ಮತಾಂತರಕ್ಕೆ ಮಾನ್ಯತೆ ಕೊಡುವರೆ ? ಹಲವಾರು ಜಾತಿಗಳವರು ದೀಕ್ಷೆ ಪಡೆದು, ಮಹಿಮಾ ಪುರುಷರಾಗಿ ಶರಣ ಪರಂಪರೆಯ ಮಾಲೆಯ ವಿಶೇಷ ಕುಸುಮಗಳಾಗಿ ಪ್ರಾತಃ ಸ್ಮರಣೀಯರಾಗಿದ್ದಾರೆ. ಆದರಿಷ್ಟೇ ಈ ಮಾರ್ಗಕ್ಕೆ ಬಂದ ಮೇಲೆ ಸಾತ್ವಿಕವಾದ ಆಹಾರ-ವಿಹಾರಗಳನ್ನು ಅಳವಡಿಸಿಕೊಂಡಿದ್ದಾರೆ ಎಂಬುದು ಗಮನಾರ್ಹ.

ಬಸವಣ್ಣನವರು ಮತ್ತು ಅವರ ಸಮಕಾಲೀನರ ಸಂದೇಶದ ಸಾರವೇ ಅಹಿಂಸೆ-ದಯೆ.

ದಯವಿಲ್ಲದ ಧರ್ಮವದೇವುದಯ್ಯಾ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿಯೂ
ದಯವೇ ಧರ್ಮದ ಮೂಲವಯ್ಯ
ಲಿಂಗದೇವಯ್ಯನಂತಲ್ಲದೊಲ್ಲನಯ್ಯ !

*

ಕೊಲ್ಲೆನಯ್ಯ ಪ್ರಾಣಿಗಳ, ಮೆಲ್ಲೆನಯ್ಯ ಬಾಯಿಚ್ಚೆಗೆ
ಬಲ್ಲೆನಯ್ಯ ಮುಂದೆ ತೊಡಕುಂಟೆಂಬುದ.

*

ಅಂಗದಿಚ್ಚೆಗೆ ಮದ್ಯಮಾಂಸವ ತಿಂಬರು
ಕಂಗಳಿಚ್ಚೆಗೆ ಪರವಧುವ ನೆರೆವರು
ಲಿಂಗಲಾಂಛನಧಾರಿಯಾದಲ್ಲಿ ಫಲವೇನು
ಲಿಂಗಪಥವ ತಪ್ಪಿ ನಡೆವವರು ?

*

ಸಕಲ ಜೀವಾತ್ಮರಿಗೆ ಲೇಸು ಬಯಸುವವನೇ ಶರಣ.

ಅಹಿಂಸಾ ತತ್ತ್ವ, ದಯಾಭಾವ ನಿರಾಕಾರ; ಅದು ಸಾಕಾರವಾಗಿ ತೋರುವುದು ಅನ್ಯ ಜೀವಗಳನ್ನು ಹಿಂಸಿಸದೆ, ಕೊಲ್ಲದೆ ಇರುವಲ್ಲಿ ಅಂದಾಗ ದಯೆ-ಮಾನವೀಯತೆಗಳ ತಳಹದಿಯ ಮೇಲೆ ನಿಂತ ಬಸವ ಧರ್ಮದ ಸೈದ್ಧಾಂತಿಕ ಚೌಕಟ್ಟಿನಲ್ಲಿ ಮಾಂಸಾಹಾರವು ಹೇಗೆ ಸ್ಥಾನವನ್ನು ಪಡೆದುಕೊಳ್ಳಬಲ್ಲದು ?

ಚಿತ್ರದುರ್ಗದ ಶಿವಮೂರ್ತಿ ಸ್ವಾಮಿಗಳಿಗೆ ಇಂಥದೊಂದು ಭ್ರಾಂತಿಕಾರಕ ವಿಚಾರ ಯಾವಾಗ ಸ್ಫುರಣಗೊಂಡಿರಬಹುದು? ಕೆಲವರು ವರ್ಷಗಳ ಹಿಂದೆ ಶ್ರೀ ದೇ.ಜವರೇಗೌಡರು ನಿವೃತ್ತ ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳು ಭೇಟಿಯಾದಾಗ ಒಂದು ವಿಷಯ ಪ್ರಸ್ತಾಪಿಸಿದರು. ''ಶೂದ್ರರು, ದಲಿತರು ಮಾಂಸಾಹಾರಿಗಳು. ಅದನ್ನು ಬಿಟ್ಟು ಸಸ್ಯಾಹಾರಿ ಜೀವನ ಪದ್ಧತಿಗೆ ಬರಲು ಅವರಿಗೆ ಕಷ್ಟವೆನಿಸುತ್ತದೆ. ಇದರಲ್ಲಿ ಬದಲಾವಣೆ ಮಾಡಿ ನಿರ್ಬಂಧ ಸಡಲಿಸಿದರೆ ಆಗ ಅನೇಕ ಜನರು ಲಿಂಗಾಯತ ಧರ್ಮವನ್ನು ಸ್ವೀಕರಿಸಬಹುದು''.

ಈ ಬಗ್ಗೆ ನಾವು ಎಷ್ಟೋ ಬಾರಿ ಚಿಂತನಗೋಷ್ಠಿ ಇಟ್ಟು ಚರ್ಚಿಸಿದೆವು. ''ದಯೆ-ಮಾನವೀಯತೆಯೇ ಮುಖ್ಯವಾದ ಬಸವಣ್ಣನವರ ಧರ್ಮದಲ್ಲಿ ಜೀವಹತ್ಯೆ ಮಾಡದಿರುವುದು ಅತ್ಯಂತ ಶ್ರೇಷ್ಠ ಆಚರಣೆಯಾಗಿರುವಾಗ ಅದನ್ನು ತಿದ್ದುಪಡಿ ಮಾಡುವುದು ಸರಿಯೇ ಅಲ್ಲ'' ಎಂಬ ನಿರ್ಧಾರಕ್ಕೆ ಬಂದೆವು.

1. ಮಾಂಸಾಹಾರ ನಿರ್ಬಂಧ ಸಡಲಿಸಿದಾಗ ಹೆಚ್ಚಿನ ಜನರು ಈ ಧರ್ಮಕ್ಕೆ ಮತಾಂತರ ಹೊಂದಬಹುದು ಎಂದು ಕಲ್ಪಿಸಿಕೊಳ್ಳೋಣ. ಆದರೆ ಅದು ಮೂಲಭೂತ ಸತ್ವವನ್ನು (Quality) ಕೊಂದು, ಗಾತ್ರವನ್ನಷ್ಟೇ ಬೆಳೆಸಿದಂತೆ ಆಗದೆ ?

2. ಈ ಕಾಲದಲ್ಲಿ ಧರ್ಮದಲ್ಲಿ ಶ್ರದ್ಧೆಯೇ ಕುಂಠಿತವಾಗುತ್ತಿದೆ. ಪೂಜೆ-ಧ್ಯಾನ, ಜಪ-ತಪಗಳಲ್ಲಿ ಒಟ್ಟಾರೆ ಧಾರ್ಮಿಕ ಆಚರಣೆಗಳಲ್ಲಿಯೇ ಶ್ರದ್ಧೆ ಕಡಿಮೆಯಾಗಿರುವ ಕಾಲಮಾನದಲ್ಲಿ ಮಾಂಸಾಹಾರ ನಿರ್ಬಂಧ ಸಡಲಿಸಿ ಬಸವ ಪ್ರಣೀತ ಲಿಂಗಾಯತ ಧರ್ಮದ ಅಂತಃಸತ್ವ

ಬಲಿಕೊಟ್ಟರೂ, ಇತರರು ಮತಾಂತರ ಹೊಂದುತ್ತಾರೆಂಬ ಭರವಸೆ ಏನು? ಆಗ ಈ ಧರ್ಮದ ಪರಿಸ್ಥಿತಿ ಧರ್ಮಪಿತರು ಹೇಳುವಂತೆ, ''ಅರಸನ ಕಂಡು ಪುರುಷನ ಮರೆದಂತೆ'' ಅಥೋಭ್ರಷ್ಟ ತಥೋಭ್ರಷ್ಟ ಆಗದೆ ? ಓರ್ವ ಗೃಹಿಣಿ ಅರಸನ ಮೆರವಣಿಗೆ ನೋಡುತ್ತ ನಿಂತಿದ್ದಳು. ಆಕೆಯ ಗಂಡನಿಗೆ ಪತ್ನಿಗೆ ಹೆಚ್ಚಿನ ವಸ್ತ್ರ ಆಭರಣ ಕೊಡಿಸುವ ಶಕ್ತಿ ಇರಲಿಲ್ಲ. ಮೆರವಣಿಗೆಯಲ್ಲಿ ಸಾಗುತ್ತಿದ್ದ ರಾಜನ ವೈಭವ ನೋಡಿದಳು. ಅವನನ್ನು ಕೂಡಿದರೆ ಆ ಸಂಪತ್ತು ತನಗೂ ಸಿಗುವುದು ಎಂದು ಆಶಿಸಿ ಮನೆ ತೊರೆದು ಅರಮನೆಗೆ ನಡೆದಳು. ಆದರೆ ಅರಸ ತಿರಸ್ಕಾರದಿಂದ ಅಟ್ಟಿದ. ಮರಳಿ ಮನೆಗೆ ಬಂದಳು. ''ಬಡವನಾದರೂ ತನ್ನ ಗಂಡನೇ ಇರಲಿ'' ಎಂದು ಬಾಗಿಲು ತಟ್ಟಿದಳು. ಇಷ್ಟರೊಳಗೆ ಅರಸನ ಬೆನ್ನು ಹತ್ತಿ ಹೆಂಡತಿ ಹೋದ ವಿಷಯ ತಿಳಿದಿದ್ದ ಗಂಡ ಮನೆಯ ಬಾಗಿಲನ್ನೇ ತೆರೆಯಲಿಲ್ಲ. ಇತ್ತ ಪತಿಯೂ ಕೈಬಿಟ್ಟ ಅತ್ತ ಅರಸನೂ ಸಿಗಲಿಲ್ಲ; ಹಾಗೆ ಲಿಂಗಾಯತ ಧರ್ಮದ ಪರಿಸ್ಥಿತಿಯೂ ಆಗಬಾರದಲ್ಲವೆ ?

12ನೆಯ ಶತಮಾನದಲ್ಲಿ, ಧರ್ಮದಿಂದ ವಂಚಿತರಾಗಿದ್ದ ದಲಿತರಿಗೆ ಧರ್ಮಸಂಸ್ಕಾರ ಕೊಟ್ಟುದಕ್ಕಾಗಿ ಶರಣ. ಹರಳಯ್ಯನವರು ತಮ್ಮ ಮೈಚರ್ಮದಿಂದಲೇ ಚಪ್ಪಲಿ ಮಾಡಿಕೊಟ್ಟರು. ಸಿದ್ಧರಾಮೇಶ್ವರರಂತಹ ಸಿದ್ಧಪುರುಷರು, ''ಕಪಿಲ ಸಿದ್ಧಮಲ್ಲಿಕಾರ್ಜುನನ ಕೂಡಿದೆ ಬಸವಣ್ಣಾ ನೀವು ಗುರುವಾದ ಕಾರಣ'' ಎಂದು ಕೊಂಡಾಡುತ್ತಾರೆ. ಇಂದು, ''ನಿಮ್ಮನು ಉನ್ನತ ಮಟ್ಟಕ್ಕೆ ಒಯ್ಯುತ್ತೇವೆ ಬನ್ನಿ, ಧರ್ಮ ಸ್ವೀಕಾರ ಮಾಡಿರಿ'' ಎಂದರೆ ಎಷ್ಟು ಜನರು ಮುಂದೆ ಬರುವರು? ಸುಖ-ಭೋಗಗಳ ಬೆನ್ನುಹತ್ತಿದ ಜನರಿಗೆ ಧರ್ಮವನ್ನು ಉಚಿತವಾಗಿ ಕೊಡುತ್ತೇವೆಂದರೂ ತೆಗೆದುಕೊಳ್ಳಲೊಲ್ಲರು.

ಶೂದ್ರ, ದಲಿತರಿಗೆ ಉಪಕಾರವಾದೀತೆ ?

ಶುದ್ಧ ಸಸ್ಯಾಹಾರಿ ಸಾತ್ವಿಕ ಧರ್ಮವಾದ ಬಸವ ಪ್ರಣೀತ ಲಿಂಗಾಯತ ಧರ್ಮದ ಆಚರಣೆಯಲ್ಲಿ ಮಾಂಸಾಹಾರ ನಿರ್ಬಂಧ ಸಡಲಿಸುವುದರಿಂದ ಮಾಂಸಾಹಾರಿಗಳಾಗಿರುವ ಜನರಿಗೆ ಉಪಕಾರ ಮಾಡಿದಂತಾಗುವುದೆ ? ಅವರು ಹೆಚ್ಚಿನ ಸಂಖ್ಯೆಯಲ್ಲಿ ಮತಾಂತರಗೊಳ್ಳಲು ಇದು ಸೂಕ್ತವಾದ ಆಮಿಷವೆ ?

ಕೆಲವು ಜನ ಬಸವ ಅಭಿಮಾನಿಗಳು ಇದ್ದಾರೆ. ಅವರಿಗೆ ವಿಶ್ವಗುರು ಬಸವಣ್ಣನವರ ಅಮೋಘ ವ್ಯಕ್ತಿತ್ವ, ಸಮಾಜ ಸುಧಾರಣೆ ಮುಂತಾದವು ಬಹಳ ಇಷ್ಟ. ಹೀಗಾಗಿ ಬಸವಣ್ಣನವರನ್ನು ಕುರಿತು ಅಭಿಮಾನದಿಂದ ಬರೆಯುತ್ತಾರೆ, ಭಾಷಣವನ್ನೂ ಮಾಡುತ್ತಾರೆ. ಆದರೆ ಬಸವಣ್ಣನವರನ್ನು ಸಂಪೂರ್ಣವಾಗಿ ಅನುಸರಿಸಬೇಕೆಂಬ ಉದ್ದೇಶ ಅವರಿಗೆ ಇರುವುದಿಲ್ಲ. ತಮ್ಮ ಜಾತಿಯ ಅಭಿಮಾನ, ಮಾಂಸಾಹಾರ, ಮದ್ಯಪಾನ, ಬಹುದೇವತಾ ಉಪಾಸನೆ ಇತ್ಯಾದಿಗೆ ಪಕ್ಕಾಗಿರುತ್ತಾರೆ. ಇಂಥವರ ಸಾಂಗತ್ಯದಿಂದ ಕೆಲವು ಆದರ್ಶಗಳ ಬಗೆಗೇ ಸಂದೇಹ ಬರುವುದುಂಟು. ಬಹುಶಃ ಶಿವಮೂರ್ತಿ ಸ್ವಾಮಿಗಳಿಗೂ ಅಂಥವರ ಒಡನಾಟ ಜಾಸ್ತಿಯಾಗಿಯೇ ಮಾಂಸಾಹಾರದ ಬಗ್ಗೆ ಹೆಚ್ಚಿನ ಆಸಕ್ತಿ ಮತ್ತು ಅಭಿಮಾನ ಮೂಡಿರಬಹುದೇನೊ! ಆದ್ದರಿಂದ ಅಂಥವರ ಭಾಷಣ, ಬರಹದಿಂದ ನಮ್ಮ ಜ್ಞಾನ ಸಂಗ್ರಹಕ್ಕೆ ಎಷ್ಟು ಬೇಕೋ ಅಷ್ಟನ್ನೇ ತೆಗೆದುಕೊಳ್ಳಬೇಕೇ ವಿನಾ ಅವರು

ಅನುಕರಣೀಯರಾಗರು.

ಬಸವಣ್ಣನವರು ಪ್ರತಿಪಾದಿಸಿದ ಇಷ್ಟಲಿಂಗಧಾರಣೆಯ ಧರ್ಮವು ಶುದ್ಧ ಆಚಾರದ ಮೇಲೆ ನಿಂತ ಸಸ್ಯಾಹಾರಿ ಧರ್ಮ ಎಂದು ತಿಳಿದ ಅನೇಕರು ತಮ್ಮ ಕೆಳಮಟ್ಟದ ಪರಿಸರದಿಂದ ಹೊರಬಂದು ಒಂದು ಸದಾಚಾರದ ಮಾರ್ಗ ಹಿಡಿದು ಪುನರ್ಜನ್ಮ ಪಡೆಯಲು ಹಂಬಲಿಸುತ್ತಾರೆ. ಮಾಂಸಾಹಾರ ನಿರ್ಬಂಧ ಸಡಲಿಸಿದಾಗ ಕೆಳಕಂಡ ಅನಾಹುತಗಳು ಸಂಭವಿಸುತ್ತವೆ :

1. ಸಸ್ಯಾಹಾರಿ ಸಾತ್ವಿಕ ಜೀವನ ವಿಧಾನಕ್ಕೆ ಶತಮಾನಗಳ ಕಾಲದಿಂದ ಅಂಟಿಕೊಂಡು ಬಂದಿರುವ ಲಿಂಗಾಯತ ಕುಟುಂಬಗಳಲ್ಲಿ ಮಾನಸಿಕ ಗೊಂದಲ ಉಂಟಾಗುತ್ತದೆ. ಸುಮಾರು 50 ವರ್ಷಗಳ ಹಿಂದೆ ಅಮೆರಿಕಾ, ಇಂಗ್ಲೆಂಡ್‌ಗೆ ಹೋಗಿ ನೆಲೆಸಿರುವ ಕೆಲವು ಲಿಂಗಾಯತರು ಈಗಲೂ ಇಷ್ಟಲಿಂಗ ಪೂಜೆ-ಸಸ್ಯಾಹಾರ ಉಳಿಸಿಕೊಂಡು, ತಮ್ಮ ಮಕ್ಕಳಲ್ಲೂ ಅದನ್ನೇ ರೂಢಿಸಿದ್ದು ನನಗೆ ಆಶ್ಚರ್ಯ-ಆನಂದ ತಂದಿದೆ. ಶಿವಮೂರ್ತಿ ಶ್ರೀಗಳು ತೆಗೆದುಕೊಂಡ ನಿರ್ಣಯ ಅವರಿಗೆ ಸಹ ಎಂಥಾ ಆಘಾತ ಮಾಡಬಹುದು ಆಲೋಚಿಸಬೇಕು.

2. ತೂಕಡಿಸುವವರಿಗೆ ಹಾಸಿಗೆ ಹಾಸಿಕೊಟ್ಟಂತೆ, ದಾರಿ ತಪ್ಪಿದವರಾಗಿ ಮಾಂಸಾಹಾರವನ್ನು ಕದ್ದು ಮಾಡುವ ಕೆಲವು ಲಿಂಗಾಯತರಿಗೆ ಅಧಿಕೃತವಾಗಿ ಮಾಡಲು ಅಥವಾ ಮನೆಯಲ್ಲೇ ಮಾಡಿಕೊಡಿ ಎಂದು ಹೆಂಡತಿಯನ್ನು ಹಿಂಸಿಸಲು ಲೈಸೆನ್ಸ್ ಕೊಟ್ಟಂತೆ ಆಗುತ್ತದೆ. ಇದರಿಂದ ಪಾಶ್ಚಿಮಾತ್ಯ ಸಂಸ್ಕೃತಿಯನ್ನು ಅಂಧಾನುಕರಣೆ ಮಾಡುವ ಗೃಹಿಣಿಯರೂ ತಪ್ಪುದಾರಿ ಹಿಡಿಯಲು ಅವಕಾಶ ದೊರೆಯುತ್ತದೆ.

3. ಕೆಳ ಜಾತಿಗಳಲ್ಲಿರುವ ಅಧ್ಯಾತ್ಮಿಕ ಜನರು ಉತ್ತಮ ಜೀವನ ವಿಧಾನ ಅಳವಡಿಸಿಕೊಳ್ಳುವ ಹಂಬಲದಿಂದ ಲಿಂಗಾಯತ ದೀಕ್ಷೆ ಪಡೆಯಬೇಕು ಎನ್ನುವವರು, ''ಅಯ್ಯೋ, ಇವರೂ (ಲಿಂಗಾಯತರೂ) ಮಾಂಸಾಹಾರಿಗಳೇ ಅಂದಾಗ ಈ ದೀಕ್ಷೆಯನ್ನೇಕೆ ಪಡೆಯಬೇಕು ?'' ಎಂದು ಹಿಂಜರಿಯುವುದು ಅಸಂಭವವೇನಲ್ಲ.

4. ಇಂದು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಹಲವಾರು ಬಗೆಯ ಸವಲತ್ತುಗಳನ್ನು ದಲಿತರು, ಹಿಂದುಳಿದ ವರ್ಗಗಳಿಗೆ ಕೊಡುತ್ತಿರುವುದರಿಂದ ಅವುಗಳನ್ನು ಕಳೆದುಕೊಂಡು ಹೊಸ ಧರ್ಮದ ಅನುಯಾಯಿಗಳಾಗಲು ಲೌಕಿಕ ಜನರು ಆಸೆ ಪಡುವುದಿಲ್ಲ. ಆಧ್ಯಾತ್ಮ ಜೀವಿಗಳು ಸಾತ್ವಿಕ ಮಾರ್ಗ ಬಯಸಿಯೇ ದೀಕ್ಷೆ ಪಡೆಯುವರು. ಆದರೆ ತಮ್ಮ ಸಮಾಜಕ್ಕೆ ಸಿಗುವ ಸೌಲಭ್ಯಗಳಿಂದ ವಂಚಿತರಾಗಲು ಇಷ್ಟಪಡುವುದಿಲ್ಲ, ಆಗ ಅವರು ಬಹಿರಂಗವಾಗಿ ಮತಾಂತರ ಹೊಂದಿರುವುದನ್ನು ಘೋಷಿಸುವುದಿಲ್ಲ. ಈ ಎಲ್ಲ ವಿಚಾರಗಳ ಹಿನ್ನೆಲೆಯಲ್ಲಿ ಯಾವಾಗಲೂ ಸುಧಾರಣೆ, ತಿದ್ದುಪಡಿ ಕುರಿತು ಚಿಂತನೆ ಮಾಡಬೇಕೆ ವಿನಾ ದುಡುಕಬಾರದು.

ಯಾರು ಸ್ವಯಂ ಪ್ರೇರಣೆಯಿಂದ ಸಾಮಾಜಿಕವಾಗಿ ಮತಾಂತರ ಹೊಂದಿ ಬರುವರೋ ಅವರನ್ನು ತೆರೆದ ಹೃದಯದಿಂದ ಸ್ವಾಗತಿಸೋಣ. ಹೆಚ್ಚಾಗಿ ಅಧ್ಯಾತ್ಮಿಕ ಸಾಧನೆಗೆ ಒತ್ತುಕೊಡುವ ಮೂಲಕ ಎಲ್ಲ ಜಾತಿ ಮತ ಧರ್ಮ ಪಂಥಗಳವರು ಬಸವ ಮಾರ್ಗಕ್ಕೆ ಬರಲು ಪ್ರೇರೇಪಿಸೋಣ. ಇದರಲ್ಲಿ ಅವರ ಬದುಕಿನ ಸಾರ್ಥಕ್ಯವಿದೆ ಮಾತ್ರವಲ್ಲ ಬಸವ ತತ್ತ್ವದ ಸಾರ್ಥಕ್ಯವೂ ಇದೆ.

ದಿ. 17-5-2004 ರಂದು ಕನ್ನಡ ಪ್ರಭಾದಲ್ಲಿ ಪ್ರಕಟಿತ

ಶಿವಮೂರ್ತಿ ಶರಣರ ಸ್ಪಷ್ಟನೆ

ಕನ್ನಡ ಪ್ರಭ ವಾರ್ತೆ, ಚಿತ್ರದುರ್ಗ, ಮೇ 16 (ಕನ್ನಡ ಪ್ರಭಾ 17-5-2004) ಆಹಾರಾಭ್ಯಾಸದಿಂದ ಮನುಷ್ಯನ ಸಾತ್ವಿಕತೆ ಹಾಗೂ ಕ್ರೌರ್ಯಗಳು ನಿರ್ಧರಿಸಲ್ಪಡುತ್ತವೆ ಎನ್ನುವುದು ವಿಜ್ಞಾನ ನಿಷ್ಕರ್ಷಿತ ತೀರ್ಮಾನ ಅಲ್ಲವೆಂದು ಚಿತ್ರದುರ್ಗ ಬಸವ ಕೇಂದ್ರ ಮುರುಘಾಮಠದ ಶಿವಮೂರ್ತಿ ಮುರುಘರಾಜೇಂದ್ರ ಶರಣರು ಅಭಿಪ್ರಾಯಪಟ್ಟಿದ್ದಾರೆ. ಇತ್ತೀಚೆಗೆ ಕೂಡಲ ಸಂಗಮದಲ್ಲಿ ನಡೆದ ಬಸವ ಧರ್ಮ ಸಮ್ಮೇಳನದಲ್ಲಿ ಆಹಾರಾಭ್ಯಾಸಕ್ಕೆ ಸಂಬಂಧಿಸಿದಂತೆ ಕೈಗೊಂಡ ನಿರ್ಣಯ ಹಾಗೂ ಅದಕ್ಕೆ ಪ್ರತಿಯಾಗಿ ಪೀಠ ತ್ಯಜಿಸುವಂತೆ ಕೇಳಿ ಬಂದ ಆಗ್ರಹದ ಹೇಳಿಕೆಗಳಿಗೆ ಸುಮಾರು ಮೂರು ಪುಟದಷ್ಟು ಸ್ಪಷ್ಟನೆ ನೀಡಿರುವ ಶರಣರು ವೀರಶೈವ ಲಿಂಗಾಯತರ ಆಹಾರ ಸಂಹಿತೆಯ ಬಗ್ಗೆ ತಾವು ಮಾತನಾಡಿಲ್ಲವೆಂಬ ಅಂಶವನ್ನು ವಿಷದ ಪಡಿಸಿದ್ದಾರೆ. ಬಸವಾದಿ ಶರಣರು ಸಸ್ಯಾಹಾರವನ್ನು ಒಪ್ಪಿಕೊಂಡವರೆಂದು ನಂಬಿದ್ದೇವೆ. ಅದರಂತೆ ಮಾಂಸಾಹಾರಿಗಳನ್ನು ದೂರವಿಟ್ಟು ಮಡಿವಂತಿಕೆಯನ್ನು ಮೆರೆದವರಲ್ಲ ಎನ್ನುವುದು ಅಷ್ಟೇ ಸ್ಪಷ್ಟವಾಗಿ ಅರ್ಥ ಮಾಡಿಕೊಂಡಿರುತ್ತೇವೆಂಬ ವಿಶ್ವಾಸ ತಮಗಿದೆ.

ದೈಹಿಕ ಅವಶ್ಯಕತೆಯ ಈಡೇರಿಕೆಗಾಗಿಯೇ ಆಹಾರ ಬೇಕು ಮತ್ತು ಅದನ್ನೇ ಪ್ರಸಾದ ಎಂದು ಪರಿಭಾವಿಸಿದ ಬಸವಾದಿ ಶರಣರು ಆಹಾರದ ಬಗ್ಗೆ ಶ್ರೇಷ್ಠ ಮತ್ತು ಕನಿಷ್ಠ ಭಾವನೆಯನ್ನಾಗಲೀ, ಮೇಲು-ಕೀಳೆಂದು ಹೀಗಳೆಯುವ ಜಾತಿ ಜನ್ಮ ಭಾವವನ್ನಾಗಲೀ ಹೊಂದಿರಲಿಲ್ಲವೆನ್ನುವುದು ನನ್ನ ನಂಬಿಕೆ. ಇವರು ಬಳಸುವ ಹೊಲಸು, ಕೊಲೆ, ಮಾದಿಗ ಮುಂತಾದ ಶಬ್ದಗಳಿಗೆ ಕೇವಲ ಪ್ರಾಣಿವಧೆಯೆಂದಷ್ಟೇ ಅರ್ಥವಿಲ್ಲ ಎಂದು ಹೇಳಿದ್ದಾರೆ.

12ನೇ ಶತಮಾನದಲ್ಲಿ ಬಸವಾದಿ ಶರಣರ ಮೇಲೆ ಕಗ್ಗೊಲೆಯಂಥ ಹಿಂಸಾಚಾರದಲ್ಲಿ ತೊಡಗಿದ್ದವರು ಸಸ್ಯಹಾರಿಗಳಾಗಿದ್ದವರೇ ಅಲ್ಲವೆ ? ಇವತ್ತೂ ಇಂಥ ಕೃತ್ಯಗಳಲ್ಲಿ ತೊಡಗಿರುವವರಲ್ಲಿ ಸಸ್ಯಹಾರಿಗಳೆನಿಸಿಕೊಂಡ ಜಾತಿ ಜನಾಂಗದವರಿಲ್ಲವೆ ? ಮಾಂಸಾಹಾರಿಗಳೆಲ್ಲ ಕ್ರೂರಿಗಳೇ ? ಇದಕ್ಕೆ ಸಮಂಜಸ ಉತ್ತರವಿಲ್ಲದಿರುವುದರಿಂದ ಆಹಾರಾಭ್ಯಾಸ ಅವರ ವೈಯುಕ್ತಿಕ ಆಯ್ಕೆ ಎಂದು ನಂಬಿದರೆ ಅದು ಬಸವತತ್ವಗಳಿಗೆ ವಿರುದ್ಧವೇ ಎಂದು ಶಿವಮೂರ್ತಿ ಶರಣರು ಪ್ರಶ್ನಿಸಿದ್ದಾರೆ.

ಇವತ್ತು ಯಾರನ್ನು ಮಾಂಸಹಾರಿಗಳೆಂದು ಸಂಬೋಧಿಸಲಾಗುತ್ತದೆಯೋ ಅವರೆಲ್ಲರೂ ಮಿಶ್ರಾಹಾರಿಗಳು. ಪ್ರಾಣಿ ಬಲಿಯ ಮೂಢ ನಂಬಿಕೆಗೆ ಕಟ್ಟು ಬಿದ್ದು ಬಲಿ ಕೊಟ್ಟ ಪ್ರಾಣಿಯ ಮಾಂಸವನ್ನೇ ದೈವ ಪ್ರಸಾದವೆಂದು ತಿಂದು

ಮಾಂಸಾಹಾರಿಗಳೆನಿಸಿಕೊಂಡವರು ಅವರು. ಮೇಲಾಗಿ ಸಸ್ಯಾಹಾರಿ ಧರ್ಮೀಯರ ಮನೆಗಳಲ್ಲಿ ಮುಚ್ಚು ಮರೆಯಲ್ಲಿ ಮಾಂಸಾಹಾರ ಸೇವಿಸುವವರಿರುವಾಗ, ಅವರನ್ನು ಸಹಿಸಿಕೊಳ್ಳುತ್ತಲೂ ಇರುವಾಗ, ಕೊಟ್ಟುಕೊಳ್ಳುವ ವೈವಾಹಿಕ ಸಂಬಂಧಗಳನ್ನು ಯಾವ ಎಗ್ಗೂ ಇಲ್ಲದೆ ನಡೆಸುತ್ತಿರುವಾಗ, ಅಂಥವರೆಲ್ಲರೂ ಬಸವಣ್ಣನ ತತ್ವಾನುಷ್ಠಾನದ ಲಿಂಗವಂತರೆಂದು ನಂಬಿರುವಾಗ ಯಾವತ್ತೋ ಒಂದು ದಿನ ಮಾಂಸ ತಿಂದು ಮಾಂಸಾಹಾರಿ ಎಂಬ ಮುದ್ರೆ ಒತ್ತಿಸಿಕೊಂಡಿರುವ ಜನರಿಗೇಕೆ ಬಸವತತ್ವಗಳ ನಿರಾಕರಣೆ? ನಮ್ಮ ಮನೆಯವರ ಪರಿವರ್ತನೆ ಸಾಧ್ಯ ಎಂದು ನೀವು ನಂಬಿದರೆ ಮನೆಯ ಹೊರಗಿನವರ ಪರಿವರ್ತನೆ ಕೂಡಾ ಅಷ್ಟೇ ಸಾಧ್ಯ ಎಂದು ನಾವು ನಂಬುತ್ತೇವೆ. ಹಾಗಾಗಿ ಈ ನಿಷೇಧಗಳು ಒಂದು ಹಂತದವರೆಗೆ ಬೇಡ ಎನ್ನುವುದೇ ನನ್ನ ನಿಲುವು.

ಇತ್ತೀಚೆಗೆ ಕೂಡಲ ಸಂಗಮದಲ್ಲಿ ನಡೆದ ಅಖಿಲ ಭಾರತ ಪ್ರಥಮ ಬಸವಧರ್ಮ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳಲ್ಲಿ ಒಂದಾದ 'ಮಾಂಸಾಹಾರಿಯಾಗಿದ್ದು ಬಸವ ಧರ್ಮಾನುಯಾಯಿಯಾಗಿರಬಹುದು' ಎಂಬುದರ ಬಗ್ಗೆ ಸಾಕಷ್ಟು ಚರ್ಚೆ ನಡೆಯುತ್ತಿದೆ. 'ಬಸವ ಧರ್ಮಾನುಯಾಯಿಗಳು ಸಸ್ಯಾಹಾರಿಯಾಗಿರಬೇಕು. ಆಗಿಲ್ಲದಿದ್ದವರು ಸಸ್ಯಾಹಾರಿಗಳಾಗುತ್ತೇವೆಂಬ ದೃಢ ನಿರ್ಧಾರ ಇಂದೇ ಮಾಡಬೇಕು. <u>ಅಷ್ಟರ ಮೇಲೂ ಆಹಾರಾಭ್ಯಾಸ ಅವರವರ ವೈಯುಕ್ತಿಕ ಸ್ವಾತಂತ್ರ್ಯವಾಗಿರುವುದರಿಂದ ಮಾಂಸಾಹಾರಿಯಾಗಿಯೂ ಮುಂದುವರಿಯಬಹುದು'</u> ಎಂಬುದು ಅಂದು ಕೈಗೊಂಡ ನಿರ್ಣಯಗಳಲ್ಲಿ ಒಂದಾಗಿದೆ. ಬಸವ ಧರ್ಮ ಅನುಯಾಯಿಗಳಿಗಾಗಲೀ ಅಥವಾ ಲಿಂಗಾಯತ-ವೀರಶೈವರಿಗಾಗಲೀ ಮಾಂಸಾಹಾರಿಗಳಾಗಬೇಕೆಂದು ಸಮ್ಮೇಳನ ಕರೆ ನೀಡಿಲ್ಲ.

ಕೆಲವರು ಗ್ರಹಿಸಿದಂತೆ ಮಾಂಸಾಹಾರಿಗಳಾಗಿದ್ದುಕೊಂಡು ಬಸವ ಧರ್ಮದ ಅನುಯಾಯಿಗಳಾದ ನಂತರ ಅರ್ಥಾತ್ ಬಸವಣ್ಣನ ತತ್ವಗಳ ಆಶಯವನ್ನು ಅರ್ಥ ಮಾಡಿಕೊಂಡ ನಂತರ ಬಾಯಾಸೆಗಾಗಿ ಮಾಂಸವನ್ನು ಮೆಲ್ಲರು ಎನ್ನುವ ವಿಶ್ವಾಸದಿಂದಲೇ ಹೀಗೆ ಹೇಳಲಾಗಿದೆ. ಜೊತೆಗೆ ಮಾಂಸಾಹಾರದ ಕಾರಣದಿಂದಾಗಿಯೇ ಒಂದು ಜನಾಂಗವನ್ನು ಕೀಳು ಎಂದು ಗುರುತಿಸಿ ಅವರಿಗೆ ಬಸವಣ್ಣನ ಸಂಸ್ಕೃತಿಯನ್ನು ನಿರಾಕರಿಸುತ್ತಿರುವ ಇಂದಿನ ಜಾತಿ ಪ್ರೇರಿತ ಧರ್ಮಾಂಧತೆಯ ವಿರುದ್ಧ ಧ್ವನಿ ಎತ್ತುವುದೂ ಕೂಡ ಎಲ್ಲರ ಉದ್ದೇಶವಾಗಿತ್ತೆಂದು ಶಿವಮೂರ್ತಿ ಶರಣರು ತಿಳಿಸಿದ್ದಾರೆ.

ಕೂಡಲ ಸಂಗಮದಲ್ಲಿ ಕೈಗೊಂಡ ನಿರ್ಣಯಕ್ಕೆ ಸಂಬಂಧಿಸಿದಂತೆ ಇದು ಬಸವಣ್ಣನವರಿಗೆ ಮಾಡಲಾದ ಅಪಚಾರ, ಮುರುಘಾ ಮಠ ವೀರಶೈವ ಲಿಂಗಾಯತ ಮಠವಾಗಿದ್ದು ಅದರ ಪೀಠಾಧಿಪತಿಯಾಗಿರುವ ತಾವು ಮಠದ ಪರಂಪರೆಗೆ ಧಕ್ಕೆಯುಂಟು ಮಾಡುತ್ತಿದ್ದೇವೆ. ಪೀಠ ತ್ಯಜಿಸಬೇಕೆಂಬ ಹೇಳಿಕೆಗಳು ಹೊರಬಂದಿವೆ. ಬಸವಧರ್ಮದ

ಪ್ರವಾದಿಯಾಗಲೀ, ಪ್ರವರ್ತಕನಾಗಲೀ ನಾನಂತೂ ಅಲ್ಲ. ಆಗಬೇಕೆಂಬ ಹಪಹಪಿಕೆಯೂ ನನ್ನಲ್ಲಿಲ್ಲ. ಬಸವಣ್ಣನವರ ಮತ್ತು 12ನೇ ಶತಮಾನದ ಶರಣರ ನಿಜಾಚರಣೆಗಳಿಗೆ ಮರುಹುಟ್ಟು ಕೊಡುವ ಅಥವ ಚಾಲನೆ ನೀಡುವ ಆಶಯವಿದೆಯಷ್ಟೇ. ಇದಕ್ಕೆ ಕಾರಣ ಇವತ್ತಿನ ವೀರಶೈವ-ಲಿಂಗಾಯತ ಧರ್ಮದೊಳಗಿನ ಗೊಂದಲವೇ ಆಗಿದೆ.

ವೀರಶೈವ-ಲಿಂಗಾಯತ ಧರ್ಮಕ್ಕೊಂದು ವ್ಯವಸ್ಥಿತ ಹಾಗೂ ಸ್ಪಷ್ಟ ಧರ್ಮ ಸಂವಿಧಾನವಿಲ್ಲ. ಪ್ರವರ್ತಕ-ಪ್ರವಾದಿಗಳ ವಾರಸುದಾರತ್ವವಿಲ್ಲ. ಸರ್ವ ಸಮ್ಮತವಾದ ಧರ್ಮ ಗ್ರಂಥವಿಲ್ಲ. ಕೆಲವರು ಬಸವಾದಿ ಶರಣರ ಸಂಸ್ಕೃತಿಯನ್ನು ತಪ್ಪುತಪ್ಪಾಗಿ ಅರ್ಥೈಸಿ ಈ ಸಂಸ್ಕೃತಿಯೇ ಲಿಂಗಾಯತ ಧರ್ಮ ಎಂದರೆ ಮತ್ತೆ ಕೆಲವರು ಬಸವಣ್ಣನನ್ನು ವೀರಶೈವ ಧರ್ಮ ಸಂಸ್ಥಾಪಕನೇ ಅಲ್ಲ ಎನ್ನುತ್ತಾರೆ. ಇನ್ನು ಕೆಲವರು ಬಸವತತ್ವಗಳ ವಿರುದ್ಧದ ಆಚರಣೆಗಳ ಆರಾಧಕಾಧೀಶ್ವರರಾದ ಪಂಚ ಪೀಠಾಧೀಶ್ವರುಗಳನ್ನು ವೀರಶೈವ ಧರ್ಮ ಸಂಸ್ಥಾಪನಾಚಾರ್ಯರೆಂದು ಬಿಂಬಿಸುತ್ತಿದ್ದಾರೆ. ಈ ಗೊಂದಲದಿಂದ ಹೊರ ಬಂದು ತೀರಾ ಇತ್ತೀಚಿನ ಇತಿಹಾಸವಾಗಿರುವ 12ನೇ ಶತಮಾನದ ಬಸವಾದಿ ಶರಣರ ಬದುಕಿನ ವಿಧಾನವನ್ನೇ ಧರ್ಮವೆಂದು ಸ್ವೀಕರಿಸುವುದರಿಂದ ಅದರ ಸಾರ್ವತ್ರಿಕ ಅನ್ವಯತೆ-ಆಚರಣೆಗಳು ಸುಲಭ ಸಾಧ್ಯವಾಗುತ್ತವೆ ಎಂಬುದು ನಮ್ಮೆಲ್ಲರಿಗೂ ಸ್ಪಷ್ಟವಾಗಿತ್ತು. ಈ ಧರ್ಮ ಸ್ಥಾಪನೆಯ ಬಗ್ಗೆ ಕಳೆದ ವರ್ಷದ ಬಸವಕೇಂದ್ರಗಳ ಸಮಾವೇಶದಲ್ಲಿ ಒಮ್ಮತದ ತೀರ್ಮಾನಕ್ಕೆ ಬರಲಾಯಿತು.

ಇವತ್ತು ಬಸವಣ್ಣನಿಗೆ ಅಪಚಾರವೆಸಗಿದ್ದೇವೆಂದು ಅಪಾದಿಸುತ್ತಿರುವ ವೀರಶೈವ ಮಹಾಸಭೆಯವರಾಗಲೀ, ಪಂಚಪೀಠಾಧೀಶ್ವರರ ಪರವಾಗಿ ಮಾತನಾಡುವ ಇತರೆ ಶ್ರೀಗಳಾಗಲೀ, ಬಸವಣ್ಣನವರನ್ನ ಸಾರಾಸಗಟಾಗಿ ಒಪ್ಪಿಕೊಂಡಿಲ್ಲ. ಶರಣರ ತತ್ವಗಳನ್ನು ನಿಜಾಚರಣೆಗೊಳಿಸುತ್ತಿಲ್ಲ. ಈ ಸ್ಪಷ್ಟತೆ ನಮಗಿದ್ದುದರಿಂದಲೇ ತಮ್ಮ ಪಾಡಿಗೆ ನಾವು ಬಸವಣ್ಣನನ್ನೇ ಧಾರ್ಮಿಕ ತಂದೆಯೆಂದು ಸ್ವೀಕರಿಸಿ ಒಂದು ಆಚರಣಾ ಸಂವಿಧಾನ ರೂಪಿಸಿಕೊಂಡು ಮುಂದುವರಿದರೆ ಈ ಟೀಕಾಕಾರರಿಗಾದ ಕೇಡೇನು? ಈ ಧರ್ಮದ ಅನುಯಾಯಿಗಳಾಗಿರೆಂದು ನಾವಂತೂ ಇವರನ್ನು ಆಹ್ವಾನಿಸಿಲ್ಲ. ಮುರುಗ ಶಾಂತವೀರರಿಗೆ ಬೃಹನ್ಮಠ ಕಟ್ಟಿಕೊಟ್ಟವರು ಇವತ್ತು ಮಾಂಸಾಹಾರಿಗಳೆಂದು ಗುರುತಿಸಲ್ಪಟ್ಟಿರುವ ಈಗಿನ ನಾಯಕ ಜನಾಂಗದವರು ಹಾಗೂ ಅಂದಿನ ಪಾಳೇಗಾರರು. ಇದು ಕೇವಲ ಸಸ್ಯಾಹಾರಿ ಜಾತಿಯ ಜನರಿಂದ ಕಟ್ಟಲ್ಪಟ್ಟಿಲ್ಲವೆಂಬುದನ್ನು ಎಲ್ಲರೂ ಗಮನಿಸಬೇಕು. ಹಾಗೆಂದ ಮಾತ್ರಕ್ಕೆ ನನಗೂ ಕೂಡ ಮಾಂಸಾಹಾರಿಗಳಾಗಿ ಮತ್ತು ನಮ್ಮ ಮಠದಲ್ಲಿ ಮಾಂಸಾಹಾರ ದಾಸೋಹ ಏರ್ಪಡಿಸಿ ಎನ್ನುವುದು ಕುಚೋದ್ಯದ ಸಂಗತಿ ಎಂದಿದ್ದಾರೆ.

ಶಿವಮೂರ್ತಿ ಸ್ವಾಮಿಗಳದ್ದು ಸ್ಪಷ್ಟೀಕರಣವೋ ಸಮರ್ಥನೆಯೊ ?

ಚಿತ್ರದುರ್ಗ ಸ್ವಾಮಿಗಳ ಒಂದು ಸ್ಪಷ್ಟೀಕರಣ ಲೇಖನ ಇಂದು (17-5-2004) ಕನ್ನಡ ಪ್ರಭಾದಲ್ಲಿ (ಒಂದು ಮತ್ತು ಐದನೆಯ ಪುಟಗಳಲ್ಲಿ) ಮುದ್ರಣಗೊಂಡಿದೆ. ಅಸ್ಪಷ್ಟವಾಗಿ, ಗೋಜಲು ಗೋಜಲಾಗಿ ಉತ್ತರಿಸಿದ್ದಾರೆ. ಆರೋಗ್ಯ ಶಾಸ್ತ್ರದಲ್ಲಿ ಒಂದು ಉಕ್ತಿ ಇದೆ, "Undigested food is poison, digested poison is food'' ಎಂದು. ಹಾಗೆಯೇ ವಚನ ಸಾಹಿತ್ಯವನ್ನು ಅರಗಿಸಿಕೊಳ್ಳಲು ಅಸಮರ್ಥರಾದ ಶಿವಮೂರ್ತಿ ಸ್ವಾಮಿಗಳಿಗೆ ಅದೇ ವಿಷವಾದಂತೆ ತೋರುತ್ತಿದೆ.

''ಆಹಾರಾಭ್ಯಾಸದಿಂದ ಮನುಷ್ಯನ ಸಾತ್ವಿಕತೆ ಹಾಗೂ ಕ್ರೌರ್ಯಗಳು ನಿರ್ಧರಿಸಲ್ಪಡುತ್ತವೆ ಎನ್ನುವುದು ವಿಜ್ಞಾನ ನಿಷ್ಕರ್ಷಿತ ತೀರ್ಮಾನ ಅಲ್ಲ'' ಎಂದು ಶಿವಮೂರ್ತಿ ಸ್ವಾಮಿಗಳು ಅಭಿಪ್ರಾಯಪಟ್ಟಿದ್ದಾರೆ. ಆದರೆ, ಆಹಾರವು ಮನುಷ್ಯನ ಶರೀರ, ಮನಸ್ಸುಗಳನ್ನು ನಿಗ್ರಹಿಸುವ ಪ್ರಮುಖ ಅಂಶವೆಂದು ಮನೋವಿಜ್ಞಾನ ಹೇಳುತ್ತದೆ. ಆಹಾರದಂತೆ ವಿಹಾರ, ವಿಹಾರದಂತೆ ವಿಚಾರ ; ಆಹಾರ-ವಿಹಾರ-ವಿಚಾರ ಶುದ್ಧಿಯಾದರೆ ವ್ಯಕ್ತಿತ್ವ ಶುದ್ಧಿ ಎಂಬುದು ಭಾರತೀಯ ಯೋಗ ಶಾಸ್ತ್ರದ ಸ್ಪಷ್ಟ ಅಭಿಪ್ರಾಯ. 'ಪ್ರಾಣಿಗಳನ್ನು ನಿರ್ದಯವಾಗಿ ಕೊಲ್ಲುವ, ಬಲಿಕೊಡುವ ಮಾನವನ ಮನಸ್ಸು ರಕ್ತವನ್ನು ಕಂಡು ಅಂಜದು, ಅನ್ಯರ ನೋವನ್ನು ಕಂಡು ತಾನು ಸಂಕಟ ಪಡದು. ಮತಿಭ್ರಾಂತರಾಗಿ (ಅ) ವಿಚಾರಗಳನ್ನು ಮಂಡಿಸುತ್ತಿರುವ ಶಿವಮೂರ್ತಿ ಸ್ವಾಮಿಗಳು ಕೊಂಚ ಶಾಂತ ಮನಸ್ಸಿನಿಂದ ಆಲೋಚಿಸಲಿ. ಮಾಂಸ-ಮದ್ಯಪಾನಗಳು ವ್ಯಕ್ತಿಯನ್ನು ಕಾಮುಕನನ್ನಾಗಿ, ಕ್ರೋಧಿಯನ್ನಾಗಿ, ಕ್ರೂರಿಯನ್ನಾಗಿ ಮಾಡುವುದು ಅತ್ಯಂತ ಸಹಜ. ಯಾರನ್ನು ಹೆಸರಿಸಿದರೂ ಸಮಸ್ಯೆ ಉಂಟಾಗುವುದಾದ ಕಾರಣ ನಾನು ಬರೆಯಲು ಇಚ್ಛಿಸುವುದಿಲ್ಲ, ಮಾಂಸಾಹಾರಿ ಜನರ ಕುಟುಂಬ, ಸಮಾಜ, ರಾಷ್ಟ್ರಗಳಲ್ಲಿ ಎಂಥಾ ಕ್ರೌರ್ಯ, ಅಸಹಿಷ್ಣತೆ ನೆಲೆಸಿರುತ್ತದೆ; ಕೊಲೆ-ಸುಲಿಗೆಗಳು ಆಗುತ್ತಿರುತ್ತವೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಏಕೆ ಶಾಂತ ವಾತಾವರಣವಿದೆ ? ದಕ್ಷಿಣ ಕರ್ನಾಟಕದ ಕೆಲವು ಸ್ಥಳಗಳಲ್ಲಿ ಮಾತ್ರ ಚುನಾವಣಾ ಘರ್ಷಣೆಗಳು ಏಕೆ ಹೆಚ್ಚಿಗೆ ಆಗುತ್ತವೆ ? ಬೌದ್ಧ ಧರ್ಮ ವ್ಯಾಪಿಸಿರುವ ರಾಷ್ಟ್ರಗಳು ಎಷ್ಟು ಶಾಂತವಾಗಿದ್ದವು ?! ಇನ್ನಿತರ ಧರ್ಮೀಯರ ಪ್ರವೇಶದಿಂದ ಆ ರಾಷ್ಟ್ರಗಳಲ್ಲಿ ವಾತಾವರಣ ಕದಡುತ್ತಿದೆ ಏಕೆ ? .

ಜಾರ್ಜ್ ಬರ್ನಾಡ್ ಶಹಾ, ಮ್ಯಾಕ್ಸ್‌ಮುಲ್ಲರ್ ಮುಂತಾದವರು ಏಕೆ ಮಾಂಸಾಹಾರವನ್ನು ತೊರೆದು ಸಸ್ಯಾಹಾರಿ ಜೀವನ ಕ್ರಮವನ್ನು ಸ್ವೀಕರಿಸಿದರು? ಇಂದು ವೈದ್ಯ ವಿಜ್ಞಾನ ಏಕೆ ಸಸ್ಯಾಹಾರಕ್ಕೆ ಉತ್ತಮ ಸ್ಥಾನವನ್ನು ಕೊಡುತ್ತಿದೆ ?

ಶಿವಮೂರ್ತಿ ಶ್ರೀಗಳ ಅಸ್ಪಷ್ಟ ವಿವರಣೆ ಹೀಗೆ ಸಾಗುತ್ತದೆ. ''ಬಸವಾದಿ ಶರಣರು ಸಸ್ಯಾಹಾರವನ್ನು ಒಪ್ಪಿಕೊಂಡವರೆಂದು ನಂಬಿದ್ದೇವೆ. ಅದರಂತೆ ಮಾಂಸಾಹಾರಿಗಳನ್ನು ದೂರವಿಟ್ಟು ಮಡಿವಂತಿಕೆಯನ್ನು ಮೆರೆದವರಲ್ಲ ಎನ್ನುವುದನ್ನು ಅಷ್ಟೇ ಸ್ಪಷ್ಟವಾಗಿ ಅರ್ಥಮಾಡಿಕೊಂಡಿರುತ್ತೇವೆಂಬ ವಿಶ್ವಾಸ ತಮಗಿದೆ''. ಬಹುದೊಡ್ಡ ಸಾಧನೆ ಎಂಬಂತೆ ಕೂಡಲ ಸಂಗಮದಲ್ಲಿ ಮಾಡಿದ ಭಾಷಣದಲ್ಲಿ ''ಇನ್ನು ಮುಂದೆ ನಾವು ಎಂದು ಬಳಸದೆ ನಾನು ಎಂದೇ ಬಳಸುತ್ತೇನೆ'' ಎಂದು ಘೋಷಿಸಿದವರು

ಅದನ್ನೇ ಮರೆತಂತೆ ಕಾಣುತ್ತದೆ. ಪುನಃ ಹೇಳಿಕೆಯಲ್ಲಿ ನಾವು ಎಂದಿದ್ದಾರೆ. ಅಥವಾ ಇದರರ್ಥ ಇವರು ಮತ್ತು ಇವರನ್ನು ಸೂತ್ರಧಾರರಾಗಿ ಆಡಿಸುವ, ನುಡಿಸುವ ಆಡಳಿತಾಧಿಕಾರಿಯವರೂ ಸೇರಿದ್ದರೆ ಆಗ ನಾವು, ತಾವು ಎನ್ನುವುದಕ್ಕೆ ಅರ್ಥವು ಸರಿಯಾಗಿರುತ್ತದೆ.

''ಬಸವ ಧರ್ಮದ ಪ್ರವಾದಿಯಾಗಲಿ, ಪ್ರವರ್ತಕನಾಗಲೀ ನಾನಂತೂ ಅಲ್ಲ; ಆಗಬೇಕೆಂಬ ಹಪಹಪಿಕೆಯೂ ನನ್ನಲ್ಲಿಲ್ಲ, ಬಸವಣ್ಣನವರ ಮತ್ತು 12ನೇ ಶತಮಾನದ ಶರಣರ ನಿಜಾಚರಣೆಗಳಿಗೆ ಮರು ಹುಟ್ಟು ಕೊಡುವ ಅಥವಾ ಚಾಲನೆ ನೀಡುವ ಆಶಯವಿದೆಯಷ್ಟೆ ?'' ಎಂದಿದ್ದಾರೆ ಶಿವಮೂರ್ತಿ ಶ್ರೀಗಳು. ಒಂದು ವೇಳೆ 12ನೆಯ ಶತಮಾನದ ಶರಣರ ವಿಚಾರಗಳಿಗೆ ಚಾಲನೆ ಮತ್ತು ಮರುಹುಟ್ಟು ನೀಡುವ ಆಶಯವಿದ್ದರೆ ಅವನ್ನೇ ಯಥಾವತ್ತಾಗಿ ಪ್ರತಿಪಾದಿಸಬೇಕೇ ಹೊರತು ತಮಗೆ ಇಷ್ಟವಾದುದನ್ನೆಲ್ಲ ಬಸವ ಧರ್ಮದ ಹೆಸರಿನಲ್ಲಿ ತೂರಿಸುತ್ತ ಹೋಗಬಾರದು.

ತಮಗೆ ಪ್ರವಾದಿ, ಪ್ರವರ್ತಕನಾಗುವ ಹಪಾಹಪಿ ಇಲ್ಲ ಎಂದಿದ್ದಾರೆ. ಇದು ಸಂಪೂರ್ಣ ಸುಳ್ಳು. ಇವರ ಮುಂದಾಲೋಚನೆ ಇಲ್ಲದ ಹಪಾಹಪಿಯೇ ಸಮಸ್ಯೆಗಳಿಗೆ ಕಾರಣವಾಗುತ್ತಿದೆ. ಶ್ರೀ ದಯಾನಂದ ಸ್ವಾಮಿಗಳು ಒಮ್ಮೆ ಭೇಟಿಯಾದಾಗ ನಾನು ಸಹಜವಾಗಿ ಮಾತನಾಡಿದ್ದೆ. ''ಬಸವಣ್ಣನವರಿಗೆ ಮತ್ತು ಅವರ ಸಮಕಾಲೀನರಿಗೆ ಎಷ್ಟು ಅನ್ಯಾಯವಾಗುತ್ತಿದೆ ? ಅವರು ಕೊಟ್ಟ ಧರ್ಮ ಸಂಹಿತೆಯನ್ನು ಎಲ್ಲರೂ ಬಳಸಿಕೊಳ್ಳುತ್ತಾರೆ. ವೀರಶೈವರು, ಶರಣ ಸಾಹಿತ್ಯ ಪರಿಷತ್ತಿನವರೂ ಎಲ್ಲರಿಗೂ ವಚನ ಸಾಹಿತ್ಯ ಬೇಕು. ಆದರೆ ಬಸವಣ್ಣನವರನ್ನು ಧರ್ಮಗುರು ಎಂಬ ಪ್ರಾಮಾಣಿಕತೆ ಅವರಲ್ಲಿಲ್ಲ, ಮೊದಲು ವೀರಶೈವವನ್ನು ಹಿಡಿದು ವಾದ ಮಾಡುತ್ತಿದ್ದ ವೀರಶೈವ ಮಹಾಸಭೆ ಮತ್ತು ಪಂಚಪೀಠಾಧೀಶರು ಈಗ ಲಿಂಗಾಯತ ಪದಕ್ಕೂ ತಗುಲಿಕೊಂಡಿದ್ದಾರೆ. ಮನಸ್ಸು ರೋಸಿ ಹೋಗುತ್ತಿದೆ. ಆದಿ ಶರಣರು ಬಸವ ಧರ್ಮ ಎಂದು ರೂಢಿಗೆ ತಂದಿದ್ದರೆ ಎಷ್ಟು ಕ್ಷೇಮವಾಗಿರುತ್ತಿತ್ತು ಒಮ್ಮೊಮ್ಮೆ ವೀರಶೈವ ಲಿಂಗಾಯತ ಎರಡೂ ಬಿಟ್ಟು ಬಸವ ಧರ್ಮ ಎಂದೇ ಏಕೆ ರೂಢಿಗೆ ತರಬಾರದು ಎನ್ನಿಸುತ್ತದೆ. ಆದರಿಷ್ಟೇ ಮೂರೂವರೆ ಕೋಟಿ ಲಿಂಗಾಯತರು ಹರಿದು ಹಂಚಿ ಹೋಗಿದ್ದಾರೆ. ಇವರೆಲ್ಲರನ್ನು ಸಂಘಟಿಸುವುದಾಗಲೀ, ಇವರಿಗೆ ಈ ವಿಷಯ ತಿಳಿಸುವುದಾಗಲೀ ಸಾಧ್ಯವಿಲ್ಲ, ಅದಕ್ಕೇ ಸುಮ್ಮನಾಗುತ್ತೇನೆ'' ಎಂದೆ. ಇದನ್ನು ಚಕ್ ಎಂದು ಗ್ರಹಿಸಿಕೊಂಡ ದಯಾನಂದ ಸ್ವಾಮಿ ನಾನು ವಿದೇಶ ಪ್ರವಾಸ ಕೈಗೊಂಡಾಗ ಅತ್ತ ಇತ್ತ ಓಡಾಡಿ ತಾವು ''ಬಸವ ಧರ್ಮ''ದ ಕಲ್ಪನೆ ಕೊಟ್ಟವರು ಎಂಬಂತೆ ಅನೇಕರಿಗೆ ತಿಳಿಸಿ ಒಂದು ವಿಶ್ವ ಬಸವ ಧರ್ಮ ಮಹಾಸಭಾ ಎಂಬ ಟ್ರಸ್ಟ್ ಮಾಡಿಸಿದ್ದಾರೆ. ನಮ್ಮ ವಿಚಾರ ಹೈಜಾಕ್ ಮಾಡಿದ್ದರೂ ಚಿಂತೆಯಿಲ್ಲ ಅನೇಕ ಚಿಂತನ ಶೀಲರು ಅದರೊಳಗೆ ಸೇರಿ ಬಸವತತ್ತ್ವ ಪ್ರಚಾರ ಮಾಡುತ್ತಾರೆ, ಮಾಡಲಿ ಎಂದು ನಾನು ಆಕ್ಷೇಪ ಎತ್ತಲೇ ಇಲ್ಲ. ಅವರ ಸಭೆಯಲ್ಲಿ ಕೆಲವರು ಸಂದೇಹ ಪಟ್ಟರಂತೆ, ''ದಯಾನಂದ ಸ್ವಾಮಿ ಮಾತಾಜಿಯವರ ಶಿಷ್ಯ (?). ಅವರ ವಿಚಾರವನ್ನೇ ಇಲ್ಲಿ ಹೇಳುತ್ತಿದ್ದಾರೆ'' ಎಂದು. ಆತ ನಮ್ಮ ವಿಚಾರ ಹೇಳಿದುದು ಸತ್ಯವಿದ್ದರೂ ಅದು ನಮ್ಮ ಒಪ್ಪಿಗೆ ಪಡೆದು ಅಲ್ಲ ; ನಮ್ಮ ವಿಚಾರ ಅಪಹರಿಸಿಕೊಂಡು ! ಈ ಬಗ್ಗೆ ಚರ್ಚೆ ನಡೆಯುತ್ತಿರುವಾಗಲೇ ಶಿವಮೂರ್ತಿ ಶ್ರೀಗಳು ಅಮೆರಿಕಾ ಸಂದರ್ಶನ ಮುಗಿಸಿ ಬಂದರು. ವಿಶ್ವ ಬಸವ ಧರ್ಮ ಮಹಾಸಭಾದ ಜನನಕ್ಕೆ ತಯಾರಿ ನಡೆದಿತು. ಶ್ರೀಗಳಿಗೆ ಪ್ರವಾದಿಯಾಗುವ

ಆತುರ; ಆತುರಗಾರನಿಗೆ ಬುದ್ಧಿ ಮಟ್ಟು ಎಂಬ ಗಾದೆ ಇದೆ. ಹಿಂದೆ-ಮುಂದೆ ಆಲೋಚಿಸದೆ "ಶರಣ ಧರ್ಮ ಮಹಾಸಭಾ" ಮಾಡುವುದಾಗಿ ಘೋಷಿಸಿದರಂತೆ. ಇದೇನು ಹುಟ್ಟುತ್ತಲೇ ವಿಶ್ವ ಬಸವ ಧರ್ಮ ಮಹಾಸಭಾಕ್ಕೆ ಇನ್ನೊಬ್ಬ ಸ್ಪರ್ಧಿ? ಆರ್.ಹೆಚ್. ಚಂದನಗೌಡರು ಶರಣ ಧರ್ಮ ಮಹಾಸಭಾ ಹುಟ್ಟದಂತೆ ತಡೆಯಲು ಶ್ರೀಗಳ ಭೇಟಿಗೆ ಹೋದರು. ದೇಜಗೌ, ಚಂದನಗೌಡರು ಮುಂತಾದವರು ಮಾಡಲಿರುವ ವಿಶ್ವ ಬಸವ ಧರ್ಮ ಟ್ರಸ್ಟಿಗೆ ಶಿವಮೂರ್ತಿ ಸ್ವಾಮಿಗಳನ್ನು ಅಧ್ಯಕ್ಷರನ್ನಾಗಿ ಮಾಡಿದರೆ ಮಾತ್ರ ಅವರು ಶರಣ ಧರ್ಮ ಮಹಾಸಭಾ ಸ್ಥಾಪಿಸುವುದಿಲ್ಲ ಎಂದು ಅವರ ಅಭಿಮಾನಿಗಳ ಕೈಲಿ ಹೇಳಿಸಿದರು. ಇದನ್ನು ಇತ್ತ ಕಡೆಯ ಜನರು ಒಪ್ಪಲಿಲ್ಲ. ಆಗ ಶ್ರೀಗಳು, "ನಿಮ್ಮ ದಾರಿ ನಿಮಗೆ, ನಮ್ಮ ದಾರಿ ನಮಗೆ" ಎಂದು ಆರ್.ಹೆಚ್. ಚಂದನಗೌಡರಿಗೆ ಸ್ಪಷ್ಟಪಡಿಸಿದರು. ದೇಜಗೌ ಅವರ ಅಧ್ಯಕ್ಷತೆಯಲ್ಲಿ ಟ್ರಸ್ಟ್ ಆಗಿದೆ. ಶಿವಮೂರ್ತಿ ಶ್ರೀಗಳ ಅನುಯಾಯಿಗಳು "ಶರಣ ಧರ್ಮ" ಎಂಬ ಅಸ್ಪಷ್ಟ ಪದ ಬೇಡ ಎಂದು ಆಗ್ರಹಿಸಿದಾಗ ಕಡೆಗೆ ಶಿವಮೂರ್ತಿ ಶ್ರೀಗಳು ಬಸವ ಧರ್ಮ ಪದವನ್ನೇ ಆಯ್ದುಕೊಂಡಿದ್ದಾರೆ. ಆ ಟ್ರಸ್ಟ್‌ದವರು ಕೂಡಲ ಸಂಗಮದಲ್ಲಿ ಪ್ರಥಮ ಸಮ್ಮೇಳನ ಮಾಡಬೇಕೆಂದು ಆಲೋಚಿಸುತ್ತಿದ್ದರು. ಹಣವಂತರಾದ ಮುರುಘರಾಜೇಂದ್ರರು ದಿಢೀರ್ ನಿರ್ಧಾರ ಕೈಗೊಂಡು ಬಸವ ಕೇಂದ್ರದ ವತಿಯಿಂದ ಬಸವ ಧರ್ಮ ಸಮ್ಮೇಳನ ಆಗಬೇಕೆಂದು ಮೇ 1 ಮತ್ತು 2 ರಂದು ಇಟ್ಟರು. ಆ ಸ್ಥಳ, ಆ ದಿನಾಂಕ ಆಯ್ದುಕೊಳ್ಳುವಲ್ಲಿಯೂ ಒಂದು (ಕು)ತಂತ್ರವಿದೆ. ಕೂಡಲ ಸಂಗಮ, ಬಸವ ಧರ್ಮ, ಮೇ 1 ಮತ್ತು 2, ಯಾರು ಸಂಯೋಜಿಸಿರುವುದು ಎಂಬ ಬಗ್ಗೆಯೂ ಗೊಂದಲ ಉಂಟು ಮಾಡಿ ಜನರನ್ನು ಆಕರ್ಷಿಸುವ ಹುನ್ನಾರವಿತ್ತು. 12ನೆಯ ಶತಮಾನದಲ್ಲಿಯೇ ಹುಟ್ಟಿದ ಬಸವ ಧರ್ಮಕ್ಕೆ ತಾವೀಗ ಪ್ರವರ್ತಕರೆಂದು, ಮಾಂಸಾಹಾರವನ್ನು ಅಳವಡಿಸುವ ಮೂಲಕ ನವ ಧರ್ಮ ಪ್ರವರ್ತಕ ಮತ್ತು ಸುಧಾರಕರೆಂದು ಕೀರ್ತಿಗಳಿಸಲು ಶಿವಮೂರ್ತಿ ಸ್ವಾಮಿಗಳು ಮಾಡಿದ ಆತುರದ ಪ್ರಯತ್ನವೇ ಇಂದು ವಿಲಕ್ಷಣ ವಿರೋಧದ ತಗ್ಗುತೋಡಿದೆ ಎಂಬುದು ಪರಮಸತ್ಯ!

ಬಸವಾದಿ ಪ್ರಮಥರು ತಾವು ಸಸ್ಯಾಹಾರಿಗಳಾಗಿದ್ದರೂ ಮಾನವೀಯ ಮರುಕದಿಂದ ಮಾಂಸಾಹಾರಿಗಳನ್ನು ಕಂಡು ಅವರಲ್ಲಿ ಪರಿವರ್ತನೆ ತರಬಯಸಿದವರು ಎಂಬುದನ್ನು ಶ್ರೀಗಳು ಅರ್ಥ ಮಾಡಿಕೊಂಡಿರುವುದು ಅಭಿನಂದನಾರ್ಹ. ಹಾಗೆಯೇ ಬಸವಾದಿ ಶರಣರು ತಾವು ಪರಿಶುದ್ಧ ಚೇತನರಾದರೂ ಪಾಪಿ-ಪತಿತರು, ಕಳ್ಳ-ಕೊಲೆಗಡುಕರನ್ನು ಪರಿವರ್ತಿಸಿ, ಪವಿತ್ರಾತ್ಮರನ್ನಾಗಿ ಮಾಡಲು ಯತ್ನಿಸಿದರು. ಶ್ರೀಗಳ ಮುಂದಿನ ಮಾತುಗಳು ಆಕ್ಷೇಪಾರ್ಹವಾಗಿವೆ. "ದೈಹಿಕ ಆವಶ್ಯಕತೆಯ ಈಡೇರಿಕೆಗಾಗಿಯೇ ಆಹಾರ ಬೇಕು. ಮತ್ತು ಅದನ್ನೇ ಪ್ರಸಾದ ಎಂದು ಪರಿಭಾವಿಸಿದ ಬಸವಾದಿ ಶರಣರು ಆಹಾರದ ಬಗ್ಗೆ ಶ್ರೇಷ್ಠ ಮತ್ತು ಕನಿಷ್ಠ ಭಾವನೆಯನ್ನಾಗಲೀ, ಮೇಲು-ಕೀಳೆಂದು ಹೀಗಳೆಯುವ ಜಾತಿ ಜನ್ಮ ಭಾವವನ್ನಾಗಲೀ ಹೊಂದಿರಲಿಲ್ಲ ಎನ್ನುವುದು ನನ್ನ ನಂಬಿಕೆ".

ಆಹಾರ ಒಂದು ಆವಶ್ಯಕತೆ. ನಿಜ, ಆದರೆ ತಿಂದುದ್ದೆಲ್ಲವೂ ಪ್ರಸಾದವಲ್ಲ; ಅಥವಾ ಏನೆಲ್ಲವನ್ನೂ ಪ್ರಸಾದೀಕರಿಸಲು ಬರುವುದಿಲ್ಲ. ಜೀವನಾವಶ್ಯಕತೆಗಳನ್ನು ಪ್ರಸಾದೀಕರಣ ಮಾಡಬಹುದೇ ವಿನಾ ಭೋಗಗಳನ್ನಲ್ಲ. ನೀರನ್ನು ಪ್ರಸಾದೀಕರಿಸಬಹುದು, ಸಾರಾಯನ್ನಲ್ಲ. ಗಾಳಿಯನ್ನು ಪ್ರಸಾದೀಕರಿಸಬಹುದು, ಸಿಗರೇಟಿನ ಹೊಗೆಯನ್ನಲ್ಲ. ಸಹಜ ನೋಟವನ್ನು

ದೈವೀಕರಿಸಬಹುದು, ಕ್ಯಾಬರೇ ಕುಣಿತವನ್ನಲ್ಲ. ಯಾವುದು ಇಲ್ಲದಿದ್ದರೆ ಬದುಕು ಸಾಗದೋ ಅದು ಜೀವನಾವಶ್ಯಕತೆ. ಅದನ್ನು ದೈವೀಕರಿಸಿ ಬಳಸಿಕೊಳ್ಳಬೇಕೇ ವಿನಾ ಭೋಗಗಳನ್ನು ಮತ್ತು ಅನಾಚಾರಗಳನ್ನು ದೈವೀಕರಿಸಲು ಬರದು.

ಆಹಾರದಲ್ಲಿ ಶ್ರೇಷ್ಠ ಮತ್ತು ಕನಿಷ್ಠ ಎಂಬ ಭಾವನೆ ಖಂಡಿತಾ ಇದೆ. ಪ್ರಕೃತಿಯಲ್ಲಿ ಸತ್ವ, ರಜ, ತಮ ಎಂಬ ಮೂರು ಗುಣಗಳಿವೆ. ಇದು ಮಾನವ ಸ್ವಭಾವದಲ್ಲಿ ಮಾತ್ರವಲ್ಲ ಪ್ರಾಣಿಗಳಲ್ಲಿ, ವಸ್ತುಗಳಲ್ಲಿ, ತರಕಾರಿಗಳಲ್ಲಿ, ಧಾನ್ಯಗಳಲ್ಲಿ ಎಲ್ಲ ವಸ್ತುಗಳಲ್ಲೂ ಉಂಟು. ಸಾತ್ವಿಕ ಆಹಾರವು ಶಾಂತ ಮನಸ್ಥಿತಿಯನ್ನೂ, ರಾಜಸ ಆಹಾರ ಉದ್ವಿಗ್ನತೆ, ಚಂಚಲತೆಯನ್ನೂ, ತಾಮಸ ಆಹಾರ ಜಡತ್ವವನ್ನೂ ಉಂಟು ಮಾಡುತ್ತದೆ. ವೈದ್ಯ ವಿಜ್ಞಾನ, ಆಯುರ್ವೇದ ಇದನ್ನೇ ಹೇಳುವುದು. ಬಸವಣ್ಣನವರು ದವಸ ಧಾನ್ಯ, ಆಹಾರ, ತರಕಾರಿಗಳಲ್ಲಿರುವ ತಪ್ಪು ಕಲ್ಪನೆ, ಸ್ಪೃಶ್ಯಾಸ್ಪೃಶ್ಯತೆ ತೊಡೆದರು. ಈರುಳ್ಳಿ, ಬೆಳ್ಳುಳ್ಳಿ ರಾಜಸ ಆಹಾರವೆಂದು ಸಂಪ್ರದಾಯ ಭಾವಿಸಿತ್ತು. ಆದರೆ ಆಯುರ್ವೇದ ಈರುಳ್ಳಿ, ಬೆಳ್ಳುಳ್ಳಿಗಳಲ್ಲಿ ಔಷಧೀಯ ಮಹತ್ವವನ್ನು ಗುರುತಿಸುತ್ತದೆ. ಅದಕ್ಕಾಗಿಯೇ ಬಸವಣ್ಣನವರು ಈರುಳ್ಳಿ, ಬೆಳ್ಳುಳ್ಳಿಯ ಮೇಲೆ ನಿಷೇಧ ಹೇರಲಿಲ್ಲ. ಮಾನವರನ್ನು ಹುಟ್ಟಿನಿಂದ, ಹುಟ್ಟಿನಿಂದ ಬರುವ ಜಾತಿಯಿಂದ ಮೇಲುಕೀಳು ಎಂದು ಬಸವಣ್ಣನವರು ವಿಂಗಡಿಸಲಿಲ್ಲ. ಅದೇ ರೀತಿ ಅವರು ಕೈಗೊಂಡ ಉದ್ಯೋಗಗಳಲ್ಲೂ ಮೇಲು-ಕೀಳು ಅರಸಲಿಲ್ಲ. ಉದ್ಯೋಗಗಳ ಆಧಾರದ ಮೇಲೆ ವ್ಯಕ್ತಿಗಳಲ್ಲಿ ಶ್ರೇಷ್ಠತೆ - ಕನಿಷ್ಠತೆ ಅನ್ವಯಿಸಲಿಲ್ಲ. ಆದರೆ ಗುಣ-ನಡತೆಗಳ ಆಧಾರದ ಮೇಲೆ ಶ್ರೇಷ್ಠತೆ ನೀಡಿದರು. ಜಾತಿಯು ಬದಲಾವಣೆಗೆ ಸ್ಥಾನ ನೀಡದು; ವ್ಯಕ್ತಿಯು ತಾನು ಬಯಸದಿದ್ದರೂ ಯಾವುದೋ ಜಾತಿಯಲ್ಲಿ ಹುಟ್ಟಿರುತ್ತಾನೆ. ಆದರೆ ಯಾರೇ ಆಗಲಿ ಮನಸ್ಸು ಮಾಡಿದರೆ ನೀತಿವಂತಿಕೆ, ಗುಣ, ನಡತೆ ರೂಪಿಸಿಕೊಳ್ಳಲು ಆ ವ್ಯಕ್ತಿಯು ಸ್ವತಂತ್ರನಾಗಿರುವನು.

"ಇವರು (ಶರಣರು) ಬಳಸುವ ಹೊಲಸು, ಹೊಲೆ, ಮಾದಿಗ ಮುಂತಾದ ಶಬ್ದಗಳಿಗೆ ಕೇವಲ ಪ್ರಾಣಿವಧೆಯೆಂಬಷ್ಟೇ ಅರ್ಥವಿಲ್ಲ" ಶ್ರೀಗಳ ಹೇಳಿಕೆ. ನಿಜ, ಕೇವಲ ಪ್ರಾಣಿವಧೆ ಎಂದಷ್ಟೇ ಅರ್ಥವಿಲ್ಲ. ಆದರೆ ಪ್ರಾಣಿವಧೆ ಎಂದೂ ಒಂದು ಅರ್ಥ ಇರುತ್ತದೆ ಎಂಬುದನ್ನು ಶ್ರೀಗಳು ಅರಿತುಕೊಳ್ಳಬೇಕು. ಕರಣಗಳು ಮೂರು ಕಾಯ, ವಾಕ್, ಮನ. ಶರೀರದಿಂದ ಮಾಡುವುದು ವಧೆಯಾದರೆ ವಾಕ್ಕಿನಿಂದ ಚುಚ್ಚು ಮಾತನಾಡುವುದೂ ವಧೆ, ಮನಸ್ಸಿನಿಂದ ಸಾವು-ಕೇಡು ಬಯಸುವುದೂ ವಧೆಯೆ. ನಾಲಿಗೆಯಿಂದ ಮಾಂಸ, ಮದ್ಯ ಸೇವಿಸುವುದು ಹೊಲಸು. ಆದರೆ ಕೊಳಕು ಮಾತುಗಳನ್ನಾಡುವುದು, ಚಾಡಿ ಹೇಳುವುದು, ನಿಂದೆ ಮಾಡುವುದೂ ಹೊಲಸು ತಿಂದಂತೆಯೆ. ಲಂಚ ತಿನ್ನುವುದೂ ಹೊಲಸೆ! ಮಾನವರಿಗೆ ಮಾತ್ರವಲ್ಲ ಸಕಲ ಜೀವಾತ್ಮರಿಗೆ ಲೇಸು ಬಯಸುವುದೇ ಪರಿಶುದ್ಧ ಬದುಕು.

ಆದಿ ಮಾನವನು ಬೇಟೆಯಾಡಿ ಹಸಿ ಮಾಂಸ ತಿನ್ನುತ್ತಿದ್ದ. ನಂತರ ಬೇಯಿಸಿ ತಿನ್ನತೊಡಗಿದ. ಅಲೆಮಾರಿಯ ಅಭದ್ರ ಬದುಕು ಕೊನೆಗೊಂಡುದು ಕೃಷಿ ಆರಂಭವಾದಾಗ. ನಾಗರಿಕತೆ, ಸಂಸ್ಕೃತಿ ಬೆಳವಣಿಗೆಯಾದಾಗ ಕೃಷಿ ಕರಗತವಾಯಿತು; ಹೊಸದೊಂದು ಜೀವನ ವಿಧಾನ, ನೆಮ್ಮದಿ, ಭದ್ರತೆ ಕೃಷಿಯಿಂದ ದೊರೆಯಿತು. ಸಸ್ಯಾಹಾರದ ಜೀವನ ವಿಧಾನ ನಂತರದ ಬೆಳವಣಿಗೆ. ಈಗ ವಿಮಾನದಲ್ಲಿ

ತಿರುಗಾಡುವ ನಾವು ಹೇಗೆ ಬಂಡಿಯನ್ನೇ ಆಶ್ರಯಿಸಿದ್ದವನಿಗಿಂತಲೂ ಸುಧಾರಿಸಿದವರು ಎಂದು ಭಾವಿಸುತ್ತೇವೋ, ಹಾಗೆಯೇ ಸಸ್ಯಾಹಾರದ ಜೀವನ ವಿಧಾನ ಮಾಂಸಾಹಾರಕ್ಕಿಂತಲೂ ಶ್ರೇಷ್ಠ. ಆದಿ ಮಾನವನಿಗೆ ಅಂದು ಬದುಕಲು ಮಾಂಸಾಹಾರವು ಅನಿವಾರ್ಯವಾಗಿತ್ತು. ಇವತ್ತು ಅದಕ್ಕಿಂತಲೂ ಉತ್ತಮವಾದ ''ನೀನು ಜೀವಿಸು, ಇತರರನ್ನೂ ಜೀವಿಸಲು ಬಿಡು'' ಎಂಬ ಸೂತ್ರಕ್ಕೆ ಅನುಕೂಲವಾಗುವಂತಹ ಸಸ್ಯಾಹಾರ ಪದ್ಧತಿ ಮನುಷ್ಯನಿಗೆ ಲಭ್ಯವಿದೆ.

''12ನೇ ಶತಮಾನದಲ್ಲಿ ಬಸವಾದಿ ಶರಣರ ಮೇಲೆ ಕಗ್ಗೊಲೆಯಂಥ ಹಿಂಸಾಚಾರದಲ್ಲಿ ತೊಡಗಿದ್ದವರು ಸಸ್ಯಾಹಾರಿಗಳಾಗಿದ್ದವರೇ ಅಲ್ಲವೆ? ಇವತ್ತೂ ಇಂಥ ಕೃತ್ಯಗಳಲ್ಲಿ ತೊಡಗಿರುವವರಲ್ಲಿ ಸಸ್ಯಾಹಾರಿಗಳೆನಿಸಿ ಕೊಂಡ ಜಾತಿ ಜನಾಂಗದವರಿಲ್ಲವೆ? ಮಾಂಸಾಹಾರಿಗಳೆಲ್ಲ ಕ್ರೂರಿಗಳೆ? ಇದಕ್ಕೆ ಸಮಂಜಸ ಉತ್ತರವಿಲ್ಲದಿರುವುದರಿಂದ ಆಹಾರಾಭ್ಯಾಸ ಅವರ ವೈಯಕ್ತಿಕ ಆಯ್ಕೆ ಎಂದು ನಂಬಿದರೆ ಅದು ಬಸವ ತತ್ತ್ವಗಳಿಗೆ ವಿರುದ್ಧವೇ?'' ಎಂದು ಶಿವಮೂರ್ತಿ ಸ್ವಾಮಿಗಳು ಪ್ರಶ್ನಿಸಿದ್ದಾರೆ.

ಕಡೆಯ ವಾಕ್ಯಕ್ಕೆ ಮೊದಲು ಉತ್ತರಿಸಿ ನಂತರ ಮೊದಲಿನ ವಾಕ್ಯಗಳನ್ನು ವಿಶ್ಲೇಷಿಸುತ್ತೇನೆ. ಪ್ರತಿಯೊಂದು ಧರ್ಮಕ್ಕೆ ತನ್ನದೇ ಆದ ನೀತಿ ಸಂಹಿತೆ ಇರುತ್ತದೆ. ಶಾಲೆಯಲ್ಲಿ ಕಡ್ಡಾಯ (Compulsory) ಮತ್ತು ಐಚ್ಛಿಕ (Optional) ಎಂದು ಎರಡು ಭಾಗಗಳು ಹೇಗೋ ಹಾಗೆ ಧರ್ಮದಲ್ಲಿ ಸಹ ಉಂಟು. ಲಿಂಗಾಯತನು ಇಷ್ಟಲಿಂಗಧಾರಿಯಾಗಿರಬೇಕು; ನಿತ್ಯ ಲಿಂಗಾರ್ಚನೆ ಮಾಡಬೇಕು, ಸಸ್ಯಾಹಾರಿಯಾಗಿರಬೇಕು, ಕಾಯಕ-ದಾಸೋಹ ಸಂಪನ್ನನಾಗಿರಬೇಕು ಇತ್ಯಾದಿ ಕಡ್ಡಾಯ. ಅವನು ಧೋತ್ರ ಉಡುವುದು, ಪ್ಯಾಂಟ್ ಹಾಕುವುದು, ಜುಬ್ಬಾ-ಪೈಜಾಮ ತೊಡುವುದು ಐಚ್ಛಿಕ. ಧೋತ್ರ ಉಡುವ ಬದಲು ಪ್ಯಾಂಟ್ ತೊಟ್ಟರೆ ಅವನ ಧರ್ಮಕ್ಕೆ ಚ್ಯುತಿ ಬರದು. ಸಸ್ಯಾಹಾರದ ಬದಲು ಮಾಂಸಾಹಾರ ಮಾಡಿದರೆ ತನ್ನ ಧರ್ಮದ ನೀತಿ ಸಂಹಿತೆಯನ್ನು ಉಲ್ಲಂಘಿಸಿದಂತೆ ಆಗುವುದು. ಕ್ರೈಸ್ತನು ಬ್ಯಾಪ್ಟೈಸ್ ಮಾಡಿಸಿಕೊಳ್ಳಬೇಕು, ವಾರದ ಪ್ರಾರ್ಥನೆಯಲ್ಲಿ ಭಾಗವಹಿಸಬೇಕು ಇದು ಕಡ್ಡಾಯ. ಧೋತ್ರ ಉಡುವುದು ಐಚ್ಛಿಕ. ಅವನ ಧರ್ಮ ಮಾಂಸಾಹಾರದ ಬಗ್ಗೆ ನಿಷೇಧ ಹೇರಿಲ್ಲ. ಮಾನವೀಯತೆ-ದಯೆಯ ದೃಷ್ಟಿಯಿಂದ ಜೀವ ರಕ್ಷೆಗೆ ಪ್ರೇರಣೆ ನೀಡುವ ಸಸ್ಯಾಹಾರ ಪದ್ಧತಿ ಅಳವಡಿಸಿಕೊಂಡರೆ ಅವನು ಉತ್ತಮ ಎನಿಸಿಕೊಳ್ಳುತ್ತಾನೆ. ಆದ್ದರಿಂದ ಲಿಂಗಾಯತರಿಗೆ ಸಸ್ಯಾಹಾರ ಕಡ್ಡಾಯ, ಇಲ್ಲಿ ವೈಯಕ್ತಿಕ ಆಯ್ಕೆಗೆ ಅವಕಾಶವಿರದು.

ಸಂಪ್ರದಾಯ ಬದ್ಧರಾದ ಮತಾಂಧರಿಗೆ ಶಾಸ್ತ್ರದಾಸ್ಯವೇ ನಿಜ ಧರ್ಮವಾಗಿರುತ್ತದೆ. ಅಂಥ ಸಂಪ್ರದಾಯ ರಕ್ಷಣೆಯನ್ನೇ ಧರ್ಮ ಎಂದು ತಿಳಿದುಕೊಂಡ ಕಾರಣ ಅವರು ಪ್ರಗತಿಪರ ವಿಚಾರದವರನ್ನು ಹಿಂಸಿಸಿರುತ್ತಾರೆ. ಇಲ್ಲಿ ಆ ಸಂಪ್ರದಾಯ ನಿಷ್ಠನ ಆಹಾರ ಪದ್ಧತಿ ಗಮನಾರ್ಹವೆನಿಸದೆ, ಅವನ ನಂಬಿಕೆಯೇ ಅವನನ್ನು ಕಾಠಿಣ್ಯಕ್ಕೆ ದೂಡಿರುತ್ತದೆ ಎಂಬುದನ್ನು ಅರಿಯಬೇಕು. ಮಾಂಸಾಹಾರಿಗಳೆಲ್ಲರೂ ಕ್ರೂರಿಗಳೇ ಎಂಬ ಪ್ರಶ್ನೆಯನ್ನು ಸ್ವಾಮಿಗಳು ಸಮಾಜದ ಮುಂದಿಟ್ಟಿದ್ದಾರೆ. ಇದಕ್ಕೆ ಅಕ್ಕಮಹಾದೇವಿಯ ವಚನದಲ್ಲಿ ಉತ್ತರ ಸಿಗುತ್ತದೆ.

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ
ಹಲವು ಪ್ರಾಣಿಗಳ ಕೊಂದು ನಲಿನಲಿದಾಡುವ

ತನ್ನ ಮನೆಯಲ್ಲೊಂದು ಶಿಶುವು ಸತ್ತೊಡೆ
ಅದಕ್ಕೆ ಮರುಗುವಂತೆ ಅವಕ್ಕೇಕೆ ಮರುಗನು?

ಮಾಂಸಾಹಾರಿಗಳೆಲ್ಲ ಕ್ರೂರಿಗಳು ಇರಲಿಕ್ಕಿಲ್ಲ ಒಂದು ದೃಷ್ಟಿಯಲ್ಲಿ; ಇನ್ನೊಂದು ದೃಷ್ಟಿಯಲ್ಲಿ ಕ್ರೂರಿಗಳೆ! ಏಕೆಂದರೆ, ದೇವರು ಮಾನವನಿಗೆ ಬದುಕಲು ಬೇಕಾದ ತರಕಾರಿ, ಹಣ್ಣು, ದವಸ-ಧಾನ್ಯ ಎಲ್ಲ ಕೊಟ್ಟಿರುವಾಗ ಮಾಂಸಾಹಾರಿಯು ತನ್ನ ನಾಲಿಗೆಯ ಚಪಲಕ್ಕೆ ಮಾಂಸವನ್ನು ತಿನ್ನುವನು. ಒಬ್ಬಾತನು ಯಾವ ಪ್ರಾಣಿಯನ್ನೂ ಕೊಂದಿರಲಿಕ್ಕಿಲ್ಲ. ಆದರೆ ಇವನಿಗೆ ಬೇಕಾದ ಮಾಂಸಾಹಾರ ಒದಗಿಸಲು ಇನ್ನೊಬ್ಬನು ಯಾರೋ ಪ್ರಾಣಿಯೊಂದನ್ನು ಕೊಂದು ತರುವನು. ಮಾಂಸಾಹಾರಿ ತಿನ್ನದೆ ಇದ್ದರೆ ಕಟುಕ ಏಕೆ ವಧೆ ಮಾಡುತ್ತಾನೆ? ತಾನು ಸಾಯುವಾಗ ಅಥವಾ ಕೊಲ್ಲಲ್ಪಡುವಾಗ ಹೇಗೆ ತನ್ನ ಬಂಧುಮಿತ್ರರನ್ನು ಅಗಲಲು ಮಾನವನು ಯಾತನೆ ಪಡುವನೋ ಹಾಗೆ ಆ ಪ್ರಾಣಿಯ ಸಹಚರರು ದುಃಖ ಪಡುವುದಿಲ್ಲವೆ? ತನಗೆ ಸುಖದುಃಖಗಳಿರುವಂತೆ ಆ ಜೀವಿಗೂ ಇರುತ್ತವೆ ಎಂಬುದನ್ನು ಅರಿಯುವುದೇ ಇಲ್ಲಿ ಮುಖ್ಯ. ಅದನ್ನು ಅರಿಯದ ಮನಸ್ಸು ಕ್ರೂರವಲ್ಲವೆ?

''ಇವತ್ತು ಯಾರನ್ನು ಮಾಂಸಾಹಾರಿಗಳೆಂದು ಸಂಬೋಧಿಸಲಾಗುತ್ತದೆಯೋ ಅವರೆಲ್ಲರೂ ಮಿಶ್ರಾಹಾರಿಗಳು. ಪ್ರಾಣಿ ಬಲಿಯ ಮೂಢ ನಂಬಿಕೆಗೆ ಕಟ್ಟುಬಿದ್ದು ಬಲಿ ಕೊಟ್ಟ ಪ್ರಾಣಿಯ ಮಾಂಸವನ್ನೇ ದೈವ ಪ್ರಸಾದವೆಂದು ತಿಂದು ಮಾಂಸಾಹಾರಿಗಳೆನಿಸಿಕೊಂಡವರು ಅವರು. ಮೇಲಾಗಿ ಸಸ್ಯಹಾರಿ ಧರ್ಮೀಯರ ಮನೆಗಳಲ್ಲಿ ಮುಚ್ಚುಮರೆಯಲ್ಲಿ ಮಾಂಸಾಹಾರ ಸೇವಿಸುವವರಿರುವಾಗ, ಅವರನ್ನು ಸಹಿಸಿಕೊಳ್ಳುತ್ತಲೂ ಇರುವಾಗ, ಕೊಟ್ಟುಕೊಳ್ಳುವ ವೈವಾಹಿಕ ಸಂಬಂಧಗಳನ್ನು ಯಾವ ಎಗ್ಗೂ ಇಲ್ಲದೆ ನಡೆಸುತ್ತಿರುವಾಗ, ಅಂಥವರೆಲ್ಲರೂ ಬಸವಣ್ಣನ ತತ್ವಾನುಷ್ಠಾನದ ಲಿಂಗವಂತರೆಂದು ನಂಬಿರುವಾಗ ಯಾವತ್ತೋ ಒಂದು ದಿನ ಮಾಂಸ ತಿಂದು ಮಾಂಸಾಹಾರಿ ಎಂಬ ಮುದ್ರೆ ಒತ್ತಿಸಿಕೊಂಡಿರುವ ಜನರಿಗೇಕೆ ಬಸವತತ್ವಗಳ ನಿರಾಕರಣೆ? ನಮ್ಮ ಮನೆಯವರ ಪರಿವರ್ತನೆ ಸಾಧ್ಯ ಎಂದು ನೀವು ನಂಬಿದರೆ ಮನೆಯ ಹೊರಗಿನವರ ಪರಿವರ್ತನೆ ಕೂಡಾ ಅಷ್ಟೇ ಸಾಧ್ಯ ಎಂದು ನಾವು ನಂಬುತ್ತೇವೆ. ಹಾಗಾಗಿ ಈ ನಿಷೇಧಗಳು ಒಂದು ಹಂತದವರೆಗೆ ಬೇಡ ಎನ್ನುವುದೇ ನನ್ನ ನಿಲುವು''.

ಶಿವಮೂರ್ತಿ ಸ್ವಾಮಿಗಳು ಯಾರನ್ನೋ ತುಷ್ಟೀಕರಿಸಲು ವಿಲಕ್ಷಣವಾದ ವಿಚಾರ ಸರಣಿಯನ್ನು ಮಂಡಿಸುತ್ತಿರುವರು. ಮಾಂಸಾಹಾರಿಗಳಿಗೆ ಬಸವ ತತ್ತ್ವಗಳ ನಿರಾಕರಣೆಯನ್ನು ಯಾರು ಮಾಡುತ್ತಿದ್ದಾರೆ? ಬಸವ ತತ್ತ್ವಾಭಿಮಾನಿ, ಬಸವ ತತ್ತ್ವಾನುಯಾಯಿ, ಬಸವ ಧರ್ಮ (ಲಿಂಗಾಯತ) ಅನುಯಾಯಿ ಎಂದು ಮೂರು ರೀತಿಯಲ್ಲಿ ಜನರನ್ನು ವರ್ಗೀಕರಿಸಬಹುದು. ತನ್ನ ಜಾತಿ, ಧರ್ಮ, ಆಹಾರ ಪದ್ಧತಿ ಏನೇ ಇರಲಿ ಬಸವಣ್ಣನವರ ವಿಚಾರಧಾರೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುವವನು ಬಸವ ತತ್ತ್ವಾಭಿಮಾನಿ.

ಇವತ್ತು ಎಷ್ಟೋ ಲಿಂಗಾಯತರು ಮುಖ್ಯವಾಗಿ ವೀರಶೈವವಾದಿ ಗುಂಪಿನವರು ಬಸವಣ್ಣನವರನ್ನು, ಬಸವ ತತ್ತ್ವವನ್ನು ನಖಶಿಖಾಂತ ದ್ವೇಷಿಸುತ್ತಾರೆ. ಸಮತಾವಾದಿಯು, ಪ್ರಗತಿಪರ ಚಿಂತಕನೂ ಆದ ಲಿಂಗಾಯತೇತರನು ಬಸವಣ್ಣನವರ ಬಗ್ಗೆ ಅಭಿಮಾನ ತಾಳಿರುತ್ತಾನೆ. ಅವನು ಮಾಂಸಾಹಾರಿಯೋ, ಮದ್ಯಪಾನಿಯೋ, ವ್ಯಭಿಚಾರಿಯೋ ಆ ಬಗ್ಗೆ ಯಾರೂ

ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಏಕೆಂದರೆ ಅಲ್ಲಿ ಸಂಬಂಧವು ಕೇವಲ ವೈಯಕ್ತಿಕ ಮಟ್ಟಕ್ಕೆ ಸೀಮಿತವಾಗಿರುತ್ತದೆ. ಎರಡನೆಯವನು ತತ್ವಾನುಯಾಯಿ.

ಕಳೆದ ವರ್ಷ ಬಸವ ಜಯಂತಿ ಕಾರ್ಯಕ್ರಮ ನಡೆದಿತ್ತು. ಓರ್ವ ರಾಜಕೀಯ ಧುರೀಣರು- ಕಬ್ಬಿಲ ಜನಾಂಗದವರು. ಆಕಸ್ಮಿಕವಾಗಿ ಬಂದರು. ಅವರು ಹೇಳಿದರು, ಅವರ ತಾಯಿ ಪೂಜ್ಯ ಲಿಂಗಾನಂದ ಗುರುಗಳ ಪ್ರವಚನ ಕೇಳಿ ಸಸ್ಯಾಹಾರ ಪದ್ಧತಿ ಅಳವಡಿಸಿಕೊಂಡುದಲ್ಲದೆ ಮಕ್ಕಳಿಗೂ ಕಲಿಸಿದ್ದಾಳೆಂದು. ಆ ಧುರೀಣರು ಮಾಂಸವಿರಲಿ ಒಂದು ಮೊಟ್ಟೆಯನ್ನು ತಿಂದಿಲ್ಲವಾಗಿ, ಶುದ್ಧ ಸಸ್ಯಾಹಾರವನ್ನು ಅಳವಡಿಸಿಕೊಂಡಿರುವುದಾಗಿ ತಿಳಿಸಿದರು. ಇವರನ್ನು ಕೇವಲ ಬಸವ ತತ್ವ ಅಭಿಮಾನಿ ಮಾತ್ರವಲ್ಲ ಬಸವ ತತ್ವಾನುಯಾಯಿ ಎಂದು ಕರೆಯಬಹುದು. ಇನ್ನು ಬಸವ ಧರ್ಮಾನುಯಾಯಿ ಯಾರು ? ಎಂಬುದನ್ನು ವಿಮರ್ಶಿಸೋಣ. ಸೃಷ್ಟಿಕರ್ತನನ್ನು ನಂಬಿ, ಅವನನ್ನು ಗೋಳಾಕಾರದ ಇಷ್ಟಲಿಂಗ ರೂಪದಲ್ಲಿ ಪೂಜಿಸಿ ಏಕದೇವೋಪಾಸನೆ, ಸಮಾನತೆ, ಅಹಿಂಸೆ ಮುಂತಾಗಿ ನಂಬುವವನು, ಆಚರಿಸುವವನು ಬಸವ ಧರ್ಮಾನುಯಾಯಿ.

2003ನೆಯ ಇಸವಿಯ ಶರಣ ಮೇಳದ ಚಿಂತನಗೋಷ್ಠಿಯಲ್ಲಿ ಒಂದು ಮಹತ್ವಪೂರ್ಣ ಚರ್ಚೆ ನಡೆಸಿ, ನಿರ್ಣಯಕ್ಕೆ ಬಂದೆವು. ಪ್ರತಿಯೊಬ್ಬ ಮಾನವನಿಗೂ ಅನ್ನ, ಆಶ್ರಯ, ಅರಿವೆ, ಅರಿವು(ಶಿಕ್ಷಣ), ಔಷಧಿಗಳಂತೆ ಧರ್ಮವೂ ಒಂದು ಮೂಲಭೂತ ಆವಶ್ಯಕತೆ. ಆದ್ದರಿಂದ ಯಾವುದೇ ಭೇದವೆಣಿಸದೆ ಎಲ್ಲರಿಗೂ ಧರ್ಮ ಸಂಸ್ಕಾರ ನೀಡಬೇಕು.

ಬಸವಣ್ಣನವರ ತತ್ವದ ಅಭಿಮಾನಿಗಳನ್ನಾಗಿ ಮಾಡಬೇಕು. ಇದಕ್ಕಾಗಿ ಒಂದು ಸರಳವಾದ ಮಂತ್ರೋಪದೇಶ ನೀಡಿ ದೀಕ್ಷೆ ಕೊಡಬೇಕು. ಮೊದಲು ಜನರನ್ನು ಬಸವಾಯತರನ್ನಾಗಿ ಮಾಡಬೇಕು. ಅವರು ಶರಣರ ಸಂಗದಲ್ಲಿ ಒಡನಾಡುತ್ತ ಯಾವಾಗ ಶುದ್ಧ ಸಸ್ಯಾಹಾರಿಗಳಾಗಲು ನಿರ್ಧರಿಸುವರೋ ಆಗ ಅವರನ್ನು ಇಷ್ಟಲಿಂಗಧಾರಣೆ ಮಾಡಿ ಲಿಂಗಾಯತರನ್ನಾಗಿ ಮಾಡಬೇಕು. ಇದರಿಂದ ಎಲ್ಲರಿಗೂ ಧರ್ಮ ಸಂಸ್ಕಾರ ಕೊಡಲು ಅವಕಾಶ ದೊರೆಯುವುದು ಮತ್ತು ಬಸವಣ್ಣನವರ ಅಹಿಂಸಾ ತತ್ವಕ್ಕೂ ಚ್ಯುತಿ ಬರದು. ಕಾಲದ ಬದಲಾವಣೆಯ ದೃಷ್ಟಿಯಿಂದ ಕೆಲವು ಸುಧಾರಣೆ, ತಿದ್ದುಪಡಿ ಅತ್ಯಗತ್ಯ. ಆದರೆ ಅವು ಆ ಧರ್ಮ ಅಥವಾ ಸಿದ್ಧಾಂತಕ್ಕೆ ತಾತ್ವಿಕವಾಗಿ ವಿರೋಧಾತ್ಮಕವಾಗಿರಬಾರದು. ಬನ್ನಿಮರವನ್ನು ಜನರು ಸುತ್ತುವರೆಂದು ಅವರ ಮಠದ ಆವರಣದಲ್ಲಿದ್ದ ಮರವನ್ನು ಶ್ರೀಗಳು ಕಡಿಸಿದರೆಂಬುದು ತಿಳಿದು ಬಂದಿತು. ಇದು ಸರಿ.

ಗದ್ದುಗೆಗೆ ಮಹಿಳೆಯರಿಗೂ ಪ್ರವೇಶ ಸಿಗುವಂತೆ ಮಾಡಿದರು, ರುದ್ರಾಭಿಷೇಕ ತಪ್ಪಿಸಿದರೆಂದು ಕೆಲವರು ತಿಳಿಸಿದರು. ಧರ್ಮಪಿತ ಬಸವಣ್ಣನವರ ಆದೇಶದಂತೆ ಇದೆಲ್ಲವೂ ಸೂಕ್ತವೆ! ಸಂಪ್ರದಾಯವಾದಿಗಳು ವಿರೋಧಿಸಿದರೂ ನಾವು ವಿರೋಧಿಸುವುದಿಲ್ಲ. ಆದರೆ ಲಿಂಗಾಯತ ಧರ್ಮವನ್ನು ಸ್ವೀಕರಿಸಿದ ನಂತರವೂ ಮಾಂಸಾಹಾರಕ್ಕೆ ಅವಕಾಶ ಕೊಡುವುದು ಮಾತ್ರ ಬಸವಣ್ಣನವರಿಗೆ ಮಾಡುವ ಅಪಚಾರವೇ ಸರಿ. ಇದರರ್ಥ ಮಾಂಸಾಹಾರಿಗಳು ಕೀಳು ಎಂದು ಭಾವಿಸುತ್ತೇವೆ ಎಂದಲ್ಲ. ಪ್ರಾಣಿಗಳ ಜನ್ಮಕ್ಕೂ ಆಯುಷ್ಯವಿರುವವರೆಗೆ ಅವು ಬದುಕುವ ಹಕ್ಕನ್ನು ಕೊಡುವ ದಯಾಭಾವವೇ ಇಲ್ಲಿ ಮುಖ್ಯ ಪ್ರೇರಣೆ.

ಲಿಂಗಾಯತರಲ್ಲೂ ಮಾಂಸಾಹಾರಿಗಳು

ಲಿಂಗಾಯತ ಜಾತಿಯವರಲ್ಲೂ ಎಷ್ಟು ಜನ ಮಾಂಸಾಹಾರಿಗಳು ಇಲ್ಲ. ಹಾಗಾದರೆ ಅವರನ್ನೆಲ್ಲ ಹೊರಹಾಕುತ್ತಾರೆಯೆ ? ಅವರೊಡನೆ ಮನೆಯವರು ವ್ಯವಹರಿಸುವುದಿಲ್ಲವೆ ? ಎಂಬ ಭಾವ ಬರುವಂತೆ ಸ್ವಾಮಿಗಳು ಮಾತನಾಡಿದ್ದಾರೆ. ಓರ್ವ ವ್ಯಕ್ತಿ ತನ್ನ ಮನೋದೌರ್ಬಲ್ಯದಿಂದಲೋ ಅಥವಾ ಸಹವಾಸ ದೋಷದಿಂದಲೋ ಹೋಗಿ ಮಾಂಸಾಹಾರ, ಮದ್ಯಪಾನ ಮಾಡುವುದು ಬೇರೆ; ಒಂದು ಮನೆಯಲ್ಲಿ ಅಧಿಕೃತವಾಗಿ ತಾಯಿಯೋ, ಹೆಂಡತಿಯೋ ಮಾಂಸವನ್ನು ಕುದಿಸಿ ಅಡಿಗೆ ಮಾಡುವುದು ಬೇರೆ. ಪಾಶ್ಚಿಮಾತ್ಯ ಸಂಸ್ಕೃತಿಯ ಪ್ರಚಂಡ ಸೆಳೆತಕ್ಕೆ ಸಿಕ್ಕ ಹಲವಾರು ಮಹಿಳೆಯರು ''ಕರೆ ಯುವತಿ'' (call girls)ಯರಾಗಿ ತಮ್ಮ ಥಳುಕಿನ ಜೀವನಕ್ಕೆ ಹಣ ಒದಗಿಸಿಕೊಳ್ಳುವರಂತೆ. ಇವತ್ತಿನ ಕಾಲದ ಅಗತ್ಯ ಎಂದು ಮನೆಯ ಮಕ್ಕಳನ್ನು ಕಾಲ್ ಗರ್ಲ್ಸ್ ಮಾಡಲಾಗುವುದೆ ? ಸರ್ಕಾರಿ ಕಛೇರಿಗಳಲ್ಲಿ ಲಂಚ ತಿನ್ನುವುದು ವಿಪರೀತವಾಗಿದೆ ಎಂದು ಲಂಚಗುಳಿತನವನ್ನು ಸಂವಿಧಾನಾತ್ಮಕವಾಗಿ ಕ್ರಮಬದ್ಧಗೊಳಿಸಲು ಬರುವುದೆ ? ವೈಯಕ್ತಿಕ ದೌರ್ಬಲ್ಯದಿಂದ ಕೆಲವು ಲಿಂಗಾಯತರು ಮಾಂಸಾಹಾರ, ಮದ್ಯಪಾನ ಮಾಡುತ್ತಾರೆ ಎಂದ ಮಾತ್ರಕ್ಕೆ ಅದಕ್ಕೆ ಧರ್ಮದ ಅಧಿಕೃತ ಮುದ್ರೆ ಒತ್ತಲು ಸಾಧ್ಯವೆ ?

ಜಾಗತಿಕ ಧರ್ಮದ ಲಕ್ಷಣವೆ ?

ಯಾರೋ ಒಬ್ಬರು ಹೊಗಳು ಭಟ್ಟಂಗಿಗಳು ಮಾಂಸಾಹಾರಕ್ಕೆ ಅನುಮತಿ ನೀಡುವುದರಿಂದ ಚಿತ್ರದುರ್ಗ ಶ್ರೀಗಳು ಬಸವ ಧರ್ಮವನ್ನು ಜಾಗತಿಕ ಧರ್ಮವನ್ನಾಗಿ ಮಾಡುತ್ತಿದ್ದಾರೆಂದು ಅಭಿಪ್ರಾಯ ವ್ಯಕ್ತಪಡಿಸಿದ್ದರು. ಭಾರತೀಯ ಧಾರ್ಮಿಕ ವಿಚಾರಧಾರೆಯಿಂದ ಪ್ರಭಾವಿತರಾಗಿರುವ ಅನೇಕ ವಿದೇಶೀಯರು ಸಸ್ಯಾಹಾರಕ್ಕೆ ಒತ್ತುಕೊಡುವುದನ್ನು ನೋಡುತ್ತೇವೆ. ಭಾರತ ದೇಶದಲ್ಲಿ ಅನೇಕ ಹಿಂದು ಜನರು ಪಾಶ್ಚಿಮಾತ್ಯ ಜೀವನ ಶೈಲಿಗೆ ಮಾರುಹೋಗಿ ಮಾಂಸಾಹಾರ, ಮದ್ಯಪಾನಗಳ ದಾಸರಾಗುತ್ತಿದ್ದರೆ, ಅಮೆರಿಕಾದ ಅನೇಕರು ಹಿಂದು ಸಂಸ್ಕೃತಿ ಎಂದು ಇಲ್ಲಿಯ ವೇಷಭೂಷಣ, ಸಸ್ಯಾಹಾರ ಅಳವಡಿಸಿಕೊಂಡಿರುವುದನ್ನು ಕಾಣಬಹುದು. ಜಗತ್ತಿನ ವಿವಿಧ ಭಾಗಗಳಲ್ಲಿ ಧಾಳಿ, ಆಡಳಿತ ಮುಂತಾದ ಕಾರ್ಯಗಳಿಂದ ಅನೇಕ ಧರ್ಮೀಯರು ತಮ್ಮ ಭಾಷೆ ಮತ್ತು ಧರ್ಮಗಳನ್ನು ಬೆಳೆಸಿರುವುದರಿಂದ ಅವು ಜಾಗತಿಕ ಧರ್ಮಗಳಾಗಿವೆ ಎಂದ ಮಾತ್ರಕ್ಕೆ ಮಾಂಸಾಹಾರವೇ ಜಾಗತಿಕ ಧರ್ಮದ ಲಕ್ಷಣವಲ್ಲ ಎಂಬುದನ್ನು ನಾವು ಅರಿಯಬೇಕು.

ಎತ್ತಿ ಕಟ್ಟುವ ಕ್ಷುಲ್ಲಕ ಮನೋಭಾವ

ಚಿತ್ರದುರ್ಗ ಸ್ವಾಮಿಗಳು ತಾವೇನೋ ಕ್ರಾಂತಿಕಾರಿ ಹೆಜ್ಜೆಗಳನ್ನು ಇಡುತ್ತಿದ್ದೇವೆ ಎಂಬ ಅವ್ಯಾವಹಾರಿಕ ಭ್ರಾಂತಿಯ ಜೊತೆಗೆ ಎತ್ತಿ ಕಟ್ಟುವ ಕೆಲಸವನ್ನು ಮಾಡುತ್ತಿದ್ದಾರೆ. ''ಮಾಂಸಾಹಾರಿಗಳನ್ನು ಕೀಳಾಗಿ ಕಾಣಬಾರದು'' ಎಂದು ಹೇಳಿಕೆ ಕೊಟ್ಟು ಅವರೆಲ್ಲರೂ ತಮ್ಮ ಪರವಾಗಿ ನಿಲ್ಲುವರು ಎಂಬ ಭ್ರಮೆ ಹೊಂದಿದ್ದಾರೆ. ಅವರ ನಿರೀಕ್ಷೆಯಂತೆಯೇ ಕೆಲವು ಸಂಘಟನೆಗಳವರು ಶ್ರೀಗಳ ವಿಚಾರಧಾರೆಗೆ ಬೆಂಬಲವನ್ನು ಇತ್ತಿದ್ದಾರೆ. ಸಸ್ಯಾಹಾರ ಪದ್ಧತಿಯನ್ನು ಬೆಂಬಲಿಸುವವರನ್ನು ವೈದಿಕ ಪುರೋಹಿತಶಾಹಿಗಳು ಎಂದೂ ಜರಿದಿದ್ದಾರೆ. ವೈದಿಕ ಧರ್ಮ ಮೂಲತಃ

ಅಹಿಂಸಾವಾದಿ ಧರ್ಮವಲ್ಲ. ಅಶ್ವಮೇಧಯಾಗ, ಗಜ ಯಾಗಗಳ ಮೂಲಕ ಹಿಂಸೆಯನ್ನೇ ಪ್ರತಿಪಾದಿಸಿರುವುದನ್ನು, ಹೋತವನ್ನು ಬಲಿಕೊಡುವ ಅಜಯಾಗವು ರೂಢಿಯಲ್ಲಿದ್ದುದನ್ನು ಕಾಣುತ್ತೇವೆ. ಇದನ್ನು ಕಣ್ಣಾರೆ ಕಂಡು ಬಣ್ಣಿಸುವ ಬಸವಣ್ಣನವರ ವಚನವೇ ಸಾಕ್ಷಿ

ಮಾತಿನ ಮಾತಿಂಗೆ ನಿನ್ನ ಕೊಂದಹರೆಂದು
ಎಲೆ ಹೋತೇ ಅಳು ಕಂಡಾ!
ವೇದವನೋದಿದವರ ಮುಂದೆ ಅಳು ಕಂಡಾ!
ಶಾಸ್ತ್ರವ ಕೇಳಿದವರ ಮುಂದೆ ಅಳು ಕಂಡಾ!
ನೀನತ್ತುದಕ್ಕೆ ತಕ್ಕುದ ಮಾಡುವ ನಮ್ಮ ಲಿಂಗದೇವ.

ಯಾವುದೂ ಧರ್ಮದ ಆಶ್ರಯವಿಲ್ಲದ, ವೈದಿಕ ಸಂಸ್ಕಾರದಿಂದ ವಂಚಿತರಾದ ಶೂದ್ರ, ಅಸ್ಪೃಶ್ಯರು ಕ್ಷುದ್ರ ದೇವತೆಗಳಿಗೆ ಕೋಣ, ಕುರಿ, ಕೋಳಿ ಬಲಿಕೊಡುವುದನ್ನು ಕಾಣುತ್ತೇವೆ. ನಿಜವಾಗಿ ಹೇಳಬೇಕೆಂದರೆ ಪ್ರಥಮ ಅಹಿಂಸಾವಾದಿ ಯೋಗಿರಾಜ ಶಿವ; ಯಜ್ಞ ವಿರೋಧಿ. ನಂತರ ಬುದ್ಧ-ಮಹಾವೀರ, 12ನೆಯ ಶತಮಾನದಲ್ಲಿ ಬಸವಣ್ಣನವರು ಅಹಿಂಸೆ ಮತ್ತು ಸಸ್ಯಾಹಾರದ ಪ್ರತಿಪಾದಕರಾದರು. ಆದ್ದರಿಂದ ಸರಿಯಾಗಿ ಚಿಂತನೆ ಮಾಡದೆ ಸಸ್ಯಾಹಾರ ವೈದಿಕ ಪುರೋಹಿತಶಾಹಿಯ ಜೀವನ ವಿಧಾನ ಎಂದು ಭಾವಿಸುವ ದಲಿತವರ್ಗಗಳವರನ್ನು ಎತ್ತಿ ಕಟ್ಟುವ ಕ್ಷುಲ್ಲಕತನವನ್ನು ಚಿತ್ರದುರ್ಗ ಶ್ರೀಗಳು ಕೈಬಿಡಬೇಕು.

ಮುರುಘಾಮಠದ ನಿರ್ಮಾಪಕರು ಸಸ್ಯಾಹಾರಿಗಳಲ್ಲ

ಚಿತ್ರದುರ್ಗ ಸ್ವಾಮಿಗಳ ನಾಲಿಗೆ ಮತ್ತು ಲೇಖನಿ ವಿಚಿತ್ರವಾಗಿ ಹರಿಯುತ್ತಿವೆ. ಸಾಮಾನ್ಯವಾಗಿ ದೇಶವನ್ನು ಆಳುವ ರಾಜರು ತಮ್ಮ ವ್ಯಾಪ್ತಿಯಲ್ಲಿ ಬರುವ ಗುರುಗಳು. ಮಠಗಳಿಗೆ ಧನ ಸಹಾಯ ಮಾಡುವುದು ಸ್ವಾಭಾವಿಕ. ಅನೇಕ ಮುಸಲ್ಮಾನ್ ದೊರೆಗಳು ಸಹ ಹಿಂದು, ಬೌದ್ಧ, ಲಿಂಗಾಯತ ಮಠಗಳಿಗೆ ದಾನ, ಉಂಬಳಿ ನೀಡುತ್ತಿದ್ದುದುಂಟು. ಗುರುಗಳ ಆಶೀರ್ವಾದ, ಮಾರ್ಗದರ್ಶನದಲ್ಲಿ ಮುನ್ನಡೆಯಲು ತಮ್ಮವರೇ ಆದ ರಾಜಗುರುಗಳನ್ನು ರಾಜಮಹಾರಾಜರು ಹೊಂದಿರುತ್ತಿದ್ದರು. ಅದೇ ರೀತಿ ಚಿತ್ರದುರ್ಗ ಸಂಸ್ಥಾನವನ್ನಾಳಿದ ವೀರರಾಜ ಮದಕರಿ ನಾಯಕನು ತಾನು ಗೌರವಿಸುತ್ತಿದ್ದ ಗುರುಗಳಿಗೆ ಮಠವನ್ನು ಕಟ್ಟಿಕೊಟ್ಟಿದ್ದಾನೆ. ಆ ಮಠವು ಅನುಸರಿಸುತ್ತಾ ಬಂದಿರುವುದು ಬಸವಣ್ಣ-ಅಲ್ಲಮಪ್ರಭುಗಳ ಪರಂಪರೆಯನ್ನು. ಆದ್ದರಿಂದ ಈ ಸ್ವಾಮಿಗಳು ಶರಣ ಪರಂಪರೆಯಲ್ಲಿ ಸಾಗಬೇಕೇ ವಿನಾ ಮಠಕಟ್ಟಲು ಧನ ಸಹಾಯ ಮಾಡಿದವರ ಆಚಾರ-ವಿಚಾರಗಳನ್ನು ಅನುಕರಿಸಬೇಕಾಗಿಲ್ಲ; ಹಾಗೆ ಆ ಜನರೂ ನಿರೀಕ್ಷಿಸುವುದಿಲ್ಲ ಮತ್ತು ತಮಗಿಂತಲೂ ಗುರುಗಳು ಆಚಾರ-ವಿಚಾರಗಳಲ್ಲಿ ಮೇಲ್‌ಸ್ತರದಲ್ಲಿ ಇರುತ್ತಾರೆಂದೇ ರಾಜರು ಗುರುಗಳನ್ನು ಗೌರವಿಸುತ್ತಿದ್ದುದು.

ನಾಯಕ ಜನಾಂಗದವರಾದ ವೀರ ಮದಕರಿ ನಾಯಕ ಮುರಿಗಾ ಸ್ವಾಮಿಗಳಿಗೆ ಮಠವನ್ನು ದಾನ ರೂಪದಲ್ಲಿ ಕಟ್ಟಿಕೊಟ್ಟಿದ್ದಾನೆ. ಎಷ್ಟೋ ಜನ ರಾಜ ಮಹಾರಾಜರು, ಮುಸಲೀಮ್ ರಾಜರು ಸಹ ಹಿಂದೂ ಮಠಗಳಿಗೆ ದಾನಿವಿತ್ತಿದ್ದಾರೆ ಎಂದ ಮಾತ್ರಕ್ಕೆ ದಾನಿಗಳ ಜನಾಂಗಕ್ಕೆ ಆ ಮಠ ಸೇರುವುದಿಲ್ಲ ಅಥವಾ ದಾನಿಗಳ ಆಚಾರ-ವಿಚಾರ-ಸಂಸ್ಕೃತಿ ಮಠಕ್ಕೆ ಅನ್ವಯಿಸದು.

ಮನೋನಿಗ್ರಹವಿಲ್ಲದವರು ದೀಕ್ಷೆ ಪಡೆಯುವುದೇಕೆ ?

ಲಿಂಗಾಯತ ಧರ್ಮದ ಮುಖ್ಯ ಲಾಂಛನವಾದ ಇಷ್ಟಲಿಂಗವನ್ನು ಧರಿಸಿದವರು ವಚನ ಸಾಹಿತ್ಯ ಸಂವಿಧಾನದಂತೆ ನಡೆಯಬೇಕು. ದೀಕ್ಷಾ ಪೂರ್ವದ ಕೆಲವು ಅಭ್ಯಾಸಗಳನ್ನು, ಆಚರಣೆಗಳನ್ನು ಹವ್ಯಾಸವನ್ನು ಬಿಡಬೇಕು. ಇದ್ದಂತೆ ಇರೋ ಸಿದ್ಧಪ್ಪ ಆಗುವುದಾದರೆ ದೀಕ್ಷೆಯನ್ನು ಪಡೆಯುವ ಆಸೆಯಾದರೂ ಏಕೆ ?

ಶಿವಮೂರ್ತಿ ಶ್ರೀಗಳನ್ನು ಸಮರ್ಥಿಸಲು, ಪ್ರಜಾವಾಣಿಯ ಅರಿವಿನ ಅಂತರಾಳ ಅಂಕಣದಲ್ಲಿ ಬರೆಯುವ ಸೂಫಿ, ಬಿಜಾಪುರ ಅವರು ಎಸ್ಕಿಮೋ ಜನರ ಉದಾಹರಣೆ ಕೊಟ್ಟು ಅವರು ಜಲಚರ ಪ್ರಾಣಿಗಳನ್ನು ತಿಂದು ಜೀವಿಸುವರು. ಅವರಿಗೆ ಬದುಕಲು ಬೇರೆ ಆಹಾರವೇ ಇರದು ಎಂದಿದ್ದಾರೆ. ಬೌದ್ಧ ಧರ್ಮವು ಮೂಲತಃ ಸಸ್ಯಾಹಾರಿ ಧರ್ಮ. ವೈದಿಕ ಪುರೋಹಿತ ಶಾಹಿಯ ಆಕ್ರಮಣಕ್ಕೆ ತುತ್ತಾಗಿ ಬೌದ್ಧ ಭಿಕ್ಕುಗಳು ಟಿಬೆಟ್, ಚೈನಾ ಮುಂತಾಗಿ ಹೊರ ರಾಷ್ಟ್ರಗಳಿಗೆ ಹೋಗಬೇಕಾಯಿತು. ಆಗ ಅನಿವಾರ್ಯವಾಗಿ ಅಲ್ಲಿಯ ಜೀವನ ವಿಧಾನಕ್ಕೆ ಬೇಕಾದಂತೆ ಕೆಲವು ತಿದ್ದುಪಡಿ ಮಾಡಿಕೊಂಡು ಬೌದ್ಧ ಧರ್ಮವನ್ನು ಬೆಳೆಸಿದರು. ಅಂಥ ಅನಿವಾರ್ಯತೆಯು ಬಸವ ಧರ್ಮಕ್ಕೆ ಬಂದಾಗ ನೋಡೋಣ. ಲಿಂಗಾಯತ ಮಠಾಧಿಕಾರಿಗಳೊಳಗಣ ಭಿನ್ನಾಭಿಪ್ರಾಯ, ಕಚ್ಚಾಟದಿಂದ ಸ್ಥಳೀಯ ಲಿಂಗಾಯತರೇ ತಮ್ಮ ಧರ್ಮದ ಬಗ್ಗೆ ಉದಾಸೀನ ತಾಳುತ್ತಿರುವಾಗ ಹೊರದೇಶದ ಜನರ ಸಲುವಾಗಿ ಚಿಂತಿಸುವುದೇಕೆ ?

ಪೀಠ ತ್ಯಾಗವೇ ಸೂಕ್ತ

ಅಸ್ಪಷ್ಟವಾದ ಭಾಷೆಯಲ್ಲಿ ವಿವರಣೆ ನೀಡುತ್ತಾ ಹೊರಟಿರುವ ಶ್ರೀಗಳು ತಮ್ಮದು ಅಲ್ಲಮಪ್ರಭು ಪರಂಪರೆಯ ಮಠವೆಂದು, ಅಲ್ಲಮಪ್ರಭುಗಳ ಪೂರ್ವಚರಿತ್ರೆಯನ್ನು ಅರಿತಿರಬೇಕೆಂದು ತಿಳಿಸಿದ್ದಾರೆ. ಈ ಬಗ್ಗೆ ಯಾರೂ ಆಕ್ಷೇಪವೆತ್ತುತ್ತಿಲ್ಲ. ಅಲ್ಲಮಪ್ರಭು ದೇವರು ಶೂದ್ರಾತಿಶೂದ್ರ ಕುಲವಾದ ನಟುವರ ಜಾತಿಯಲ್ಲಿ ಹುಟ್ಟಿದರೆಂಬುದು ನಿಜವಿದ್ದರೂ ನಂತರ ಅವರು ಆಶ್ರಯಿಸಿ, ಅನುಸರಿಸಿದ್ದು ಬಸವಣ್ಣನವರು ಸ್ಥಾಪಿಸಿದ ಲಿಂಗಾಯತ ಧರ್ಮವನ್ನು. ಅದರ ಆಚಾರವನ್ನೇ ಅವರು ಪಾಲಿಸಿದ್ದಾರೆ. ಲಿಂಗಾಯತ ಸಮಾಜದಲ್ಲಿ ಗೊಂದಲವಿದೆ. ವೀರಶೈವ ಪದವು ಬಂದ ತೂರಿಕೊಂಡನಂತರ, ಹಾನುಗಲ್ ಕುಮಾರ ಸ್ವಾಮಿಗಳು ಅಖಿಲಭಾರತ ವೀರಶೈವ ಮಹಾಸಭೆ, ಶಿವಯೋಗ ಮಂದಿರವನ್ನು ಸ್ಥಾಪಿಸಿದ ನಂತರ ಗೊಂದಲ ಜಾಸ್ತಿಯಾಗಿದೆ ನಿಜ. ಆ ಗೋಜಲನ್ನು, ಸಿಕ್ಕನ್ನು ನಾವು ಬಿಡಿಸುತ್ತ ದಾರಿಯನ್ನು ನಿಚ್ಚಳಗೊಳಿಸುವ ದಿಶೆಯಲ್ಲಿಯೇ ಸಾಗಿದ್ದೆವು. ಆದರೆ ಶಿವಮೂರ್ತಿ ಸ್ವಾಮಿಗಳು ಹಿಂದೆ ಮುಂದೆ ಆಲೋಚಿಸದೆ ಮನಸ್ಸಿಗೆ ಬಂದರಂತೆ ನಿರ್ಣಯಗಳನ್ನು ಪ್ರಕಟಿಸುವುದು ಅಪಾಯಕಾರಿಯಲ್ಲವೆ ?

ಮಾಂಸಾಹಾರಿಗಳಿಗೂ ಧರ್ಮದಲ್ಲಿ ಹೃತ್ಪೂರ್ವಕ ಸ್ವಾಗತ ಉಂಟು. ಆದರೆ ಸ್ವೀಕರಿಸಿದ ಮೇಲೆ ಕೆಲವು ಪೂರ್ವಾಚರಣೆ ಬಿಡಬೇಕು. ಅವರು ಮಾಂಸಾಹಾರ ಮುಂದುವರಿಸಿದರೆ ಮೊದಲೇ ಈ ಸಮಾಜದಲ್ಲಿ ಇರುವವರಿಗೆ ಮುಜುಗರ, ಗೊಂದಲ ಆಗುವುದಿಲ್ಲವೆ? ಮತ್ತು ಅವರಲ್ಲೂ ಏನೂ ಕ್ರಿಯಾತ್ಮಕ ಬದಲಾವಣೆ ಆಗದೆ ಇದ್ದರೆ ದೀಕ್ಷೆ ಪಡೆದುಕೊಂಡು ಫಲವೇನು ? ಕೇವಲ

ಸಾಮಾಜಿಕ-ರಾಜಕೀಯ ಸ್ಥಾನಮಾನಕ್ಕೆ ಹೋರಾಡುವ ದಲಿತರು ಪತ್ರಿಕಾ ಹೇಳಿಕೆಗಳ ಮೂಲಕ ಸ್ವಾಮಿಗಳನ್ನು ಬೆಂಬಲಿಸುವರಾದರೂ ಅವರೇನೂ ದೀಕ್ಷೆಪಡೆದು ಧರ್ಮಸ್ವೀಕಾರ ಮಾಡುವುದಿಲ್ಲ. ಧರ್ಮ ಸ್ವೀಕಾರ ಮಾಡಿ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಳ್ಳಬೇಕೆಂದು ಬಯಸುವ ಅಧ್ಯಾತ್ಮ ಜೀವಿ ದಲಿತರು ಬರುವುದೇ ಬಸವ ಧರ್ಮದಲ್ಲಿರುವ ಲಿಂಗಪೂಜೆ, ಸಸ್ಯಾಹಾರ ಮುಂತಾದುವಕ್ಕೆ ಆಕರ್ಷಿತರಾಗಿ. ಶಿವಮೂರ್ತಿ ಸ್ವಾಮಿಗಳ ಇಂಥ ವಿಲಕ್ಷಣ ಕ್ರಾಂತಿಯಿಂದ 'ಗಿಡದಲ್ಲಿದ್ದ ಹಕ್ಕಿಯ ಮೇಲೆ ಗುರಿ ಇಡಲೋಸುಗ ಕೈಯಲ್ಲಿದ್ದ ಹಕ್ಕಿಯನ್ನು ಕಳೆದುಕೊಂಡ ದಡ್ಡ ಬೇಡ'ನಂತಾಗುವುದು.

ಮಾಂಸಾಹಾರ ನಿರ್ಬಂಧ ಸಡಲಿಸುವ ವಿಲಕ್ಷಣ ಸುಧಾರಣೆ ಮಾಡಬೇಕೆಂಬ ಆಕಾಂಕ್ಷೆ ಶಿವಮೂರ್ತಿ ಸ್ವಾಮಿಗಳಿಗೆ ಇದ್ದುದ್ದೇ ಆದರೆ ಅವರು ಬಸವ ಧರ್ಮ ಎಂಬ ಹೆಸರು ಬಳಸಲೇಬಾರದು. ಮಹಾತ್ಮಾ ಗಾಂಧಿ ಸಾರಾಯಿ ಅಂಗಡಿ ಎಂಬುದು ಹೇಗೆ ವಿರೋಧಾಭಾಸವೋ ಹಾಗೆ ಮಾಂಸಾಹಾರಕ್ಕೆ ಇಂಬುಕೊಡುವ ಬಸವ ಧರ್ಮವು ವಿರೋಧಾಭಾಸ! ಬೇರೆ ಏನಾದರೂ ಹೆಸರನ್ನು ತಮ್ಮ ಆಲೋಚನಾ ಸರಣಿಗೆ ಇಟ್ಟುಕೊಳ್ಳಲಿ.

ಶ್ರೀಗಳೇ ಹೇಳುವಂತೆ ಚಿತ್ರದುರ್ಗದ ಬೃಹನ್ಮಠವು ಬಸವ ಸಂಪ್ರದಾಯದ ವಿರಕ್ತ ಮಠ. ಮಧ್ಯಂತರದ ಅವಧಿಯಲ್ಲಿ ಅದು ಮತ್ತೆ ವೈದಿಕ-ಆಗಮಿಕ ಸಂಸ್ಕೃತಿಗೆ ಪಕ್ಕಾಗಿ ಶರಣ ಸಂಸ್ಕೃತಿಯನ್ನು ಬಿಟ್ಟಿತ್ತು. ಆ ಲೋಪವನ್ನು ಶ್ರೀಗಳು ಸರಿಪಡಿಸಿದ್ದಾರೆ. ಆದರೆ ಬಸವ ಮಾರ್ಗಕ್ಕೆ ಹೊರತಾದ ಸುಧಾರಣೆ ಮಾಡಬೇಕಾಗಿದ್ದರೆ ಶ್ರೀಗಳು ಪೀಠವನ್ನು ತ್ಯಾಗ ಮಾಡಿ ಹೊರಬರಬೇಕು. ಬ್ರಾಹ್ಮಣ ಧರ್ಮದಲ್ಲಿದ್ದರೆ ತಾವು ಬಯಸುವ ಸುಧಾರಣೆ ಸಾಧ್ಯವಾಗದೆಂದು ಅದನ್ನು ಬಿಟ್ಟು ಬಂದು ಹೊಸಧರ್ಮವನ್ನು ಬಸವಣ್ಣನವರು ಕೊಟ್ಟರು. ಲಿಂಗಾಯತ ಸಮಾಜದ ಆಗುಹೋಗು ನೋಡಿಕೊಳ್ಳುವ ಕರ್ತವ್ಯ ಹೊತ್ತ ಬೃಹನ್ಮಠದ ಗದ್ದುಗೆಯ ಮೇಲೆ ಕುಳಿತು ''ದೀಕ್ಷಾ ನಂತರವೂ ಮಾಂಸಾಹಾರ ಮುಂದುವರಿಸಬಹುದು'' ಎಂದು ನವದೀಕ್ಷಿತರಿಗೆ ಕೊಡುವ ಕರೆ, ಅವಕಾಶ ಶರಣ ಸಂಸ್ಕೃತಿಗೆ ಧಕ್ಕೆ ತರದೇ ಇರದು. ನಿಡುಮಾಮಿಡಿ ಶ್ರೀಗಳದೂ ಇಂಥ ದ್ವಂದ್ವ ನಿಲುವೇ ಆಗಿದೆ. ಲಿಂ|| ಜಚನಿಯವರ ವಿಚಾರಧಾರೆಯನ್ನು ಪ್ರತಿಪಾದಿಸದೆ ತಮಗೆ ತೋಚಿದಂತೆ ಮಾತನಾಡುವುದು ಗುರು-ಲಿಂಗ-ಜಂಗಮ ದ್ರೋಹ. ಆ ಪೀಠದ ಆಸೆ ಇದ್ದರೆ ಹಿಂದಿನ ಗುರುಗಳು ಹಾಕಿಕೊಟ್ಟ ಅವರು ನಡೆದ ದಾರಿಯಲ್ಲಿ ನಡೆಯಬೇಕು. ಅದರಲ್ಲಿ ನಂಬಿಕೆ ಇಲ್ಲದಿದ್ದರೆ ಅದನ್ನು ತೊರೆದು ಬಂದು ತಾವು ಪ್ರತಿಪಾದಿಸುವ ಮಾರ್ಗದಲ್ಲಿ ನಡೆಯಬೇಕು. ಅದಕ್ಕೇ ನಿಯತ್ತು ಎನ್ನುವುದು.

ಹಿಂದೊಮ್ಮೆ ನಮ್ಮ ಪೂಜ್ಯ ಗುರುಗಳಿಗೆ ಒಂದು ಅವಕಾಶ ಬಂದಿತ್ತು. ದೊಡ್ಡ ವಿರಕ್ತ ಮಠ, ಆ ಸ್ವಾಮೀಜಿ ಬೇರೊಂದು ಪಂಥದ ಪ್ರಭಾವಕ್ಕೆ ಒಳಗಾಗಿ ಇಷ್ಟಲಿಂಗವನ್ನು ಬಿಟ್ಟಿದ್ದರಲ್ಲದೆ ಅದ್ವೈತವನ್ನು ಹೇಳುತ್ತಿದ್ದರು. ಆಸ್ತಿವಂತ ಆ ಮಠಕ್ಕೆ ಪೂಜ್ಯ ಲಿಂಗಾನಂದ ಅಪ್ಪಾಜಿಯವರನ್ನು ತಮ್ಮ ಉತ್ತರಾಧಿಕಾರಿಯಾಗಲು ಕೇಳಿಕೊಂಡರು; ಆದರೆ ಇಷ್ಟಲಿಂಗವನ್ನು ಬಿಡಬೇಕು ಎಂದರು. ಪೂಜ್ಯ ಅಪ್ಪಾಜಿ ಹೇಳಿದ ಮಾತು ನಮಗಿಂದೂ ಸ್ಫೂರ್ತಿಯ ಸೆಲೆಯಾಗಿದೆ, ''ನಾನು ಮಠಕ್ಕಾಗಿ ಸನ್ಯಾಸಿಯಾಗಿಲ್ಲ, ಇಷ್ಟಲಿಂಗ ತತ್ತ್ವದ ಪ್ರಚಾರಕ್ಕಾಗಿಯೇ ಜೀವನ ಮುಡುಪಿಟ್ಟವನು. ಮಠ, ಆಸ್ತಿಗಾಗಿ ಇಷ್ಟಲಿಂಗವನ್ನು ಬಿಡುವವನಲ್ಲ, ಬಸವ ತತ್ತ್ವವನ್ನು ಬಿಟ್ಟು ಅದ್ವೈತ ಹೇಳುವವನಲ್ಲ''. ಶಿವಮೂರ್ತಿ ಶ್ರೀಗಳು ಸಹ

ಕೆಲವೊಂದು ಆದರ್ಶ ಪಾಲಿಸಬೇಕು. ತಾವು ಕ್ರಾಂತಿಕಾರಿ ಎನ್ನುತ್ತ ಅವರು ಪ್ರತಿನಿಧಿಸುವ ಮಠ, ಶರಣ ಪರಂಪರೆ, ಬಸವ ಧರ್ಮಕ್ಕೆ ದ್ರೋಹ ಬಗೆಯಬಾರದು. ತಮ್ಮ ಮಠವನ್ನು ಪೋಷಿಸಿಕೊಂಡು ಬಂದಿರುವ ಲಿಂಗಾಯತ ಸಮಾಜದ ವಿರುದ್ಧ ಯಾರನ್ನೂ ಎತ್ತಿ ಕಟ್ಟುವ ಕೆಲಸವನ್ನು ಮಾಡಬಾರದು ಎಂದು ಕಿವಿ ಮಾತು ಹೇಳುತ್ತೇವೆ.

ಐತಿಹಾಸಿಕ ದುರಂತ

ಯಾವ ಒಂದು ಕ್ಷೇತ್ರದಲ್ಲಿ ಅಂದರೆ ಕೂಡಲ ಸಂಗಮದಲ್ಲಿ ಸುಮಾರು 850 ವರ್ಷಗಳ ಹಿಂದೆ (14-1-1155) ವಿಶ್ವಗುರು ಬಸವಣ್ಣನವರ ಹೃದಯ ಮಂದಿರದಲ್ಲಿ ಲಿಂಗಾಯತ ಧರ್ಮವು ರೂಪುಗೊಂಡಿತೋ ಅಲ್ಲೇ ಈ ಧರ್ಮದ ಹನನ ಮಾಡುವ ''ಹಿಂಸಾ ತತ್ತ್ವ, ಮಾಂಸಾಹಾರಗಳು ಬಸವ ಧರ್ಮಕ್ಕೆ ಅನುಚಿತವಲ್ಲ.'' ಎಂಬ ನಿರ್ಣಯವು ಬಸವ ಪರಂಪರೆಯ ಪ್ರಮುಖ ಮಠವೆಂದು ಹೇಳಿಕೊಳ್ಳುತ್ತಿದ್ದ ಚಿತ್ರದುಗ ಬೃಹನ್ಮಠದ ಶ್ರೀಗಳಿಂದ ಕೈಗೊಳ್ಳಲ್ಪಟ್ಟಿದ್ದು ಒಂದು ಐತಿಹಾಸಿಕ ದುರಂತ.

ಈಗ ತೀರಿಕೊಂಡ ಹಿಂದೆ ಕುಖ್ಯಾತಿ ಪಡೆದಿದ್ದ ಓರ್ವ ವಿರಕ್ತ ಸ್ವಾಮಿಗಳು ಮಾಂಸಾಹಾರ, ಮದ್ಯಪಾನ, ಸ್ತ್ರೀ ವ್ಯಸನ ಎಲ್ಲದಕ್ಕೂ ಪ್ರಸಿದ್ಧರಾಗಿದ್ದರು. ಅವರು ಪ್ರತಿನಿಧಿಸುತ್ತಿದ್ದ ಒಂದು ವಿರಕ್ತ ಮಠ ನೂರಾರು ಶಾಖಾಮಠಗಳನ್ನು ಹೊಂದಿದ್ದು ಸಿಕ್ಕಾಪಟ್ಟೆ ಆದಾಯ ಹೊಂದಿತ್ತು. ಅನಾಯಾಸವಾಗಿ ಬರುತ್ತಿದ್ದ ಹಣದಿಂದ ಕೆಟ್ಟುಹೋದ ಆ ಸ್ವಾಮಿಗಳು ಇಡೀ ಸಮಾಜ ನಾಚಿ ತಲೆ ತಗ್ಗಿಸುವಂತೆ ಮಾಡಿದ್ದರು. ಆದರೆ ಅವರಿಗಿಂತಲೂ ಶಿವಮೂರ್ತಿ ಸ್ವಾಮಿಗಳು ಕೆಳಮಟ್ಟಕ್ಕೆ ಇಳಿದಿದ್ದಾರೆ. ಏಕೆಂದರೆ ಆ ವ್ಯಕ್ತಿ ವೈಯಕ್ತಿಕವಾಗಿ ದುಶ್ಚಾರಿತ್ರ್ಯ ಉಳವರಾಗಿದ್ದರೂ ಅದು ತಮ್ಮ ದೌರ್ಬಲ್ಯವೆಂದು ತಿಳಿದಿದ್ದರು, ತಮ್ಮ ಅನಾಚಾರಕ್ಕೆ ಅವರು ಸಾಮಾಜಿಕ - ಧಾರ್ಮಿಕ ಅಧಿಕೃತವಾದ ಮುದ್ರೆಯನ್ನು ಒತ್ತಲು ಪ್ರಯತ್ನಿಸುತ್ತಿರಲಿಲ್ಲ. ತಮ್ಮ ದೌರ್ಬಲ್ಯಕ್ಕಾಗಿ ನಾಚಿಕೊಳ್ಳುತ್ತಿದ್ದರು ಮತ್ತು ಒಳ್ಳೆಯವರನ್ನು ಕಂಡು ಗುಣಗ್ರಾಹಕತ್ವದಿಂದ ಗೌರವಿಸುತ್ತಿದ್ದರು. ನಮ್ಮ ಮಹಿಳಾ ಜಗದ್ಗುರು ಪೀಠ ಸ್ಥಾಪನೆಯಾದಾಗ ಅಭಿನಂದಿಸಿ ಪತ್ರ ಬರೆದಿದ್ದರು ಮತ್ತು ಅವರು ಗೂಂಡಾಗಿರಿಯನ್ನು ಎಂದೂ ಪ್ರಚೋದಿಸಲಿಲ್ಲ. ಆದರೆ ಬೃಹನ್ಮಠದ ಈ ನಿಸ್ಸೀಮರು ಗೂಂಡಾಗಿರಿಗೂ ಪ್ರಸಿದ್ಧರು, ಆಕ್ರಮಣಕಾರಿಗಳು ಮಾತ್ರವಲ್ಲ ತಮ್ಮ ಅನಾಚಾರದ ಆಲೋಚನೆಗಳಿಗೆ ಅಧಿಕೃತ ಬಹಿರಂಗಿಕ ರೂಪಕೊಟ್ಟು ಧರ್ಮವನ್ನು ವಿಕೃತಗೊಳಿಸಲು ಹೊರಟ ಭ್ರಾಂತಿಕಾರಿಗಳು ಎನ್ನದೇ ಗತ್ಯಂತರವಿಲ್ಲ.

''ಅಲ್ಪರ ಸಂಗ ಅಭಿಮಾನದ ಭಂಗ'' ಎಂಬ ಮಾತು ಚಿತ್ರದುರ್ಗ ಸ್ವಾಮಿಗಳನ್ನು ಅನುಸರಿಸುವವರಿಗೆ ಬಹಳ ಚೆನ್ನಾಗಿ ಅನ್ವಯವಾಗುತ್ತದೆ. ''ಲಿಂಗದೇವ'' ವಚನಾಂಕಿತ ಎಷ್ಟು ಘನವಾದ ಪದ. ಏಕ ದೇವೋಪಾಸಕರಾಗಬೇಕಾದ ಲಿಂಗಾಯತರು ಕಟ್ಟಿಕೊಳ್ಳುವುದು ಲಿಂಗದೇವರನ್ನು, ಪೂಜಿಸುವುದು ಲಿಂಗದೇವರನ್ನು. ಅದಕ್ಕೆಂದೇ ಬಾಲಲೀಲಾ ಮಹಾಂತ ಸ್ವಾಮಿಗಳು ಲಿಂಗದೇವರಿಗೆ ಆರತಿ ಮಾಡಿದ್ದಾರೆ :

ಬೆಳಗುವೆನಾರತಿ ಲಿಂಗದೇವರೆ ನಿಮಗೆ
ಥಳಥಳಿಸಿ ಹೊಳೆವ ಚಿತ್ಕಂಗಳೊಳಗೆ

ಷಣ್ಮುಖ ಶಿವಯೋಗಿಗಳು ಅಂಗೈಯಲ್ಲಿ ಲಿಂಗವನ್ನಿಟ್ಟುಕೊಂಡು ಹೀಗೆ ಹಾಡುತ್ತಾರೆ.

ಅಣುವಿಂಗೆ ಅಣು ಮಹತ್ತಿಂಗೆ ಮಹತ್ತು
ಎನಿಸುವ ಲಿಂಗದೇವನ ಕಂಡೆನಯ್ಯ.

ಲಿಂಗದೇವನ ಮಹತಿ ಅರ್ಥವಾಗದೆಯೋ ಅಥವಾ ಅರ್ಥವಾದರೂ ನಮ್ಮನ್ನು ವಿರೋಧಿಸಬೇಕೆಂದೋ ಚಿತ್ರದುರ್ಗ ಸ್ವಾಮಿಗಳು ಹಣ ಚೆಲ್ಲಿ ಜನರನ್ನು ಪ್ರಚೋದಿಸಿ ವಿರೋಧ ಮಾಡಲು ವಿಪರೀತ ಪ್ರಯತ್ನ ಮಾಡಿದರು. ಬಸವ ತತ್ತ್ವದ ಸಂರಕ್ಷಕರು ಅಥವಾ ಕಾವಲು ನಾಯಿ ತಾವೇ ಏನೋ ಎಂಬಂತೆ ಆರ್ಭಟ ಮಾಡಿದರು. ಈಗ ಮಾಂಸಾಹಾರ ನಿರ್ಬಂಧ ಸಡಲಿಸುವ ಇವರ ಆಘಾತಕಾರಿ ಬಸವ ತತ್ತ್ವ ಹಂತಕ ಕೆಲಸಕ್ಕೆ ಇವರನ್ನು ನಂಬಿ ಹಿಂದೆ ಹೊರಟವರು ಏನು ಉತ್ತರ ಹೇಳುವರು ?

ವೀರಶೈವ ಮಹಾಸಭಾ ಅಧ್ಯಕ್ಷ ಭೀಮಣ್ಣ ಖಂಡ್ರೆ ಬಹಳ ತಡವಾಗಿ (10-5-2004 ರಂದು) ಹೇಳಿಕೆ ನೀಡಿ ಶ್ರೀಗಳು ಪೀಠತ್ಯಾಗ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಗದಗಿನ ಶ್ರೀಗಳು ಇಳಕಲ್ ಶ್ರೀಗಳು, ಭಾಲ್ಕಿ ಶ್ರೀಗಳು ಈವರೆಗೂ ಕಟು ವಿರೋಧ ವ್ಯಕ್ತಪಡಿಸಿಲ್ಲ. ಬಸವ ಧರ್ಮಕ್ಕೆ ಮಾರಣಾಂತಿಕ ಪೆಟ್ಟು ನೀಡಬಹುದಾದ ಈ ವಿಚಾರದ ಬಗ್ಗೆ ವಿರೋಧದ ಧ್ವನಿ ಎತ್ತದ ಇದೇ ಸ್ವಾಮಿಗಳು ಪರಮ ಪವಿತ್ರವಾದ "ಲಿಂಗದೇವ" ಕುರಿತು ಆಕಾಶ-ಭೂಮಿ ನಡುಗುವಂತೆ ಹುಯಿಲು ಎಬ್ಬಿಸಿದರು. ಇದರಿಂದ ತಿಳಿಯಬಹುದಾದ್ದು ಏನೆಂದರೆ ಬೇಕಾದವರಾದರೆ ಬೇವೂ ಇವರಿಗೆ ಸಿಹಿ, ಬೇಡವಾದವರಾದರೆ ಬೆಲ್ಲವೂ ಕಹಿ. ಮತ್ತು ಇವರಿಗೆ ನಮ್ಮ ಮೇಲಿರುವುದು ವೈಯಕ್ತಿಕ ದ್ವೇಷ, ಮಾತ್ಸರ್ಯಗಳೇ ವಿನಾ ತಾತ್ತ್ವಿಕ ವಿರೋಧವಲ್ಲ. ಈ ವೈಯಕ್ತಿಕ ದ್ವೇಷಕಾರಲು 'ಲಿಂಗದೇವ' ಒಂದು ನೆಪ ಮಾತ್ರ.

ಇನ್ನು ಈ ಶಿವಮೂರ್ತಿ ಸ್ವಾಮಿಗಳ ಬೆಂಬಲಿಗರಾದ ಬಸವ ಕೇಂದ್ರಗಳವರು ಯಾವ ಮಾರ್ಗವನ್ನು ಬೆಂಬಲಿಸುವರೋ ? ಹಿಡಿಯುವರೊ ? ಇವರ ಪರಿಸ್ಥಿತಿ ಅಗಸನ ಮನೆ ನಾಯಿ ಹಳ್ಳಕ್ಕೂ ಹತ್ತಲಿಲ್ಲ ಮನೆಗೂ ಹತ್ತಲಿಲ್ಲ ಎಂಬಂತಹ ಎಡಬಿಡಂಗಿ ಪರಿಸ್ಥಿತಿ. ಸ್ವಾಮಿಗಳ ಹಣ ಮತ್ತು ಪ್ರಚೋದನೆಗೆ ಒಳಗಾಗಿ ನಮಗೆ, ನಮ್ಮ ಶರಣರಿಗೆ ಕೊಡಬಾರದ ತೊಂದರೆ ಕೊಟ್ಟರು. ಬಸವ ಕೇಂದ್ರ ಮತ್ತು ಬಸವ ಬಳಗದ ಪ್ರಭೃತಿಗಳು ಈಗ ವಹಿಸಿರುವ ಮೌನ ನೋಡಿದರೆ ಅವರ ಬಸವ ತತ್ತ್ವದಲ್ಲಿನ ಶ್ರದ್ಧೆಯ ಪ್ರಾಮಾಣಿಕತೆ ನಿಚ್ಚಳವಾಗುತ್ತಿದೆ. ಚಿತ್ರದುರ್ಗದ ಶ್ರೀಗಳು ಮತ್ತು ಇಳಕಲ್ ಸ್ವಾಮಿಗಳ ಪರಮ ಭಕ್ತರಾದ ಧಾರವಾಡದ ನವಲಕಟ್ಟಿ ಕುಟುಂಬದವರು, ನಮ್ಮವರ ಪ್ರವಚನಗಳು ಆಗುವಾಗ ಭಯಂಕರ ಕಿರುಕುಳ ಕೊಟ್ಟ ಮಾಜಿ ಶಾಸಕ ಚಂದ್ರಕಾಂತ ಬೆಲ್ಲದ ಅವರ ಪರಿವಾರದವರು ಚಕಾರ ಎತ್ತದೆ ಮೌನವಾಗಿದ್ದು 'ಮಾಂಸಾಹಾರ ಪದ್ಧತಿಯನ್ನು ಪ್ರೋತ್ಸಾಹಿಸುವರೇನೋ' ಎಂಬಂತೆ ಕುಳಿತಿರುವುದನ್ನು ನೋಡಿದರೆ ಆಶ್ಚರ್ಯವೆನಿಸುತ್ತಿದೆ. ಈಗಲಾದರೂ ಸ್ವಾಮಿಗಳ ಪ್ರಚೋದನೆಯ ಮಾತು ಕೇಳಿ ಇವರು ಮಾಡಿದಂತಹ ಹೇಯ ಕೃತ್ಯಗಳ ಬಗ್ಗೆ ಪಶ್ಚಾತ್ತಾಪ ಪಡಬಹುದೆಂದು. ವ್ಯಕ್ತಿಗಿಂತಲೂ ತತ್ತ್ವ ಮುಖ್ಯ ಎಂದು ತಿಳಿದು ಸ್ವಾಮಿಗಳ ಸಾಂಗತ್ಯ ಬಿಟ್ಟು ಸತ್ಯ ತತ್ತ್ವವನ್ನು ಎತ್ತಿ ಹಿಡಿಯಬಹುದೆಂದು ಆಶಿಸೋಣವಲ್ಲವೆ ?

ಅಪ್ರಬುದ್ಧರು ಯಾರು ಮಾತೆಯವರೇ ?

ಕಳೆದ ಏಪ್ರಿಲ್ 26ರಂದು ನಡೆದ ಚುನಾವಣೆಗಳಲ್ಲಿ ಧಾರವಾಡ ಉತ್ತರ ಲೋಕಸಭಾ ಅಭ್ಯರ್ಥಿಯಾಗಿ 'ಕನ್ನಡ ನಾಡು' ಪಕ್ಷದ ಪರವಾಗಿ ಸ್ಪರ್ಧಿಸಿದ ಶ್ರೀಮಂತಿ ಮಾತೆ ಮಹಾದೇವಿಯವರಿಗೆ ಮತಗಳ ಎಣಿಕೆಯ ಮುನ್ನವೇ ಸೋಲಿನ ಕರಾಳ ಛಾಯೆ ಸ್ಪಷ್ಟವಾಗಿ ಕಾಣಿಸಹತ್ತಿದೆ !? ಅದಕ್ಕೆ ಅವರು "ನನಗೆ ವೋಟು ಹಾಕದವರು ಅಪ್ರಬುದ್ಧರು ಎಂದು ಮೂದಲಿಸಿದ್ದಾರೆ - ಹೀಯಾಳಿಸಿದ್ದಾರೆ. ಅವರ ದೃಷ್ಟಿಯಲ್ಲಿ ನಾನೂ ಒಬ್ಬ "ಅಪ್ರಬುದ್ಧ" ಯಾಕೆಂದರೆ ನಾನವರಿಗೆ ವೋಟು ಹಾಕಿಲ್ಲ. ಅದಕ್ಕೇ ಸಮಸ್ತ "ಅಪ್ರಬುದ್ಧರ" ಪರವಾಗಿ ಇಗೋ ನನ್ನ ಪತ್ರ. ಮಾತೆಯವರಿಗೆ ಯಾವ ಪಕ್ಷದ ಪರ ಗಾಳಿ ಬೀಸಹತ್ತಿದೆ - ಯಾವ ಪಕ್ಷ ಜನಪ್ರಿಯವಾದುದು ಎಂದು ಅರಿಯದ ಅಂತಹ ಪಾರ್ಟಿಯ ಪರ ಸ್ಪರ್ಧಿಸುವುದನ್ನು ಬಿಟ್ಟು ಮಾತೆಯವರು ಕೇವಲ ಧನಬಲದಿಂದ ಅಧಿಕಾರದ ಚುಕ್ಕಾಣಿ ಹಿಡಿವ ಕನಸು ಕಂಡವರ "ಮುಳುಗುವ ದೋಣಿ"-"ಕನ್ನಡ ನಾಡು" ಸೇರಿ ಸ್ಪರ್ಧಿಸಿದ್ದು "ಪ್ರಬುದ್ಧ"ರ ಲಕ್ಷಣವೇ ?

ಧರ್ಮದ ಕೆಲಸವನ್ನು ಬದಿಗೊತ್ತಿ ಕ್ಷುಲ್ಲಕ ಅಧಿಕಾರಕ್ಕಾಗಿ ರಾಜಕಾರಣಕ್ಕೆ ಧುಮುಕಿ ಅಪಜಯ ಕಾಣುತ್ತಿರುವುದು ಪ್ರಬುದ್ಧತನವೇ? ದ್ರಾಕ್ಷಿಗಾಗಿ ಆಸೆಪಟ್ಟು ಅದು ನಿಲುಕದಿದ್ದಾಗ ಛೀ ದ್ರಾಕ್ಷಿ ಹುಳಿ "ನರಿ ಬುದ್ಧಿ" ಪ್ರಬುದ್ಧತನವೇ ? ಕುಣಿಯಲು ಬಾರದಿದ್ದರೆ ನೆಲ ಡೊಂಕು ಅನ್ನುವ ಹಾಸ್ಯಾಸ್ಪದ ಸ್ಥಿತಿ ಪ್ರಬುದ್ಧತನವೇ ?

ವೀರಶೈವರ ವೋಟುಗಳೆಲ್ಲ ನನ್ನ ಉಡಿಗೆ ಎಂಬ ತಪ್ಪು ಲೆಕ್ಕಾಚಾರದಿಂದ ಜಾತೀಯತೆ ಎಂಬ ಸ್ವಾರ್ಥದಿಂದ ಸ್ಪರ್ಧೆಗಿಳಿದು ಇದೀಗ ವೀರಶೈವರ ವೋಟು ಬೀಳದಿರುವುದು ಖಾತ್ರಿಯಾದಾಗ - ಮತದಾರರನ್ನು ಮೂದಲಿಸುವುದು ಪ್ರಬುದ್ಧತನವೇ ? ತಾನು ಕೆಟ್ಟ ಕೋತಿ ತೋಟವನ್ನೇ ಹಾಳು ಮಾಡಿತು ಎಂಬಂತೆ ತಮ್ಮ ಸೋಲಿಗಾಗಿ ಎಲ್ಲ ಮತದಾರರನ್ನು ಜವಾಬ್ದಾರರನ್ನಾಗಿಸ ಹೊರಟಿರುವ ಮಾತೆ ಮಹಾದೇವಿಯವರು ತಮ್ಮ ಅಸಂಬದ್ಧ ಅಪವಾದವನ್ನು, ನಿಂದನೆಯನ್ನು ಹಿಂದಕ್ಕೆ ಪಡೆದು ಎಲ್ಲ "ಅಪ್ರಬುದ್ಧರ" ಬೇಷರತ್ ಕ್ಷಮೆ ಕೋರಬೇಕು. ಅದಿಲ್ಲದೆ ಒಣಪ್ರತಿಷ್ಠೆಗೆ ಮೊಂಡು ತನಕ್ಕೆ ಜೋತು ಬಿದ್ದರೆ ಸಮಸ್ತ ಮತದಾರರ ರೊಚ್ಚನ್ನು, ಕಿಚ್ಚನ್ನು ಪ್ರತಿಭಟನೆಯನ್ನು ಎದುರಿಸುವುದು ಅನಿವಾರ್ಯವಾದೀತು! ಹುಷಾರ್!

- ವಾಸುದೇವ ರಾ. ಕಲಘಟಗಿ, ಹುಬ್ಬಳ್ಳಿ
7-5-2004, ಕನ್ನಡ ಪ್ರಭಾ

ಭಾರತೀಯ ಮತದಾರರು ಅಪ್ರಬುದ್ಧರಲ್ಲದೆ ಮತ್ತೇನು ?

– ಮಾತಾಜಿ

ಶುದ್ಧ ಮತ್ತು ಪವಿತ್ರ ಎನಿಸಿಕೊಳ್ಳುವ ಧಾರ್ಮಿಕ ಜಗತ್ತಿನಲ್ಲೇ ಬಗೆಬಗೆಯ ಆರೋಪ ವಿನಿಮಯ ಮಾಡಿಕೊಳ್ಳುವ ಜನರು ಇರುವಾಗ ಇನ್ನು ಕೊಳಕು ಎಂದೇ ತಲೆಪಟ್ಟಿ ಕಟ್ಟಿರುವ ರಾಜಕೀಯ ಜಗತ್ತಿನಲ್ಲಿ ಆರೋಪಗಳು ಸೂರೆಯಾಡುವುದು ಏನು ವಿಶೇಷ. ಆದರೂ ಅತ್ಯಂತ ಸೋಜಿಗವೆಂದರೆ ರಾಜಕೀಯ ರಂಗದಲ್ಲಿ ಫೆಬ್ರವರಿ 15 ರಿಂದ ಏಪ್ರಿಲ್ 26 ರವರೆಗೆ ಸಂಚರಿಸಿದರೂ ಒಂದು ಟೀಕೆ ಅಥವಾ ಆರೋಪ ಕಾಂಗ್ರೆಸ್‌ನವರಿಂದಾಗಲೀ, ಬಿಜೆಪಿಯವರಿಂದಾಗಲಿ ಅಥವಾ ಮತ್ತಾವುದೇ ರಾಜಕೀಯ ಪಕ್ಷದಿಂದಾಗಲೀ ಬರಲೇ ಇಲ್ಲ. ಒಳಗೊಳಗೇ ಮಾತ್ರ ''ಇವರಿಗೇಕೆ ಬೇಕಿತ್ತು ರಾಜಕೀಯ ? ಧಾರ್ಮಿಕ ಗುರುಗಳಾಗಿ ಅಲ್ಲೇ ಇರಬೇಕಿತ್ತು.'' ಎಂದು ಬಲಿತ ರಾಜಕೀಯ ಪಕ್ಷಗಳವರು ಪ್ರಚಾರ ಮಾಡಿದರು ಎಂದು ಕೆಲವರು ಹೇಳಿದರು. ಆದರೆ ಆ ಜನರು ಬಹಿರಂಗವಾಗಿ ಹೇಳಲಿಲ್ಲ. ಕೆಲವು ಕಡೆ ಕಾಂಗ್ರೆಸ್ಸಿನವರು ''ನಮಗೇ ಓಟು ಹಾಕಿರಿ'' ಎಂದಾಗ, ಮುಗ್ಧರಾದ ಗ್ರಾಮೀಣ ಜನರು, ''ಅವರು(ಮಾತಾಜಿ) ಗುರುಗಳು. ಗುರುಗಳಿಗೆ ಒಂದು ವೋಟು(ಲೋಕಸಭೆಗೆ) ಹಾಕುತ್ತೇವೆ'' ಎಂದರೆ, ''ಅಹುದು, ಗುರುಗಳದೇ ಹಸ್ತದ ಚಿಹ್ನೆ. ಅವರೇ ಆಶೀರ್ವಾದ ಕೊಟ್ಟಿರುವುದು. ಹಸ್ತಕ್ಕೇ ಮತ ಹಾಕಿರಿ'' ಎಂದು ಕಾಂಗ್ರೆಸ್ಸಿನವರು ಪ್ರಚಾರ ಮಾಡುತ್ತಿದ್ದರು ಎಂದು ಹಲವು ಜನ ತಿಳಿಸಿದರು. ಬಿಜೆಪಿಯದು ಮೊದಲನೆಯ ಬಟನ್ ಇತ್ತು. ಅವರು, ''ಮೊದಲನೆ ಬಟನ್ ಒತ್ತಿರಿ. ಬೇರೆಯದನ್ನು ಒತ್ತಿದರೆ ಶಾಕ್ ಹೊಡೆಯುತ್ತದೆ'' ಎಂದು ಅವಿದ್ಯಾವಂತರಿಗೆ ಹೇಳುತ್ತಿದ್ದರಂತೆ ಎಂದು ಮತ್ತೆ ಕೆಲವರು ಹೇಳಿದರು.

ಆದರೆ ನಾನು ಮತದಾರರನ್ನು ಅಪ್ರಬುದ್ಧರು ಅಂದೆ ಎಂದು ಸುದ್ದಿ ಎಬ್ಬಿಸಿದವರು ಕನ್ನಡ ಪ್ರಭಾದ ಪ್ರತಿನಿಧಿ ಮಲ್ಲಿಕಾರ್ಜುನ ಸಿದ್ಧಣ್ಣನವರು; ದಿ. 27-4-2004ರ ಪತ್ರಿಕಾಗೋಷ್ಠಿಯಲ್ಲಿ ಇವರಿಗೆ ದನಿಗೂಡಿಸಿದವರು ಸಂಯುಕ್ತ ಕರ್ನಾಟಕದವರು. ನಾನು ಚುನಾವಣೆಯಲ್ಲಿ ಮತದಾರರ ಆಕ್ರೋಶಕ್ಕೆ ಒಳಗಾಗಿ ಕಡಿಮೆ ಮತ ತೆಗೆದುಕೊಂಡು ಸೋತಿದ್ದು ಈ ಹೇಳಿಕೆಯಿಂದ ಎಂದು ಅದೇ ಕನ್ನಡ ಪ್ರಭಾ (15-5-2004) ಬರೆಯಿತು. ಸತ್ಯವನ್ನು ಹೇಳುವುದಾದರೆ ಚುನಾವಣೆ - ಮತದಾನ ದಿ. 26-4-2004 ರಂದು ಮುಗಿದಿತ್ತು. ನಮಗೆ ಅವರೆಗೆ ಕಲ್ಯಾಣ ಪರ್ವದ ಬಗ್ಗೆ ಏನೇನೂ ಪ್ರಚಾರ ಕೊಡಲು ಆಗಿರಲಿಲ್ಲ. ಚುನಾವಣೆಯ ಮರುದಿನ (27-4-2004) ಪತ್ರಿಕಾಗೋಷ್ಠಿ ಕರೆದು ಕಲ್ಯಾಣ ಪರ್ವದ ಬಗ್ಗೆ ಹೇಳಿದೆ. ಆಗ ಕನ್ನಡ ಪ್ರಭಾ ಪ್ರತಿನಿಧಿ ಮಲ್ಲಿಕಾರ್ಜುನ ಸಿದ್ಧಣ್ಣನವರು (ಯಾವಾಗಲೂ ಕೊಂಕು ಪ್ರಶ್ನೆ ಕೇಳುವುದು ಜಾಸ್ತಿ)

''ನೀವು ಯಾವ ಉದ್ದೇಶಕ್ಕೆ ಧರ್ಮಪ್ರಚಾರ ಬಿಟ್ಟು ರಾಜಕೀಯಕ್ಕೆ ಬಂದಿರಿ ?'' ಎಂದು ಕೇಳಿದರು.

''ನಾನೇನೂ ಧಾರ್ಮಿಕ ಕರ್ತವ್ಯ, ಪೀಠ ಬಿಟ್ಟು ಬಂದಿಲ್ಲ. ಅದನ್ನು ಹಿಡಿದುಕೊಂಡೇ ಬಂದಿದ್ದೇನೆ. ರಾಜಕೀಯವೂ ಸಮಾಜ-ರಾಷ್ಟ್ರ ಸೇವೆಯ ಒಂದು ಸಾಧನ. ಒಂದು ಹರಿತವಾದ ಚಾಕು. ಕಟುಕನ ಕೈಲಿ ಇದ್ದರೆ ಜೀವ ಹತ್ಯೆಗೆ ಕಾರಣವಾಗುತ್ತದೆ, ಶಸ್ತ್ರಚಿಕಿತ್ಸಾ ತಜ್ಞನ ಕೈಲಿದ್ದರೆ ಜೀವ

ಉಳಿಸಲು ಸಾಧನವಾಗುತ್ತದೆ. ಹಾಗೆ ರಾಜಕೀಯ ಅಧಿಕಾರವೂ ಸ್ವಾರ್ಥಿಯ ಕೈಯಲ್ಲಿದ್ದರೆ ಸಮಾಜಕ್ಕೆ ಅನ್ಯಾಯವಾಗುತ್ತದೆ; ನಿಸ್ವಾರ್ಥಿಯ ಕೈಯಲ್ಲಿದ್ದರೆ ಸಮಾಜಕ್ಕೆ ಉಪಕಾರವಾಗುತ್ತದೆ. ನಾನು ನಿಸ್ವಾರ್ಥ ಸೇವೆ ಮಾಡಿ ಒಬ್ಬ ಆದರ್ಶ ರಾಜಕಾರಣಿ ಹೇಗಿರಲು ಸಾಧ್ಯ ಎಂಬುದನ್ನು ತೋರಿಸಲು ಬಯಸಿದ್ದೇನೆ. ಮುಂದಿನ ಪ್ರಶ್ನೆ,

''ರಾಜಕೀಯ ಕ್ಷೇತ್ರ ಪ್ರವೇಶಿಸಿದರೆ ಧಾರ್ಮಿಕ ಜೀವನ ವಿಧಾನಕ್ಕೆ ಚ್ಯುತಿ ಬರುವುದಿಲ್ಲವೆ ?''

''ಬಸವಣ್ಣನವರು ಒಬ್ಬ ಧರ್ಮಗುರುವಾಗಿಯೂ ಆದರ್ಶ ರಾಜಕಾರಣ ಮುತ್ಸದ್ಧಿಯಾಗಿ ಕರ್ತವ್ಯ ನಿರ್ವಹಿಸಿದರು. ಅವರೇ ನನಗೆ ಆದರ್ಶ, ಈ ರಾಜಕೀಯ ಕ್ಷೇತ್ರ ಪ್ರವೇಶಿಸಲು''.

''ಸರಿ, ನೀವೇನೋ ಉದಾತ್ತ ಉದ್ದೇಶದಿಂದ ಬಂದಿರುವುದಾಗಿ ಹೇಳಿದಿರಿ. ನಿಮ್ಮನ್ನು ಆಯ್ಕೆ ಮಾಡಿದರೇನೋ ಸರಿ ಸೇವೆ ಮಾಡುವಿರಿ. ಒಂದು ವೇಳೆ ಮತ ನೀಡದೆ ತಿರಸ್ಕರಿಸಿದರೆ ಮುಂದೇನು ಮಾಡುವಿರಿ ?'' ಪ್ರತಿನಿಧಿಯ ಪ್ರಶ್ನೆ.

''ನಾನೇನು ವೃತ್ತಿಪರ ರಾಜಕಾರಣಿಯಲ್ಲ. ನನ್ನ ಧಾರ್ಮಿಕ ಕರ್ತವ್ಯ ಇದ್ದೇ ಇವೆ. ಧರ್ಮ ಪ್ರಚಾರ, ಸಾಹಿತ್ಯ ರಚನೆಯಲ್ಲಿ ತಲ್ಲೀನಳಾಗುತ್ತೇನೆ. ಮತದಾರರು ನನ್ನನ್ನು ಸೋಲಿಸಿದರೆ ನನ್ನಲ್ಲಿ ಅರ್ಹತೆ ಇಲ್ಲ ಎಂದು ನಾನು ನಿರಾಶಳಾಗುವುದಿಲ್ಲ; ನನಗೇನು ಮಕ್ಕಳು ಮರಿ ಇಲ್ಲ; ಉಳಿದ ರಾಜಕಾರಣಿಗಳಂತೆ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಪರ್ಯಂತರ ತಿನ್ನುವಂತೆ ಆಸ್ತಿ ಮಾಡಬೇಕೆಂಬ ಆಸೆ ಹೊಂದಿಲ್ಲ. ತ್ಯಾಗಿಯೂ, ನಿಸ್ವಾರ್ಥಿಯೂ ಆದ ನನ್ನಂಥವಳ ಆದರ್ಶವನ್ನು ಅರ್ಥ ಮಾಡಿಕೊಳ್ಳದೆ ಸೋಲಿಸಿದರೆ ಅಂಥ ಮತದಾರರು ಅಪ್ರಬುದ್ಧರು ಎಂದುಕೊಳ್ಳುತ್ತೇನೆ'' ಎಂದೆ.

ಕನ್ನಡ ಪ್ರಭಾದವರು ಹಿಂದಿನ ಯಾವ ವಾಕ್ಯಗಳನ್ನು ಬರೆಯದೆ ಮಾತಾಜಿ ಧಾರವಾಡ ಉತ್ತರ ಲೋಕಸಭಾ ಕ್ಷೇತ್ರದ ಮತದಾರರನ್ನು ಅಪ್ರಬುದ್ಧರು ಎಂದುದಾಗಿ ವಿವಾದ ಎಬ್ಬಿಸಿದರು. ಪತ್ರಿಕೆಗಳವರಿಗೆ ಸಹಜ ಸುದ್ದಿಗಿಂತ ವಿವಾದಗಳಿದ್ದರೆ ಹೆಚ್ಚಿನ ಆಸಕ್ತಿ; ಹೀಗಾಗಿ ಬೇಕೆಂತಲೇ ಏನಾದರೊಂದನ್ನು ವಿವಾದ ರೂಪದಲ್ಲಿ ಸೃಷ್ಟಿಸುತ್ತಿರುತ್ತಾರೆ.

ವಾಸುದೇವ ಕಲಘಟಗಿ ಪತ್ರ : ಕನ್ನಡ ಪ್ರಭಾದ ದಿ. 7-5-2004ರ ಸಂಚಿಕೆಯಲ್ಲಿ ವಾಸುದೇವ ಕಲಘಟಗಿ, ಹುಬ್ಬಳ್ಳಿ ಇವರ ಪತ್ರ ಪ್ರಕಟಗೊಂಡಿದೆ. ಅದನ್ನು ವಿಶ್ಲೇಷಿಸ ಬಯಸುತ್ತೇನೆ.

''ಮಾತೆಯವರಿಗೆ ಯಾವ ಪಕ್ಷದ ಪರ ಗಾಳಿ ಬೀಸ ಹತ್ತಿದೆ. ಯಾವ ಪಕ್ಷ ಜನಪ್ರಿಯವಾದುದು ಎಂದು ಅಳೆದು ಅಂತಹ ಪಾರ್ಟಿಯ ಪರ ಸ್ಪರ್ಧಿಸುವುದನ್ನು ಬಿಟ್ಟು ಮಾತೆಯವರು ಕೇವಲ ಧನಬಲದಿಂದ ಅಧಿಕಾರದ ಚುಕ್ಕಾಣಿ ಹಿಡಿವ ಕನಸು ಕಂಡವರ ಮುಳುಗುವ ದೋಣಿ 'ಕನ್ನಡ ನಾಡು' ಸೇರಿ ಸ್ಪರ್ಧಿಸಿದ್ದು ಪ್ರಬುದ್ಧರ ಲಕ್ಷಣವೆ ?

ಉತ್ತರ : ನಾನು ಒಬ್ಬ ಧ್ಯೇಯವಾದಿ, ಆದರ್ಶವಾದಿ. ಹೇಗಾದರೂ ಅಧಿಕಾರ ಹಿಡಿಯಬೇಕೆಂದು ಆಸೆ ಪಟ್ಟವಳಾಗಿದ್ದರೆ ಯಾವ ಪಕ್ಷದ ಪರ ಗಾಳಿ ಬೀಸುತ್ತಿದೆ ಎಂದು ಲೆಕ್ಕಾಚಾರ ಮಾಡಿ, ಮೊದಲೇ ಹಣವನ್ನು ಸಂಗ್ರಹಿಸಿಟ್ಟುಕೊಂಡು, ಹಣ ಕೊಟ್ಟಾದರೂ ಟಿಕೆಟ್ ಪಡೆದು,

ಹಣ-ಹೆಂಡದ ಹೊಳೆ ಹರಿಸಿ ಗೆಲ್ಲಲು ಶತಾಯಗತಾಯ ಪ್ರಯತ್ನ ಮಾಡುತ್ತಿದ್ದೆ. ಯಾವ ಪಕ್ಷದ ತತ್ತ್ವ-ಸಿದ್ಧಾಂತಗಳಲ್ಲಿ ನನಗೆ ವಿಶ್ವಾಸವಿಲ್ಲವೋ ಅಂಥ ಪಕ್ಷದವರು ಆಹ್ವಾನಿಸಿದರೂ ಹೆಜ್ಜೆ ಇಡುತ್ತಿರಲಿಲ್ಲ. ವೃತ್ತಿಪರ ರಾಜಕಾರಣಿಯ ಸಮಯ ಸಾಧಕತನವನ್ನು ನನ್ನಿಂದ ನಿರೀಕ್ಷಿಸಿದ ವಾಸುದೇವ ಕಲಘಟಗಿಯವರೇ ಸ್ವತಃ ಅಪ್ರಬುದ್ಧ ಮತದಾರ ಎನ್ನಲೇ ಬೇಕಾಗಿದೆ.

ಇವರ ಆರೋಪದಲ್ಲಿ ಕನ್ನಡ ನಾಡು ಪಕ್ಷದ ಸಂಸ್ಥಾಪಕರಾದ ಶ್ರೀ ವಿಜಯ ಸಂಕೇಶ್ವರ ಧನ ಬಲದಿಂದ ಅಧಿಕಾರದ ಚುಕ್ಕಾಣಿ ಹಿಡಿಯಲು ಕನಸು ಕಂಡವರು ಎಂದು ಆರೋಪಿಸಿದ್ದಾರೆ.

''ಧನಬಲದ ಆಧಾರದ ಮೇಲೆ ಅಧಿಕಾರ ಹಿಡಿಯಬಾರದು. ಧ್ಯೇಯಾದರ್ಶಗಳನ್ನು ಜನತೆಯ ಮುಂದಿಟ್ಟು ಮನ ಒಲಿಸಿ, ಹಣ-ಹೆಂಡ-ಸೀರೆ ಹಂಚದೆ ಚುನಾವಣೆ ಎದುರಿಸಬೇಕು. ಶಾಸಕರ ಹುದ್ದೆ ಹಣ ಗಳಿಸುವ ಸಾಧನವಲ್ಲ, ಸೇವಾ ಸಾಧನ.'' ಎಂದು ಪ್ರಾಮಾಣಿಕ ಚಿಂತನೆ ಮಾಡಿದ ಧ್ಯೇಯವಾದಿ ಶ್ರೀ ವಿಜಯ ಸಂಕೇಶ್ವರ. ಅಪ್ರಬುದ್ಧ ಮತದಾರರಿಂದ ಕೂಡಿದ ಈ ದೇಶದಲ್ಲಿ ಅಂಥ ಆದರ್ಶ ಒಂದು ಕನಸು ಎಂದು ಬೇಕಾದರೆ ಇಂದು ಹೇಳಬಲ್ಲೆ. ಆದರೆ ಧನಬಲದ ರಾಜಕಾರಣವನ್ನು ಎದುರಿಸಲೆಂದೇ ಕನ್ನಡ ನಾಡು ಪಕ್ಷವನ್ನು ಹುಟ್ಟು ಹಾಕಿದ ಸಂಕೇಶ್ವರರನ್ನು ಅಧಿಕಾರದಾಹಿ ಎನ್ನುವವರು ಅಪ್ರಬುದ್ಧರೇ ಸರಿ. ಮೊದಲು ಸಾವಿರಾರು ರೂಪಾಯಿಗಳಿಂದ ಸಾಗುತ್ತಿದ್ದ ರಾಜಕಾರಣ ಇಂದು ಲಕ್ಷಕ್ಕೆ, ಕೋಟಿಗೆ ಏರುತ್ತಿರುವಾಗ ಪ್ರಜ್ಞಾವಂತರು, ಆದರ್ಶವಾದಿಗಳು ಈ ಕ್ಷೇತ್ರದಲ್ಲಿ ಕಾಲಿಡಲೇ ಅಂಜುವ ಪರಿಸ್ಥಿತಿ ಉಂಟಾಗಿರುವುದರಿಂದ ಇದನ್ನು ತಪ್ಪಿಸಲೋಸುಗವೇ ಕನ್ನಡ ನಾಡು ಪಕ್ಷವನ್ನು ಶ್ರೀ ಸಂಕೇಶ್ವರರು ಹುಟ್ಟು ಹಾಕಿದ್ದಾರೆ. ಕೆಟ್ಟು ಹೋಗಿರುವ ರಾಜಕೀಯ ವ್ಯವಸ್ಥೆ ಬದಲಾಯಿಸಲು ಒಂದು ಪರ್ಯಾಯ ವ್ಯವಸ್ಥೆ ಬೇಕೇ ಬೇಕು ತಾನೆ?

''ಧರ್ಮದ ಕೆಲಸವನ್ನು ಬದಿಗೊತ್ತಿ ಕ್ಷುಲ್ಲಕ ಅಧಿಕಾರಕ್ಕಾಗಿ'' ಎಂದು ವಾಸುದೇವ ಬರೆದಿದ್ದಾರೆ. ಒಬ್ಬ ಆದರ್ಶ ವ್ಯಕ್ತಿಯ ಚಿಂತನೆ, ಧ್ಯೇಯ ಏನೊಂದನ್ನೂ ಅರ್ಥ ಮಾಡಿಕೊಳ್ಳದೆ ಬರೆದಿರುವ ಈತನದು ಎಂತಹ ಪೂರ್ವಾಗ್ರಹ ಪೀಡಿತ ಮನಸ್ಸು ಎಂಬುದು ಇವರ ಮಾತುಗಳಿಂದಲೇ ಸ್ಪಷ್ಟವಾಗುತ್ತದೆ. ರಾಜಕಾರಣಕ್ಕೆ ಬಂದವರು ತಮ್ಮದೇ ಆದ ಉದ್ಯಮ, ವ್ಯಾಪಾರ, ವಕೀಲಿ ಇತ್ಯಾದಿ ಹೊಂದಿರಬಹುದು. ಲೋಕಸಭೆ, ವಿಧಾನಸಭೆ ಅಧಿವೇಶನದಲ್ಲಿ ಭಾಗವಹಿಸಿ ಇತರೆ ದಿನಗಳಲ್ಲಿ ತನ್ನ ಕಾಯಕ ಮುಂದುವರಿಸಲು ಬರುವುದಿಲ್ಲವೆ? ದಿನ ನಿತ್ಯ ಯಾವ ವೃತ್ತಿಯ ಧರ್ಮವಂತನೇ ಇರಲಿ ತನ್ನ ಪೂಜೆ-ನೇಮ, ಜಪ-ತಪ ಮಾಡಿಕೊಳ್ಳಲು ಬರದೆ? ಈ ಪ್ರಬುದ್ಧ ಮತದಾರನ ದೃಷ್ಟಿಯಲ್ಲಿ ಧರ್ಮ ಮತ್ತು ರಾಜಕಾರಣ ಪರಸ್ಪರ ವಿರೋಧಾತ್ಮಕ. ಇಂಥ ಚಿಂತಕರಿಂದಲೇ ಇವತ್ತು ರಾಜಕಾರಣ ದಿನದಿನಕ್ಕೂ ಕೊಳಕಾಗುತ್ತಿರುವುದು.

''ವೀರಶೈವರ ವೋಟುಗಳೆಲ್ಲ ನನ್ನ ಉಡಿಗೆ ಎಂಬ ತಪ್ಪು ಲೆಕ್ಕಾಚಾರದಿಂದ ಜಾತೀಯತೆ ಎಂಬ ಸ್ವಾರ್ಥದಿಂದ ಸ್ಪರ್ಧೆಗಿಳಿದು'' ಎಂದು ವಾಸುದೇವ ಬರೆದಿದ್ದಾರೆ.

ವೀರಶೈವರ ವೋಟು ನನ್ನ ಉಡಿಗೆ ಎಂಬ ಲೆಕ್ಕಾಚಾರ ಎಂದೂ ನಮ್ಮದಲ್ಲ. ಹಿಂದುಗಳನ್ನು ಭಯಪಡಿಸಿ, ಅಲ್ಪಸಂಖ್ಯಾತರಿಂದ ಅಪಾಯ ಎಂದು ಹುಯಿಲೆಬ್ಬಿಸಿ ಓಟು ಸೆಳೆಯುವ ತಂತ್ರ

ಭಾರತೀಯ ಜನತಾ ಪಕ್ಷದ್ದಾದರೆ, ಬಿಜೆಪಿ ಕೋಮುವಾದಿ ನಾನೇ ದಲಿತರು, ಹಿಂದುಳಿದವರು ಮತ್ತು ಅಲ್ಪಸಂಖ್ಯಾತರ ಹಿತಚಿಂತಕ ಎಂದು ಮತಸೆಳೆಯುವ ತಂತ್ರ ಕಾಂಗ್ರೆಸ್ಸಿನದು. ನಾವಾಗಲೀ, ಕನ್ನಡ ನಾಡು ಪಕ್ಷವಾಗಲಿ ಈ ರೀತಿ ಎಂದೂ ಮತಯಾಚಿಸಲಿಲ್ಲ. ''ಮತದಾರರೇ, ಪ್ರಜ್ಞಾವಂತರಾಗಿರಿ. ಧನಾಧಾರಿತ ರಾಜಕಾರಣಕ್ಕೆ ಮನಸೋಲಬೇಡಿರಿ. ಸೇವೆಗೆ ಸನ್ನದ್ಧರಾದ ಅರ್ಹರನ್ನು ಆಯ್ಕೆ ಮಾಡಿರಿ. ನಮ್ಮ ರಾಜಕೀಯ ವ್ಯವಸ್ಥೆ ಬದಲಾವಣೆಗೊಳ್ಳಬೇಕು'' ಎಂದೇ ಕನ್ನಡ ನಾಡು ಪಕ್ಷದ ಅಭ್ಯರ್ಥಿಗಳು ಮತಯಾಚನೆ ಮಾಡಿದುದು. **ಲಿಂಗಾಯತರಲ್ಲಿ ಸಮಾಜಾಭಿಮಾನವಾಗಲಿ, ಒಗ್ಗಟ್ಟಾಗಲಿ ಇಲ್ಲವೇ ಇಲ್ಲ ಎಂಬುದು ಯಾರಿಗೆ ಗೊತ್ತಿಲ್ಲ? ಮುಸಲೀಮರಲ್ಲಿ ಹೇಗೆ ಒಗ್ಗಟ್ಟಿದ್ದು ಅವರ ಓಟುಗಳು ಅಖಂಡವಾಗಿ ಅವರ ಜನರು ನಿಂತಾಗ ಅವರಿಗೆ, ಇಲ್ಲವೇ ಅವರ ಮಸೀದಿಯಲ್ಲಿ ಇಮಾಮರು ಯಾರಿಗೆ ಹೇಳುತ್ತಾರೋ ಅವರಿಗೆ ಮತಗಳು ಬೀಳುವಂತೆ ಲಿಂಗಾಯತರಲ್ಲಿ ಬೀಳವು. ಇದು ಹರಿದು ಚಿಂದಿಯಾಗಿರುವ ಸಮಾಜ. ಮುಸಲೀಮರಂತೆ ಧರ್ಮಾಭಿಮಾನದಿಂದ ಒಳಜಾತಿಯ ಭೇದ ಮರೆತು ಮತನೀಡುವ ಮತ್ತೊಂದು ಸಮಾಜವೆಂದರೆ ಬ್ರಾಹ್ಮಣ ಬಂಧುಗಳು. ಅಂದಾಗ ನೂರೆಂಟು ಒಡಕು ಹೊಂದಿ ಕಚ್ಚಾಡುವ ಲಿಂಗಾಯತರ ವೋಟನ್ನು ನಚ್ಚಿಕೊಂಡು ಚುನಾವಣಾ ಕಣಕ್ಕೆ ಇಳಿಯುವ ಹೆಡ್ಡತನವನ್ನು ಕನ್ನಡ ನಾಡು ಪಾರ್ಟಿಯ ಅಭ್ಯರ್ಥಿಗಳು ಮಾಡಿಲ್ಲ ಮತ್ತು ಯಾವ ಪಕ್ಷದವರೂ ಮಾಡಲಾರರು.**

ಮತದಾರರು ಅಪ್ರಬುದ್ಧರಲ್ಲವೆ ?

ಶ್ರೀ ವಿಜಯ ಸಂಕೇಶ್ವರರು ಒಬ್ಬ ಯಶಸ್ವಿ ಉದ್ಯಮಿ; ಕಾಯಕ ಯೋಗಿ. ಸಂಸತ್ ಸದಸ್ಯರಾಗಿ ಇದ್ದ ಅವಧಿಯಲ್ಲಿ ತಮಗೆ ದೊರೆತ ಅನುದಾನದ ಹಣವನ್ನು ಯಾವುದೇ ಕಮೀಷನ್ ಪಡೆಯದೆ, ಅಪವ್ಯಯ ಮಾಡದೆ, ಸ್ವಂತಕ್ಕಾಗಿ ಬಳಸಿಕೊಳ್ಳದೆ ಅತ್ಯಂತ ಪ್ರಾಮಾಣಿಕವಾಗಿ ವಿನಿಯೋಗಿಸಿದವರು. ಅವರ ಸೇವಾ ಕಾರ್ಯನೋಡಿ ಜನರು ಮತ ಹಾಕಿ ಗೆಲ್ಲಿಸುತ್ತಾರೆ ಎಂದು ವಿಶ್ವಾಸವಿಟ್ಟಿದ್ದರು; ಅವರು ಸೇವೆ ಮಾಡಿ ಕೀರ್ತಿ ಪಡೆದಿದ್ದ ಧಾರವಾಡ ಉತ್ತರ ಲೋಕಸಭಾ ಕ್ಷೇತ್ರಕ್ಕೆ ನನ್ನಂತಹ ನಿಸ್ವಾರ್ಥಿ, ಸಮಾಜ ಸೇವಾ ಕಳಕಳಿಯುಳ್ಳ ತ್ಯಾಗಿಯನ್ನು ಪ್ರಜ್ಞಾವಂತ ಮತದಾರರು ಆಯ್ಕೆ ಮಾಡುತ್ತಾರೆಂದು ನಂಬಿದ್ದರು. ಆದರೆ ಮತದಾರರು ಎಷ್ಟು ಪ್ರಬುದ್ಧರು ಎಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಕಾಂಗ್ರೆಸ್ಸಿನವರು ಹಣವನ್ನು-ಹೆಂಡವನ್ನು ಹೊಳೆಯಂತೆ ಹರಿಸಿದರು, ಕೆಲವು ಸ್ಥಳಗಳಲ್ಲಿ ತೋಳ್ ಬಲವನ್ನು ತೋರಿಸಿದರು. ಬಿ.ಜೆ.ಪಿಯವರು ತಾವೇನೂ ಕಡಿಮೆ ಇಲ್ಲ ಎಂಬಂತೆ ಹಣ-ಹೆಂಡದ ಹೊಳೆ ಹರಿಸಿ ಕೆಲವು ಸ್ಥಳಗಳಲ್ಲಿ ತೋಳ್ ಬಲವನ್ನು ತೋರಿಸಿದ್ದಾರೆ. ಮತದಾರರು ಅವುಗಳ ಸದುಪಯೋಗ ಮಾಡಿಕೊಂಡು ತಮ್ಮ ಪ್ರಬುದ್ಧತೆ ಮೆರೆದಿದ್ದಾರೆ. ಸಂಸತ್ ಸದಸ್ಯರಾಗಿ ಅನುದಾನದ 15 ಕೋಟಿ, ಅದರ ಬಡ್ಡಿ 84 ಲಕ್ಷ ಮತಕ್ಷೇತ್ರದ ಅಭಿವೃದ್ಧಿಗೆ ವಿನಿಯೋಗಿಸುವ ಬದಲು ಹಣವನ್ನು ಚೆನ್ನಾಗಿ ಕೂಡಿಟ್ಟು ಚುನಾವಣೆಯ ಸಮಯದಲ್ಲಿ ಹಣ-ಹೆಂಡ ಹಂಚಿದ್ದರೆ ಗೆಲ್ಲಿಸುತ್ತಿದ್ದೆವಲ್ಲಾ; ಎಂಬುದನ್ನು ಸಾಬೀತು ಮಾಡಿರುವ, ರಾಜ್ಯ-ರಾಷ್ಟ್ರದ ಎರಡೂ ಕಡೆ ಅತಂತ್ರ ಸರ್ಕಾರಗಳನ್ನು ರಚಿಸಲು ಮತನೀಡಿರುವ ಭಾರತೀಯ ಮತದಾರರು ಅಪ್ರಬುದ್ಧರು ಎಂಬ ಬಗ್ಗೆ ಸಂದೇಹ ಉಳಿಯಲು ಸಾಧ್ಯವೇ?

ಚುನಾವಣೆ - ಒಂದು ಅನುಭವ

- ಮಾತಾಜಿ

ಚುನಾವಣೆ ಪ್ರಜಾಪ್ರಭುತ್ವದ ಒಂದು ಮಹತ್ವದ ಪ್ರಕ್ರಿಯೆ. ತನ್ನನ್ನು ಆಳುವ (ನಮ್ಮ ದೇಶದಲ್ಲಿ ಹಾಳು ಮಾಡುವ) ನೇತಾರನನ್ನು ಆಯ್ಕೆ ಮಾಡಲು ಪ್ರಜೆಗೆ ಸಂವಿಧಾನ ನೀಡುವ ಒಂದು ಮಹತ್ವ ಪೂರ್ಣ ಅವಕಾಶ. ನಾನೊಮ್ಮೆ ಓದಿದ್ದೆ ಆದರ್ಶಕ್ಕೂ ವಾಸ್ತವಕ್ಕೂ ಇರುವ ವ್ಯತ್ಯಾಸ ಅಗಾಧ ಎಂದು. ಜಾಹೀರಾತುಗಳಲ್ಲಿ ಕೊಡುವ ಚಿತ್ರಕ್ಕೂ ನಾವು ಬೆಳೆಯಬಹುದಾದ ಉತ್ಪನ್ನಕ್ಕೂ ಇರುವ ವ್ಯತ್ಯಾಸದಂತೆ ಎಂದು ಆ ಚಿಂತಕ ಹೇಳಿದ್ದ. ಬೀಜಗಳನ್ನು ಇಟ್ಟ ಪ್ಲಾಸ್ಟಿಕ್ ಕವರ್ ಮೇಲೆ ಬಹಳ ಸುಂದರವಾದ, ರಸಭರಿತವಾದ ಹಣ್ಣು ಅಥವಾ ಹೂವು ಅಥವಾ ತರಕಾರಿಗಳ ಚಿತ್ರವಿರುತ್ತದೆ. ಇದು ಆದರ್ಶ. ಅಷ್ಟೇ ಸುಂದರ, ರಸಭರಿತ ಹಣ್ಣು ಅಥವಾ ತರಕಾರಿಯನ್ನು ಬೆಳೆಯುವುದು ಸಾಧ್ಯವೆ ? ಇದು ವಾಸ್ತವ. ವಿವಿಧ ಸೋಪು, ಕ್ರೀಮ್‌ಗಳ ಜಾಹಿರಾತಿನ ಮೇಲೆ ಅತ್ಯಂತ ಸುಂದರವಾದ ನಟಿಯರ ಮುಖಗಳು ಕಾಣಿಸಿಕೊಳ್ಳುತ್ತವೆ. ಆ ಸೋಪು ಹಚ್ಚಿದವರೆಲ್ಲ ಆಕೆಯಂತೆ ಆಗುವರೆ? ಹೀಗೆ ಆದರ್ಶಕ್ಕೂ ವಾಸ್ತವಕ್ಕೂ ಬಹಳ ಅಂತರವಿದೆ.

ಪ್ರಜಾಪ್ರಭುತ್ವದ ವ್ಯಾಖ್ಯೆಯನ್ನು ಅಮೆರಿಕಾದ ಮಾಜಿ ರಾಷ್ಟ್ರಾಧ್ಯಕ್ಷ ಅಬ್ರಹಾಂ ಲಿಂಕನ್ ಅತ್ಯಂತ ಸಮರ್ಪಕವಾಗಿ ನೀಡಿದ್ದಾರೆ. Democracy is the rule, By the people, For the people and Of the people. ಜನರಿಂದ, ಜನರಿಗಾಗಿ ಮತ್ತು ಜನರೇ ಮಾಡುವ ಆಳ್ವಿಕೆಯೇ ಪ್ರಜಾಪ್ರಭುತ್ವ. ಉಳಿದ ದೇಶಗಳ ಸುದ್ದಿ ಏನೇ ಇರಲಿ. ನಮ್ಮ ದೇಶದವರು ಸಾಮಾನ್ಯರಲ್ಲ. ಈ ಪ್ರಜಾಪ್ರಭುತ್ವಕ್ಕೆ ವಿಶೇಷ ವ್ಯಾಖ್ಯಾನವನ್ನು ನೀಡಿದ್ದಾರೆ?! ಆ ವ್ಯಾಖ್ಯಾನವೆಂದರೆ,Buy the people, Far the people, Off the people ಪ್ರಜಾಪ್ರಭುತ್ವವೆಂದರೆ ಜನರಿಂದ ಆಗುವ ಆಳ್ವಿಕೆ ಎಂಬುದಕ್ಕೆ ಒಂದೇ ಅಕ್ಷರ U ಸೇರಿಸಿ, ಜನರನ್ನು ಕೊಳ್ಳುವಿಕೆ ಎಂದು ಮಾಡಿದ್ದರೆ, for ದಲ್ಲಿ O ಬದಲು a ಸೇರಿಸಿ ಜನರಿಂದ ದೂರವಾದ ಎಂದು ಮಾಡಿದ್ದಾರೆ, of ಜನರ ಎನ್ನುವುದರ ಬದಲು off ಜನಕ್ಕೆ(ಹಿತಕ್ಕೆ) ಸಂಬಂಧವೇ ಇಲ್ಲದ ಎಂದು ಭಾವಿಸಿರುವಂತೆ ತೋರುತ್ತದೆ.

ಚುನಾವಣೆ ಒಂದು ಚಕ್ರವ್ಯೂಹವೇ ಸರಿ. ಈ ಬಾರಿ ಇದ್ದಕ್ಕೆ ಇದ್ದಂತೆಯೇ ಅಂಥದೊಂದು ಪ್ರಸಂಗ ಎದುರಿಸುವ ಸಂದರ್ಭ ಇದಿರಾಯಿತು. ಇಂದು ದೇಶದ ಎಲ್ಲ ಪ್ರಜಾವಂತರಲ್ಲೂ ಒಂದು ಆತಂಕ ತುಡಿಯುತ್ತಿದೆ. ಆಸುರೀ ಪ್ರವೃತ್ತಿ ವಿಪರೀತ ಬೆಳೆಯುತ್ತಿರುವುದಕ್ಕೆ ಇದಕ್ಕೆ ಸಿಕ್ಕಿರುವ ರಾಜಕೀಯ ಬೆಂಬಲವೇ ಕಾರಣ ಎಂದು ಅನೇಕ ಜನರು ಚಿಂತಿಸುತ್ತಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರು, ''ಇಂಥ ಸ್ವಾತಂತ್ರ್ಯ ಪಡೆಯಲೆಂದು ನಾವು ಹೋರಾಟ ಮಾಡಿದ್ದೇವೆಯೆ ?'' ಎಂದು ಕಳವಳ ಪಡುತ್ತಿದ್ದಾರೆ. ಧನ ಮತ್ತು ತೋಳ್ಬಲ ಆಧಾರಿತ ರಾಜಕಾರಣದಿಂದ ರಾಜ್ಯ-ರಾಷ್ಟ್ರಗಳು ಜಾರಿಕೆಯ ಹಾದಿಯಲ್ಲಿ ಸಾಗಿವೆ ಎಂದು ಉನ್ನತವಾದ ಒಂದು ಉದ್ದೇಶದಿಂದ ವಿ.ಆರ್.ಎಲ್ ಸಂಸ್ಥೆಯ ಒಡೆಯರಾದ ವಿಜಯ ಸಂಕೇಶ್ವರ್ ಅವರು ಕನ್ನಡ ನಾಡು ಪಾರ್ಟಿ ಎಂಬ ರಾಜಕೀಯ ಪಕ್ಷವನ್ನು ಸಂಸ್ಥಾಪಿಸಿದರು. ರಾಜ್ಯ ಹಿತದ ದೃಷ್ಟಿಯಿಂದ ಪ್ರಾದೇಶಿಕ ಪಕ್ಷಗಳು ಅಗತ್ಯ ಎಂಬ

ಮನೋಭಾವದಿಂದ ಈ ಪಾರ್ಟಿಯನ್ನು ಹುಟ್ಟುಹಾಕಿದರು. ರಾಷ್ಟ್ರೀಯ ಪಕ್ಷಗಳಿಂದ ಕರ್ನಾಟಕಕ್ಕೆ ದೊರೆಯಬೇಕಾದ ಸವಲತ್ತು ದೊರೆತಿಲ್ಲವೆಂದು, ಇಲ್ಲಿಯ ನೆಲಜಲ, ಪ್ರಕೃತಿ ಸಂಪನ್ಮೂಲಗಳ ಸಂರಕ್ಷಣೆಯ ದೃಷ್ಟಿಯಿಂದ ಪ್ರಾದೇಶಿಕ ಪಕ್ಷ ಅಗತ್ಯವೆಂಬುದು ಶ್ರೀ ವಿಜಯ ಸಂಕೇಶ್ವರರ ಆಲೋಚನೆಯಾಗಿತ್ತು. ಈಗಾಗಲೇ ಆ ಪ್ರಯೋಗದಲ್ಲಿ ಯಶಸ್ವಿಯಾಗಿರುವ ಡಿ.ಎಂ.ಕೆ, ಶಿವಸೇನೆ, ತೆಲುಗು ದೇಶಂ ಮುಂತಾದವು ನಮ್ಮ ಕಣ್ಣ ಮುಂದೆ ಇವೆಯಷ್ಟೆ.

ಶ್ರೀ ವಿಜಯಸಂಕೇಶ್ವರರು ಸಂಸ್ಥಾಪಿಸಿದ ಕನ್ನಡ ನಾಡು ಪಕ್ಷದ ಪ್ರಣಾಳಿಕೆ, ಉದಾತ್ತ ಉದ್ದೇಶ ನಮ್ಮನ್ನು ಆಕರ್ಷಿಸಿದವು. ಕೂಡಲ ಸಂಗಮದಲ್ಲಿ 17ನೆಯ ಶರಣ ಮೇಳದ ರಾಷ್ಟ್ರೀಯ ಬಸವ ದಳದ ಅಧಿವೇಶನದ ಉದ್ಘಾಟನೆ ನೆರವೇರಿಸಿ ಕನ್ನಡ ನಾಡು ಸ್ಥಾಪನೆಯ ಉದ್ದೇಶ ಕುರಿತು ಶ್ರೀ ಸಂಕೇಶ್ವರರು ಮತ್ತು ಶ್ರೀ ಅಡಿವೆಪ್ಪ ಮಾಸೂರು ಅವರು ಸಭೆಯ ಮುಂದಿಟ್ಟ ವಿಚಾರಧಾರೆ ಶರಣರ ಬಳಗಕ್ಕೆ ಸಂತೋಷವನ್ನು ಉಂಟು ಮಾಡಿತು. ಫೆಬ್ರವರಿ 15ರಂದು ಮುಖ್ಯ ರಾಷ್ಟ್ರೀಯ ಬಸವ ದಳಗಳವರು ಸಭೆ ಸೇರಿ, ಚುನಾವಣೆಯಲ್ಲಿ ಕನ್ನಡ ನಾಡು ಪಕ್ಷಕ್ಕೆ ನೈತಿಕ ಬೆಂಬಲ ನೀಡಬೇಕೆಂಬ ನಿರ್ಣಯ ಕೈಗೊಂಡರು.

ಆ ನಂತರ ಒಂದು ದಿವಸ ಕನ್ನಡ ನಾಡು ಪಕ್ಷದ ಮುಖಂಡರಿಂದ ದೂರವಾಣಿ ಕರೆ ಬಂದಿತು, ''ಧಾರವಾಢ ಉತ್ತರ ಲೋಕಸಭಾ ಕ್ಷೇತ್ರದಿಂದ ನೀವು ಏಕೆ ಸ್ಪರ್ಧಿಸಬಾರದು ?'' ಎಂದು. ಇದು ಅತ್ಯಂತ ಅನಿರೀಕ್ಷಿತ ವಿಚಾರವಾಗಿತ್ತು. ನಾವು ಈ ಬಗ್ಗೆ ಎಷ್ಟೂ ಆಲೋಚಿಸಿರಲಿಲ್ಲ. ಸಕ್ರಿಯ ರಾಜಕಾರಣದಲ್ಲಿ ಇಳಿಯುವ ಆಸೆ ಇರಲಿಲ್ಲ ಮತ್ತು ಚುನಾವಣೆಯನ್ನು ಎದುರಿಸಲು ಸಂಪನ್ಮೂಲ ನಮ್ಮಲ್ಲಿರಲಿಲ್ಲ. ಶ್ರೀ ಸಂಕೇಶ್ವರ ಅವರು ತಿಳಿಸಿದರು, ''ಧಾರವಾಡ ಉತ್ತರ ಲೋಕಸಭಾ ಕ್ಷೇತ್ರದಿಂದ ನಾನು 3 ಬಾರಿ ಆಯ್ಕೆಯಾಗಿದ್ದೇನೆ, ಮಾತ್ರವಲ್ಲ ಇದರ ಬೆಳವಣಿಗೆಗೆ ಪ್ರಾಮಾಣಿಕವಾಗಿ ದುಡಿದಿದ್ದೇನೆ. ಎರಡನೆಯದಾಗಿ, ಈ ಮತಕ್ಷೇತ್ರದಲ್ಲಿ 8 ಜನರು ವಿಧಾನ ಸಭಾ ಅಭ್ಯರ್ಥಿಗಳಾಗಿರುತ್ತಾರೆ. ಎರಡೂ ಚುನಾವಣೆ ಒಟ್ಟಿಗೆ ಬಂದಿರುವುದರಿಂದ ಅವರುಗಳು ತಮ್ಮ ಪ್ರಚಾರದ ಜೊತೆಗೆ ನಿಮ್ಮ ಲೋಕಸಭಾ ಪ್ರಚಾರವನ್ನು ಮಾಡುತ್ತಾರೆ. ಹೀಗಾಗಿ ನಿಮಗೆ ಹೆಚ್ಚಿನ ಖರ್ಚು ಬರದು. ಗಾಡಿಗಳ ಖರ್ಚು, ನಿಮ್ಮ ಕಾರ್ಯಕರ್ತರ ವಸತಿ-ಊಟದ ಜವಾಬ್ದಾರಿ ವಹಿಸಿಕೊಂಡರಾಯಿತು''.

''ನನಗೆ ಮೊದಲಿನಿಂದಲೂ ದೇಶದ ಸೇವೆ ಮಾಡಬೇಕು. ಜನಸಾಮಾನ್ಯರ ಹಿತಕ್ಕಾಗಿ ದುಡಿಯಬೇಕು.'' ಎಂಬ ಹಂಬಲ ಇತ್ತು. ಈ ಅವಕಾಶ ಒದಗಿದಾಗ ಸಂತೋಷವೆನಿಸಿತು. ''ಉಳಿದ ರಾಜಕಾರಣಿಗಳು ತಮ್ಮ ಸ್ವಂತಕ್ಕಾಗಿ, ಸ್ವಾರ್ಥಕ್ಕಾಗಿ ಹಣ ಮಾಡಿಕೊಳ್ಳಲಿಕ್ಕಾಗಿ ರಾಜಕಾರಣ ಮಾಡುತ್ತಾರೆ. ನಾನು ಅತ್ಯಂತ ಪ್ರಾಮಾಣಿಕವಾಗಿ ಆದರ್ಶ ರಾಜಕಾರಣಿಯಾಗಿ ದುಡಿಯುವ ಅವಕಾಶ ಸಿಕ್ಕರೆ ನೋಡೋಣ'' ಎಂದು ಆಲೋಚಿಸಿದೆ. ನಮ್ಮ ಸಂಸ್ಥೆಯ ಜಂಗಮ ಮೂರ್ತಿಗಳು, ಶರಣ ಬಂಧುಗಳು ಎಲ್ಲರೂ ಪ್ರೋತ್ಸಾಹಿಸಿದರು. ಕೆಲವರು, ''ಒಂದು ವೇಳೆ ಸೋತರೆ ಅಪಮಾನವಾಗುತ್ತದೆ. ನೀವು ಮನಸ್ಸಿಗೆ ಹಚ್ಚಿಕೊಳ್ಳಬಾರದು'' ಎಂದರು.

''ನೋಡ್ರಿ, ಅವಕಾಶ ಯಾವಾಗಲೋ ಒಮ್ಮೆ ಬರುತ್ತದೆ. ನಾವಂತೂ ಬಯಸಿರಲಿಲ್ಲ.

ಪ್ರಯತ್ನವನ್ನೇ ಮಾಡದೆ ಫಲ ಪಡೆಯುವುದೆಂತು. ಸೋತರೆ ಅವಮಾನ ಎಂದು ನಾನೇಕೆ ಮನಸ್ಸಿಗೆ ಹಚ್ಚಿಕೊಳ್ಳಲಿ. ನಾನೇನು ಅಷ್ಟು ಅಪಕ್ವ ವ್ಯಕ್ತಿಯಲ್ಲ. ಸೋತರೆ ಅವಮಾನವೇಕೆ ? ಅದೇನು ಕಳ್ಳತನವಲ್ಲ, ಕೊಲೆಯಲ್ಲ, ಸುಲಿಗೆಯಲ್ಲ. ಆಟಗಾರರು ಆಟದ ಮೈದಾನಕ್ಕೆ ಇಳಿಯುತ್ತಾರೆ. ಎಲ್ಲರೂ ಗೆಲ್ಲುವುದಿಲ್ಲ. ಚುನಾವಣೆಯೂ ಒಂದು ಆಟ ಎಂದೇ ಭಾವಿಸಬೇಕು''. ನಾನು ಫೋನ್ ಮೂಲಕ ಒಪ್ಪಿಗೆ ನೀಡಿದೆ. ವಿಜಯ ಕರ್ನಾಟಕದಲ್ಲಿ ನಿಯೋಜಿತ ಅಭ್ಯರ್ಥಿ ಎಂದು ಹೆಸರು ಘೋಷಿತವಾಯಿತು.

ನನ್ನ ಹೆಸರು ಪತ್ರಿಕೆಯಲ್ಲಿ ಪ್ರಕಟವಾಗುತ್ತಲೇ ಒಂದು ರೀತಿಯ ವಿದ್ಯುತ್ ಸಂಚಾರ ಇನ್ನಿತರ ಪಕ್ಷಗಳಲ್ಲಿ ಆದಂತಾಯಿತು. ನನ್ನ ಎದುರು ಯಾರನ್ನು ನಿಲ್ಲಿಸಬೇಕೆಂದು ಕಾಂಗ್ರೆಸ್ ಮತ್ತು ಬಿ.ಜೆ.ಪಿ. ಯವರು ತಲೆ ಕೆಡಿಸಿಕೊಳ್ಳತೊಡಗಿದರು. ಮಾತಾಜಿಯವರ ವಿರುದ್ಧ ನಿಲ್ಲಲು ನಾನು ಒಲ್ಲೆ ಎಂದು ಎಷ್ಟೋ ಜನ ಹಿಂಜರಿದರು. ಚಂದ್ರಕಾಂತ ಬೆಲ್ಲದ್, ಬಿ.ಎಸ್.ಪಾಟೀಲ್ ಸಹ ಹಿಂದೇಟು ಹಾಕಿದರು ಎಂದು ಪತ್ರಿಕೆಗಳವರೇ ಬರೆದರು.

ಎರಡೂ ಪಕ್ಷಗಳವರು ಹಣವನ್ನು ನೀರಿನಂತೆ (ಈಗ ನೀರು ಹಣ ಕೊಟ್ಟರೂ ಸಿಗುತ್ತಿಲ್ಲ ಕೆಲವು ಸ್ಥಳಗಳಲ್ಲಿ) ಹರಿಸತೊಡಗಿದರು. ಬಿ.ಎಸ್.ಪಾಟೀಲರು, ನಿವೃತ್ತ ಕಾರ್ಯದರ್ಶಿಯಾದ್ದರಿಂದ 500 ಕೋಟಿ ರೂಪಾಯಿಗಳ ಆಸ್ತಿ ಮಾಡಿಕೊಂಡಿರುವುದಾಗಿಯೂ, 21 ಕೋಟಿ ರೂಗಳನ್ನು ಚುನಾವಣೆಗೆ ರೆಡಿ ಇಟ್ಟುಕೊಂಡಿರುವುದಾಗಿಯೂ, ಒಬ್ಬ ಸಾಮಾನ್ಯ ಕಾರ್ಯಕರ್ತನಿಗೆ ದಿನಕ್ಕೆ ಒಂದು ಸಾವಿರ ರೂಪಾಯಿ ಕೂಲಿ ಕೊಡಲು ಸಿದ್ಧವಿರುವುದಾಗಿ ಸುದ್ದಿ ಹಬ್ಬಿ ನಮಗೆ ಆಗಲೇ ನಡುಕ ಉಂಟಾಗಿತ್ತು. ಬಿ.ಜೆ.ಪಿ. ಯವರು ಕೇಂದ್ರದಲ್ಲಿ ಅಧಿಕಾರದ ಗದ್ದುಗೆ ಹಿಡಿದುದರಿಂದ ಸಾಕಷ್ಟು ಪಾರ್ಟಿ ಫಂಡ್ ಮಾಡಿಕೊಂಡದ್ದರಿಂದ ಉದಾರವಾಗಿ ಖರ್ಚು ಮಾಡಲು ಸಮರ್ಥರು ಎಂಬುದೇ ಜನರ ಅಭಿಪ್ರಾಯವಾಗಿತ್ತು. ನಮ್ಮ ಪಕ್ಷವೂ ಎಳೆಯದು, ನಮ್ಮ ಜೋಳಿಗೆ ಖಾಲಿ. ಚಿತ್ರದುರ್ಗ ಬೃಹನ್ಮಠದ ಆಡಳಿತಾಧಿಕಾರಿ ಎಸ್.ಕೆ.ಬಿ. ರಾಜನ್ ಅವರಂತೆ ಚುನಾವಣೆಗಾಗಿ ಮಾರಾಟ ಮಾಡಲು ಹೋಟೆಲ್ ಮತ್ತು ಜಮೀನು ಮುಂತಾದ ಆಸ್ತಿಯೂ ಇರಲಿಲ್ಲ. ಜೊತೆಗೆ ಧರ್ಮಪೀಠದ ಆಸ್ತಿಯನ್ನು ಕಳೆಯುವ ಮನೋಭಾವದವರೂ ನಾವಲ್ಲ. ಹಣವನ್ನಂತೂ ಖರ್ಚು ಮಾಡಲು ಅಸಮರ್ಥರು, ಆದ್ದರಿಂದ ಪ್ರಚಾರವನ್ನು ಚೆನ್ನಾಗಿ ಮಾಡೋಣ ಎಂಬ ನಿರ್ಧಾರ ತಳೆದೆವು. ನಮ್ಮ ಸಂಸ್ಥೆಯ ಪ್ರಚಾರಕರು ತಮ್ಮ ತಮ್ಮ ಪ್ರಚಾರ ವ್ಯವಸ್ಥೆಯೊಡನೆ ಬಂದು ಮತಕ್ಷೇತ್ರದ ವಿವಿಧ ಭಾಗಗಳಲ್ಲಿ ಸಂಚರಿಸತೊಡಗಿದರು. ವಿವಿಧ ರಾಷ್ಟ್ರೀಯ ಬಸವ ದಳಗಳ ನೂರಾರು ಶರಣ-ಶರಣೆಯರು ತಮ್ಮ ಬಸ್‌ಚಾರ್ಜ್ ಖರ್ಚು ಮಾಡಿಕೊಂಡು ಬಂದರು. ಇವರ ನಿಷ್ಠೆ ನೋಡಿ ಎಲ್ಲ ಪಕ್ಷಗಳವರೂ ಆಶ್ಚರ್ಯಪಟ್ಟರು. ಧಾರವಾಡ ಆಶ್ರಮದಲ್ಲಿ ನೆಲೆಸಿ ಸುಪ್ರಭಾತದಲ್ಲಿ ಎದ್ದು ಸ್ನಾನ ಪೂಜೆ ಪೂರೈಸಿ ಉಪಾಹಾರ ಮಾಡಿ, ಮಧ್ಯಾಹ್ನದ ಊಟವನ್ನೂ ಕಟ್ಟಿ ಜೊತೆಗೆ ತೆಗೆದುಕೊಂಡು ಹೋಗುತ್ತಿದ್ದರು. ರಾತ್ರಿ ಬರುತ್ತಿದ್ದರು. ಬಿಡುವಿಲ್ಲದೆ ಶ್ರಮಿಸಿದರು. ಮನೆ ಮನೆಗೆ ಕರಪತ್ರ ತಲ್ಪಿಸುವ ಯೋಜನೆ ಹಾಕಿಕೊಂಡೆವು. ನನಗೆ ಮಾತ್ರ ನಮ್ಮ ಮತಕ್ಷೇತ್ರದಲ್ಲಿ ಸಂಚರಿಸಲು ಸಾಕಷ್ಟು ಸಮಯ ಸಿಗಲಿಲ್ಲ. ಬೇರೆಬೇರೆ ಸ್ಥಳಗಳಿಗೆ, ಜಿಲ್ಲೆಗಳಿಗೆ ಪಾರ್ಟಿಯ ಪ್ರಚಾರಕ್ಕೆ ಹೋಗುವ ಹೊಣೆಗಾರಿಕೆ ಒದಗಿ ಬಂದಿತ್ತು.

ನಾವು ಸ್ಪರ್ಧಿಸಿರುವ ಬಗ್ಗೆ ಅಭಿಮಾನದ ಮಾತು ಕೇಳಿ ಬಂದವು. ''ಅಮ್ಮಾವರು ನಿಂತಿದ್ದು ಒಳ್ಳೆಯದಾಯಿತು.'' ಎಂದು ಗ್ರಾಮಾಂತರದ ಜನರೂ ಮಾತನಾಡತೊಡಗಿದರು. ಟಿ.ವಿ. ಯವರು ಸಹ ಸಮೀಕ್ಷೆ ಮಾಡಿ ಒಳ್ಳೆಯ ಅಭಿಪ್ರಾಯ ನೀಡಿದರು. ಚುನಾವಣೆ ಹತ್ತಿರ ಬಂದಂತೆಲ್ಲ ಕೆಲವೊಂದು ಕಹಿ ಅನುಭವ ನಮ್ಮ ಕಾರ್ಯಕರ್ತರಿಗೆ ಆಗತೊಡಗಿದವು. ಹೆಂಡದ ಹೊಳೆ ಹರಿಯ ತೊಡಗಿ ಮಧ್ಯಾಹ್ನ 12 ಗಂಟೆಗೆಲ್ಲ ರಸ್ತೆಯಲ್ಲಿ ಕುಡಿದು ತೂರಾಡುವ ಯುವಕರು ಮತ್ತು ಗಂಡಸರು. ಪ್ರಚಾರಕ್ಕೆ ಹೋದವರನ್ನು, ''ನೀವೆಷ್ಟು ಹಣ ಕೊಡ್ತೀರಿ ?'' ನಮ್ಮವರು ಹೇಳಿದ್ದಾರೆ, ''ನಾವು ಹಣ ಕೊಡುವವರಲ್ಲ; ಏಕೆಂದರೆ ಅಕ್ರಮವಾಗಿ ಹಣವನ್ನು ಮಾಡಿ ಇಟ್ಟುಕೊಂಡವರಲ್ಲ. ನಮ್ಮ ಮಾತಾಜಿಯವರನು ಗೆಲ್ಲಿಸಿರಿ, ನಂತರ ಅವರು ಪ್ರಾಮಾಣಿಕವಾಗಿ ನಿಮ್ಮ ಊರುಗಳ ಅಭಿವೃದ್ಧಿಗೆ ದುಡಿಯುತ್ತಾರೆ''.

ಇದೇ ಸಂದರ್ಭದಲ್ಲಿ ಗೂಂಡಾಗಿರಿಯ ಅನುಭವವೂ ಆಯಿತು. ಗದಗದಲ್ಲಿ ವಿಧಾನಸಭಾ ಅಭ್ಯರ್ಥಿಯಾಗಿ ನಮ್ಮ ಪಾರ್ಟಿಯಿಂದ ವಿಜಯ ಕುಮಾರ ಗಡ್ಡಿ ಎಂಬುವವರು ನಿಂತಿದ್ದರು. ಅವರ ಪ್ರಚಾರಕ್ಕೆಂದು ಶ್ರೀ ವಿಜಯ ಸಂಕೇಶ್ವರರು ಪ್ರವಾಸ ಹಾಕಿದ್ದರು. ಹುಲಕೋಟಿಯಲ್ಲಿ ಪ್ರಚಾರ ಕಾರ್ಯಕ್ರಮ ಇಡಲಾಗಿತ್ತು. ಹುಲಕೋಟೆಯ ಹುಲಿ ಎಂದು ಕೀರ್ತಿ ವಿಶೇಷಿತರಾದ ಕೆ.ಹೆಚ್.ಪಾಟೀಲರ ಮಗ ಹೆಚ್.ಕೆ.ಪಾಟೀಲ್ ಬೆಂಬಲಿಸಿ ಡಿ.ಆರ್.ಪಾಟೀಲ್ ಎಂಬ ಹಾಲಿ ಶಾಸಕರನ್ನು ನಿಲ್ಲಿಸಿದ್ದರು. ಅವರ ಅನುಯಾಯಿಗಳು ಊರಬಾಗಿಲಲ್ಲೇ ತಡೆದು ತಮ್ಮೂರಲ್ಲಿ ಕಾಂಗ್ರೆಸ್ ಹೊರತು ಬೇರೆ ಯಾರನ್ನು ಬಿಡುವುದಿಲ್ಲವಾಗಿ ಕಾರ್ಯಕ್ರಮ ನಡೆಯಲು ಅವಕಾಶ ಕೊಡಲಿಲ್ಲ. ನಂತರ ಪ್ರಚಾರಕ್ಕೆ ಹೋದ ನಮ್ಮ ಗಾಡಿಯ ಗಾಜುಗಳಿಗೆ ಕಲ್ಲೆಸೆದು, ಡ್ರೈವರನನ್ನು ರಕ್ತ ಗಾಯಗಳಾಗುವಂತೆ ಥಳಿಸಿದರು. ಪ್ರಚಾರಕ್ಕೆ ಹೋದ ಹೆಣ್ಣು ಮಕ್ಕಳ ಮೇಲೆ ಹಲ್ಲೆ ಮಾಡಲು ಬಂದರಂತೆ. ಆಗ ಕೆಲವರು ಸಾತ್ವಿಕರು ಬಂದು, ''ವಾಪಸ್ಸು ಹೋಗಿರಿ, ನಿಮ್ಮ ಜೀವ ಉಳಿಯಲ್ಲ. ಇವರೆಲ್ಲ ಹೆಚ್.ಕೆ. ಪಾಟೀಲ್ ಬೆಂಬಲಿತ ಗೂಂಡಾ ಜನರು'' ಎಂದು ಎಚ್ಚರಿಸಿದರಂತೆ. ಗದಗ್ ಕ್ಷೇತ್ರದಲ್ಲಿ ಇಂಥವು ಹತ್ತಾರು ಗ್ರಾಮಗಳು. ಅವರು ಲಿಂಗಾಯತ ವಿರೋಧಿ ರೆಡ್ಡಿ ಜನರಂತೆ. ಹೀಗಾಗಿ ಕೆಲವು ಲಿಂಗಾಯತ ಹುಡುಗರು ಬಾವುಟ ಮುಂತಾಗಿ ಏನೂ ಇಟ್ಟುಕೊಳ್ಳದೆ ಕಾಲ್ನಡಿಗೆಯಲ್ಲಿ ತಿರುಗಾಡಿ ನಮ್ಮ ಪರವಾಗಿ ಪ್ರಚಾರ ಮಾಡುತ್ತಿದ್ದರು. ಅದನ್ನು ಪತ್ತೆ ಹಚ್ಚಿದ ಹೆಚ್.ಕೆ.ಪಾಟೀಲ್ ಅಭಿಮಾನಿಗಳು ರಾತ್ರಿ ಹತ್ತೂವರೆಗೆ ಫೋನ್ ಮಾಡಿ, ''ನಿಮ್ಮ ಜೀವ ಉಳಿಯಬೇಕು ಅಂತ ಇದ್ರೆ ಪ್ರಚಾರ ಮುಂದುವರಿಸಬಾರದು'' ಎಂದು ಬೆದರಿಕೆ ಹಾಕಿದಾಗ ಅವರು ರಾತ್ರೋರಾತ್ರಿ ಊರುಬಿಟ್ಟು, ಹೆಂಡತಿಯನ್ನು ತವರಿಗೆ ಕಳಿಸಿ ತಾವು ಗದಗಿಗೆ ಬಂದು ಮಿತ್ರರ ಮನೆಯಲ್ಲಿ ಉಳಿದರು.

ಈ ಪ್ರಸಂಗಕ್ಕೂ ಮೊದಲು ನಾನು ಗದಗಿಗೆ ಸಾರ್ವಜನಿಕ ಸಮಾರಂಭದಲ್ಲಿ ಮಾತನಾಡಲು ಹೋಗಿದ್ದೆ. ಸೇರಿದ್ದ ಜನ ಸಮೂಹ ಅಪಾರ. ಅಂದು ರಾತ್ರಿ ಗಡ್ಡಿಯವರ ಮನೆಯಲ್ಲಿ ಪೂಜೆ ಪೂರೈಸಿ ಪ್ರಸಾದ ತೆಗೆದುಕೊಂಡೆವು. ಅವರ ಪತ್ನಿ, ಅತ್ತೆ ಮನೆಯಲ್ಲಿದ್ದರು. ಅವರು ನಿಪ್ಪಾಣಿಯಲ್ಲಿ ನಮ್ಮ ಪ್ರವಚನ ಕೇಳಿದ್ದವರು. ಹೊರಡುವ ಮುನ್ನ ವಿಜಯ ಕುಮಾರ್ ಕಾಣಲಿಲ್ಲ. ಆಗ ಅವರ ಶ್ರೀಮತಿ ಹೇಳಿದರು, ''ಕಾರ್ಯಕರ್ತರು ಬಂದಿದ್ದರು. ಅವರಿಗೆಲ್ಲ ಜೀವ ಬೆದರಿಕೆ ಹಾಕಲಾಗಿದೆಯಂತೆ.

ಮೂವರ ಮೇಲೆ ಹೆಚ್.ಕೆ.ಪಾಟೀಲ್ ಗುಂಪು ಹಲ್ಲೆ ಮಾಡಿದಾಗ ಕಂಪ್ಲೆಂಟ್ ಕೊಡಲು ಪೋಲೀಸ್ ಸ್ಟೇಷನ್‌ಗೆ ಹೋದರೆ ಪೋಲೀಸರು ದೂರು ಪಡೆಯಲಿಲ್ಲವಂತೆ. ಹೆಚ್.ಕೆ.ವಿರುದ್ಧ ದೂರು ಪಡೆಯುವುದಿಲ್ಲ ಎಂದರಂತೆ. ಅದಕ್ಕೆ ಕಾರ್ಯಕರ್ತರು ಓಡಿ ಬಂದಿದ್ದರು. ಅವರೊಡನೆ ಪತಿ ಹೋಗಿದ್ದಾರೆ'' ಎಂದರು. ಇದು ನಮ್ಮ ಪ್ರಜಾಪ್ರಭುತ್ವ ! ಇಂಥವರೇ ನಮ್ಮ ನೇತಾರರು !!

ನಂತರ ನಮ್ಮ ಚುನಾವಣಾ ಪ್ರಚಾರಕರು ಹೇಳಿದರು, ''ಚುನಾವಣೆ ದಿನ ಮತಗಟ್ಟೆಗಳ ಬಳಿ ಪೋಲಿಂಗ್ ಏಜೆಂಟ್ ಆಗಿ ಕುಳಿತುಕೊಳ್ಳಲು ಬಿಡದೆ ಕನ್ನಡ ನಾಡು ಪಾರ್ಟಿ ಕಾರ್ಯಕರ್ತರಿಗೆ ಬೆದರಿಕೆ ಹಾಕಿದರಂತೆ. ಈ ದೌರ್ಜನ್ಯದ ನಡುವೆ ನಮಗೆ ಗೆಲುವು ಕನಸ್ಸಿನ ಗಂಟು ಎಂದು ಅಂದೇ ತಿಳಿಯಿತು. ನಿಮಗೆ ಹೇಳಿರಲಿಲ್ಲ ಅಷ್ಟೆ''. ಇಡೀ ದೇಶಕ್ಕೇ ವಿಸ್ಮಯವಾಗುವಂತೆ ಡಿ.ಆರ್. ಪಾಟೀಲ್ ಅವರ ಮತಕ್ಷೇತ್ರದ ಕೆಲವು ಸ್ಥಳಗಳಲ್ಲಿ 93% ಮತದಾನವಾಗಿದೆಯಂತೆ ಎಂದು ಯಾರೋ ಹೇಳಿದರು. ಈಗ 3 ದಿವಸಗಳ ಹಿಂದೆ ಓರ್ವ ಅಧಿಕಾರಿ ಬಂದಿದ್ದರು. ಈ ಪ್ರಸಂಗ ವಿವರಿಸಿದಾಗ ಅವರು ಹೇಳಿದರು, ''ಗೊತ್ತು, ನಾನೂ ಅಲ್ಲಿ ತಹಸೀಲ್ದಾರ್ ಆಗಿ ಇದ್ದಾಗ ಒಮ್ಮೆ ಚುನಾವಣೆ ಎದುರಿಸಿದೆ. ನಾವೂ ಪ್ರತ್ಯಕ್ಷ ಕಂಡಿದ್ದೇವೆ''. ಹೀಗೆ ನಮ್ಮ ದೇಶದ ಮತಕ್ಷೇತ್ರಗಳು ವಂಶಪಾರಂಪರ್ಯ ಆಳ್ವಿಕೆಯ ಗುತ್ತೇದಾರಿಕೆ ಪಡೆದ ಕ್ಷೇತ್ರಗಳಾಗಿವೆ ಎನ್ನಿಸದಿರದು.

ಹಣ-ತೋಳ್ಬಲದ ಜೊತೆಗೆ ಹೆಂಡದ ಆಮಿಷವೂ ಮಹತ್ವದ ಅಂಶ. ಧಾರಾಳವಾಗಿ ಹೆಂಡದ ಹೊಳೆ. ಒಂದು ಪ್ರಚಾರ ಸಭೆಗೆ ಹಳ್ಳಿಯೊಂದಕ್ಕೆ ಹೋಗಿ ಬಂದ ಪೂಜ್ಯ ಗಂಗಾ ಮಾತಾಜಿ ಹೇಳಿದರು, ''ಅಬ್ಬಾ, ಎಂಥಾ ವಾಸನೆ ! ನಮ್ಮ ಯಾವ ಸಭೆಯಲ್ಲೂ ಅಂಥ ವಾತಾವರಣ ಇರದು''.

ಕಾಂಗ್ರೆಸ್ ಪಕ್ಷವೇ ಹಿರಿಯಕ್ಕ. ಅದೇ ಅತ್ಯಂತ ಕೀಳು ಅಭಿರುಚಿಯನ್ನು ಮತದಾರರಲ್ಲಿ ಬೆಳೆಸಿತು. ಆಮಿಷ (ಸೀರೆ-ಧೋತಿ ಇತ್ಯಾದಿ), ಹಣ-ಹೆಂಡದ ಜೊತೆಗೆ ತೋಳ್ಬಲ ಇವೆಲ್ಲವನ್ನು ಕಲಿಸಿತು. ಅದನ್ನು ತಾವೂ ಬೆಳೆಸಿಕೊಳ್ಳದಿದ್ದರೆ ಅಧಿಕಾರ ಹಿಡಿಯಲು ಸಾಧ್ಯವಿಲ್ಲ ಎಂದು ಬಿ.ಜೆ.ಪಿ. ಆದಿಯಾಗಿ ಉಳಿದ ಪಕ್ಷಗಳು ಬೆಳೆಸಿಕೊಂಡಿವೆ. ಧಾರ್ಮಿಕ ಮೂಲಭೂತವಾದಿಗಳೆಂದು ಸೆಕ್ಯುಲರಿಸ್ಟರು ಕರೆಯುವುದು ಒತ್ತಟ್ಟಿಗಿರಲಿ ಮೊದಲು ಅವರಲ್ಲಿ ಯಾವ ನಿಷ್ಠೆ ಶುದ್ಧಿ ಇತ್ತೋ ಅದು ಮಾಯವಾಗಿ ಇಂದು ಬಿ.ಜೆ.ಪಿ.ಯು ಹಣ-ಹೆಂಡ-ತೋಳ್ಬಲದಲ್ಲಿ ಇತರ ಪಕ್ಷಗಳ ಜೊತೆ ಸಮವಾಗುತ್ತಿದೆ. ಕಲಘಟಗಿಯ ಮತಕ್ಷೇತ್ರದ ಪ್ರಮುಖ ಹುರಿಯಾಳುಗಳು ಒಂದೊಂದು ಕೋಟಿ ರೆಡಿ ಮಾಡಿಕೊಂಡಿದ್ದಾರೆಂದು ಸುದ್ದಿ ಹಬ್ಬಿದ್ದಲ್ಲದೆ ಒಂದೊಂದು ಓಟಿಗೆ ನೂರೈವತ್ತು, ಇನ್ನೂರು, ಇನ್ನೂರೈವತ್ತು ಕೊಟ್ಟಿದ್ದಾರೆಂಬ ವದಂತಿ ಹಬ್ಬಿತ್ತು. ನಮ್ಮ ಒಂದು ಪ್ರಚಾರ ಸಭೆ ನಡೆದಿತ್ತು. ಬಿಜೆಪಿಯ ಅಂಗ ಸಂಸ್ಥೆಯಾದ ಭಜರಂಗದಳದ ಕಾರ್ಯಕರ್ತರು ಎಂದು ಯಾರೋ ಹೇಳಿದರು. ತಲೆಗೆ ಕೆಂಪು ವಸ್ತ್ರ ಸುತ್ತಿ, ನಡುವಿನಲ್ಲೂ ವಸ್ತ್ರ ಸುತ್ತಿ ಹಣೆಯ ಮೇಲೆ ಕೆಂಪು ಬಣ್ಣದ ಕುಂಕುಮದ ನಾಮವಿಟ್ಟು ನಮ್ಮ ಭಾಷಣಕ್ಕೆ ಅಡ್ಡಿಯಾಗುವಂತೆ ''ಪಟರ್'' ಎಂದು ಹಿರೋಹೊಂಡಾ ಸದ್ದು ಮಾಡುತ್ತ ನೂರಾರು ಜನ ಸುಮಾರು ಹದಿನೈದು ಇಪ್ಪತ್ತು ನಿಮಿಷ ನಮ್ಮ ಸಭೆಯಲ್ಲಿ ಹಾಯ್ದು ಹೋದರು. ಆ ದೃಶ್ಯ ಜನ ಸಾಮಾನ್ಯರಲ್ಲಿ ಭಯ ಹುಟ್ಟಿಸುವಂತಿತ್ತು. ಕಲಘಟಗಿ ತಾಲ್ಲೋಕಲ್ಲೂ ಭಜರಂಗದಳ ಬಲಗೊಂಡು ಹಳ್ಳಿಗಳ ಜನ ಹೆದರುವಂತಾಗಿದೆ ಎಂದು ಕೆಲವರು ಹೇಳಿದರು. ಆ ಜನ ಹೋದ

ರೀತಿ ನೋಡಿ, ''ಇವರೇನಾ ಭಾರತೀಯ ಸಂಸ್ಕೃತಿಯ ಬಗ್ಗೆ ಮಾತನಾಡುವವರು ?!'' ಎಂದು ವಿಸ್ಮಯವೆನಿಸಿತು. ಕೆಲವು ಊರಲ್ಲಿ ಕಾಂಗ್ರೆಸ್ಸಿಗರು ದೌರ್ಜನ್ಯವೆಸಗಿದರೆ ಕೆಲವು ಊರಲ್ಲಿ ಬಿಜೆಪಿಯವರು. ಅಂಥ ಊರುಗಳಿಗೆ ಇನ್ನಿತರ ಪಕ್ಷಗಳ ಕಾರ್ಯಕರ್ತರು ಪ್ರಚಾರಕ್ಕೆ ಬರಕೂಡದೆಂದು ಕಟ್ಟಪ್ಪಣೆ!

ಸೋಲಿಗೆ ಕಾರಣಗಳೇನು ?

ಆದರ್ಶವಾದಿಗಳು ರಾಜಕೀಯಕ್ಕೆ ಬರಬೇಕು ಎಂದು ಆಶಿಸುವ ಬಹುಪಾಲು ಜನರು, ನಮ್ಮ ಅಭಿಮಾನಿಗಳು ಖಂಡಿತಾ ನಾನು ಆಯ್ಕೆಯಾಗುವೆನೆಂದು ನಿರೀಕ್ಷಿಸಿದ್ದರು. ಚುನಾವಣೆಗೆ ಪೂರ್ವದಲ್ಲಿ ಮಾತ್ರವಲ್ಲ, ಚುನಾವಣೆಯ ನಂತರ ಉದಯ ಟಿ.ವಿಯವರು ನೇರ ಸ್ಪರ್ಧೆ ಇರುವುದು ನನ್ನ ಮತ್ತು ಕಾಂಗ್ರೆಸ್ಸಿನ ಬಿ.ಎಸ್.ಪಾಟೀಲರ ನಡುವೆ ಮತ್ತು ನಮ್ಮದು ಸಮಬಲದ ಹೋರಾಟ ಎಂದು ಹೇಳಿದರೆ, ಸ್ಟಾರ್ ನ್ಯೂಸ್ ನನ್ನದೇ ಗೆಲುವು ಎಂದು ಜನರನ್ನು ಸಂದರ್ಶಿಸಿದ ಬಳಿಕ ಹೇಳಿದೆ. ಚುನಾವಣೆಗೆ ಪೂರ್ವದಲ್ಲಿ ಮಾಡಿದ ಸಂದರ್ಶನದಲ್ಲಿ ನನ್ನ ಹೆಸರು ಮುಂದಿದ್ದು ಮತದಾರರು ಕಡೆಯಲ್ಲಿ ಮನಸ್ಸು ಬದಲಿಸಿರಬಹುದು ಎಂದು ಊಹಿಸಬಹುದು. ಚುನಾವಣೆ ನಂತರದ ಸಮೀಕ್ಷೆ(Exit polls) ಯಲ್ಲಿ ಸಹ ನನ್ನ ಹೆಸರನ್ನು ಸ್ಟಾರ್ ನ್ಯೂಸ್‌ದವರು ಹೇಳಿದರಂತೆ. ಆದರೆ ಫಲಿತಾಂಶದಲ್ಲಿ ಮಾತ್ರ ನಾನು ಸೋತಿದ್ದು ; ಎಲ್ಲರ ನಿರೀಕ್ಷೆ ಮೀರಿ ನನಗೆ ಕಡಿಮೆ ಮತ ಬಂದಿದ್ದವು. ಈ ಸೋಲಿಗೆ ಕಾರಣಗಳೇನು ?

ಕನ್ನಡ ನಾಡು ಪಕ್ಷ ಹೊಸ ಪಕ್ಷವಾದ್ದರಿಂದ ಈ ಪಕ್ಷದ ಬಗ್ಗೆ ಜನರಿಗೆ ಭರವಸೆ ಇರಲಿಕ್ಕಿಲ್ಲ. ಹೀಗಾಗಿ ರಾಷ್ಟ್ರೀಯ ಪಕ್ಷಗಳನ್ನು ಬೆಂಬಲಿಸಿರಬಹುದು ಎಂದು ಊಹಿಸೋಣ. ಆದರೆ ವೈಯಕ್ತಿಕವಾಗಿ ಆರಿಸಿ ಬಂದಿದ್ದರೂ ನಾನು ಉತ್ತಮವಾದ ಕೆಲಸಗಳನ್ನು ಮಾಡುವ ಆಕಾಂಕ್ಷೆ ಹೊಂದಿದ್ದು ಅದನ್ನು ಮತದಾರರು ಪ್ರಬುದ್ಧರಾಗಿದ್ದರೆ ಖಂಡಿತಾ ಅರ್ಥ ಮಾಡಿಕೊಳ್ಳುತ್ತಿದ್ದರು. ಚುನಾವಣೆಗಳಲ್ಲಿ ಇಂದು ಹಣ, ಹೆಂಡ ಪ್ರಮುಖ ಪಾತ್ರ ವಹಿಸುತ್ತಿರುವುದು ನಿಜಕ್ಕೂ ನಾಚಿಕೆಗೇಡು. ಕಾರ್ಯಕರ್ತರು ಪ್ರಚಾರಕ್ಕೆ ಹೋದರೆ ಸಾಮಾನ್ಯ ಜನ ಕೇಳುವ ಪ್ರಶ್ನೆ, ''ನೀವು ಎಷ್ಟು ಹಣ ಕೊಡುತ್ತೀರಿ?'' ಹಳ್ಳಿಗಳಲ್ಲಿ, ಊರುಗಳಲ್ಲಿ ಒಂದು ಜಾಲ-ನೆಟ್‌ವರ್ಕ್ ಇರುತ್ತದೆ. ಸಾಮಾನ್ಯವಾಗಿ ಅಭ್ಯರ್ಥಿಗಳು ಅವರ ಮೂಲಕವೇ ಕೆಲಸ ಮಾಡುತ್ತಾರೆ. ನಮ್ಮಂತೆ, ನಮ್ಮ ಕಾರ್ಯಕರ್ತರಂತೆ ಅವರು ಶ್ರಮವಹಿಸಿ ದಣಿಯುವುದೇ ಇಲ್ಲ. ಹಣವನ್ನು ಹಿರಿ, ಕಿರಿ, ಮರಿ, ಪುಡಾರಿಗಳಿಗೆ ತಲ್ಪಿಸುತ್ತಾರೆ. ಅವರು ಜನ ಸಾಮಾನ್ಯರಿಗೆ ಎಷ್ಟು ತಲ್ಪಿಸುತ್ತಾರೋ ತಿಳಿಯದು. ಆ ಮುಖಂಡರು ತಮ್ಮ ಜನರಿಗೆ ''ನೀನು ಇಂಥ ಗುರುತಿಗೆ ಓಟು ಹಾಕಬೇಕು'' ಎಂದು ಆಜ್ಞೆ ಮಾಡುತ್ತಾರೆ. ಅದರಂತೆ ಆ ಮುಗ್ಧರು ಮಾಡುತ್ತಾರೆ. ಒಂದು ಹಟ್ಟಿಗೆ ನಮ್ಮವರು ಹೋಗಿದ್ದರು. ಸ್ವಾತಂತ್ರ್ಯ ಬಂದು 57 ವರ್ಷಗಳ ಬಳಿಕವೂ ಅಲ್ಲಿಗೆ ರಸ್ತೆ ಇಲ್ಲ, ವಿದ್ಯುತ್ ಇಲ್ಲ, ವ್ಯಾನ್ ನಿಲ್ಲಿಸಿ ನಡೆದು ಹೋದಾಗ, ''ಇದೇ ಮೊದಲ ಬಾರಿಗೆ ಮತ ಕೇಳಲು ನಮ್ಮ ಹಟ್ಟಿತನ ಬಂದಿರುವವರು ನೀವು'' ಎಂದರಂತೆ. ''ನಮಗೇನೋ ಗುರುಗಳಿಗೆ ಕೊಡುವ ಆಸೆ ಇದೆ. ಆದರೆ ನಮ್ಮ ಲೀಡರ್ ಊರಲ್ಲಿ ಇರುತ್ತಾರೆ. ಅವರು ಯಾರಿಗೆ ಕೊಡಲು ಹೇಳುವರೋ ಅವರಿಗೆ ನಮ್ಮ ಹಟ್ಟಿಯವರು ಕೊಡಲೇಬೇಕು. ಇಲ್ಲದಿದ್ದರೆ ನಮಗೆ

ಉಳಿಗಾಲವಿರದು''. ಆ ಲೀಡರ್‌ಗಳು, ''ನನ್ನ ಬಳಿ ಇಷ್ಟು ಮತಗಳಿವೆ. ಇಷ್ಟು ಹಣ ಕೊಟ್ಟರೆ ಅವನ್ನು ನಿಮಗೆ ಹಾಕಿಸುತ್ತೇನೆ'' ಎಂದು ಅಭ್ಯರ್ಥಿಗಳಿಂದ ಹಣ ಪಡೆಯುತ್ತಾರೆ. ನನ್ನ ಹೆಸರು ಅಭ್ಯರ್ಥಿ ಎಂದು ಘೋಷಿತವಾಗುತ್ತಲೇ ಬಹಳ ಜನರು ಸಾಲುಗಟ್ಟಿ ಬರತೊಡಗಿದರು. ''ನಮ್ಮ ಬಳಿ ಇಷ್ಟು ಓಟಿವೆ'' ಎಂದು ಹೇಳುತ್ತಿದ್ದರು. ನಮಗೆ ಗಾಬರಿ ಶುರುವಾಯಿತು. ಲಕ್ಷಾಂತರ ಮತದಾರರ ಓಟು ಪಡೆಯಬೇಕಾದರೆ ಎಷ್ಟು ತಾನೇ ಕೊಡಲು ಸಾಧ್ಯ ? ಮತ್ತು ಈ ಜನರು ಎಲ್ಲರಿಂದ ಹಣ ಪಡೆದು ಯಾರಿಗೆ ಓಟು ಹಾಕಿಸುತ್ತಾರೋ?! ಎಂಬ ಸಂದೇಹವೂ ಕಾಡುತ್ತಿತ್ತು. ಇಂಥ ಲೀಡರ್‌ಗಳನ್ನು ಸಾಗಹಾಕುವುದಕ್ಕೆ ಸಾಕುಬೇಕಾಗುತ್ತಿತ್ತು.

ಲೋಕಸಭಾ ಸದಸ್ಯರ ಗೆಲುವಿಗೆ ಪ್ರಮುಖ ರೂಹಾರಿಗಳು ವಿಧಾನ ಸಭಾ ಅಭ್ಯರ್ಥಿಗಳು. ಅವರು ತಮ್ಮ ಜೊತೆಗೆ ನಮ್ಮ ಪ್ರಚಾರವನ್ನೂ ಮಾಡಬೇಕು. ನಮ್ಮ ವಿಷಯದಲ್ಲಿ ಇದು ದೊಡ್ಡ ಲೋಪವಾಯಿತು. ಕೆಲವರು ಮಾತ್ರ ಅಂತಃಕರಣ ಪೂರ್ವಕವಾಗಿ ಪ್ರಚಾರ ಮಾಡಿದರು. ಮತ್ತೆ ಕೆಲವು ಅಭ್ಯರ್ಥಿಗಳು ನಮ್ಮಿಂದ ಹಣ ಕೇಳಲು ಆರಂಭಿಸಿದರು. ರಾಷ್ಟ್ರೀಯ ಬಸವ ದಳ, ಬಿ.ಜೆ.ಪಿ., ಮುಂತಾದ ಸಂಘಟನೆಯಲ್ಲಿ ಒಂದು ತತ್ತ್ವದ ಪ್ರತಿಷ್ಠಾಪನೆ ಮುಖ್ಯವಾಗಿರುವುದರಿಂದ ಆ ತತ್ತ್ವಕ್ಕಾಗಿ ಕಾರ್ಯಕರ್ತರು ನಿಷ್ಠೆಯಿಂದ ದುಡಿಯುವ ಮನೋಭಾವ ಬೆಳೆಸಿಕೊಂಡಿರುತ್ತಾರೆ. ಕೆಲವೆಡೆ ಶ್ರೀ ದೇವೇಗೌಡರು ಶ್ರೀ ಸಿದ್ಧರಾಮಯ್ಯ ಅವರಿಗಾಗಿ ಜಾತಿ ಅಭಿಮಾನ ಕೆಲಸ ಮಾಡುತ್ತದೆ. ಕಾಂಗ್ರೆಸ್‌ದಲ್ಲಿ ಹಣವು ಪ್ರಮುಖ ಸಾಧನವಾಗಿರುತ್ತದೆ. ಹಾಗೆ ಕನ್ನಡ ನಾಡು ಪಕ್ಷಕ್ಕೆ ನಿಷ್ಠಾವಂತ ಕಾರ್ಯಕರ್ತರ ಪಡೆ ತಯಾರಾಗಲು ಸಮಯ ಸಿಕ್ಕಿರಲಿಲ್ಲ; ಚೆಲ್ಲಲು ಹಣವೂ ಇರಲಿಲ್ಲ. ನಮ್ಮಿಂದ ಹಣ ಬಯಸಿದ ಅಭ್ಯರ್ಥಿಗಳಿಗೆ ಹೇಳಿದೆ, ''ನಿಲ್ಲಲು ಒಪ್ಪಿಗೆ ನೀಡುವ ಮೊದಲೇ ಹೇಳಿದ್ದೆ ನಮ್ಮ ಬಳಿ ಹಣ ಇಲ್ಲವೆಂದು. ನಾನು ಅಧ್ಯಕ್ಷಳಾಗಿರುವ ಯಾವುದೇ ಟ್ರಸ್ಟಿನ ಒಂದು ಪೈಸೆ ಹಣವನ್ನೂ ಚುನಾವಣೆಗೆ ಬಳಸುವುದಿಲ್ಲ. ಧರ್ಮಪ್ರಚಾರಕ್ಕಾಗಿ ಜನತೆ ಕೊಟ್ಟ ಕಾಣಿಕೆಯನ್ನು ಚುನಾವಣೆಗೆ ಬಳಸಲು ನಮ್ಮ ಅಂತರಾತ್ಮ ಅನುಮತಿ ನೀಡುವುದಿಲ್ಲ''. ಹೀಗಾಗಿ ಕೆಲವು ಅಭ್ಯರ್ಥಿಗಳು ನಮ್ಮ ಹೆಸರನ್ನು ಹೇಳದೆ ತಮ್ಮದಷ್ಟನ್ನೇ ಪ್ರಚಾರ ಮಾಡಿಕೊಂಡರು ಎಂದು ನಮ್ಮ ಕಾರ್ಯಕರ್ತರು ಹೇಳಿದರು. ಬಿಜೆಪಿ, ಕಾಂಗ್ರೆಸ್ಸಿಗರಿಗೆ ವಿಧಾನ ಸಭಾ ಅಭ್ಯರ್ಥಿಗಳು ಚೆನ್ನಾಗಿ ಕೆಲಸ ಮಾಡಿದರಷ್ಟೇ ಅಲ್ಲ, ವಿಪುಲವಾಗಿ ಹಣವನ್ನೂ ಧಾರಾ(ಕಾರ)ಳವಾಗಿ ಖರ್ಚು ಮಾಡಿದರು. ಬ್ಯಾನರ್, ಪೋಸ್ಟರ್, ಕಟ್‌ಔಟ್ ಎಲ್ಲೆಡೆ ಅವರವು ಕಂಗೊಳಿಸುತ್ತಿದ್ದವು. ನಾವು ಅವನ್ನೇನು ಮಾಡಿಸಲು ಹೋಗಲಿಲ್ಲ. ಕರ ಪತ್ರ ಪ್ರಚಾರ ಮತ್ತು ಪತ್ರಿಕಾ (ಕೇವಲ ವಿಜಯ ಕರ್ನಾಟಕ) ಪ್ರಚಾರಕ್ಕೆ ತೃಪ್ತಿಪಟ್ಟುಕೊಂಡೆವು. ಉಳಿದ ಪ್ರಮುಖ ಪತ್ರಿಕೆಗಳು ಬೇರೆಬೇರೆ ಪಾರ್ಟಿಗಳಿಗೆ ತಮ್ಮನ್ನು ತಾವು ಸಮರ್ಪಣೆ ಮಾಡಿಕೊಂಡಿದ್ದರಿಂದ ಅಂಥ ಸಹಕಾರವನ್ನು ಕನ್ನಡ ನಾಡು ಪಾರ್ಟಿಯ ಅಭ್ಯರ್ಥಿಗಳೂ ನಿರೀಕ್ಷಿಸುವಂತಿರಲಿಲ್ಲ.

ಕಡೆಕಡೆಯಲ್ಲಿ ಕೆಲವು ವದಂತಿ ಹಬ್ಬಿದವು. ನಮ್ಮ ಮತ ಕ್ಷೇತ್ರದ ನಮ್ಮ ಪಕ್ಷದ ಅಭ್ಯರ್ಥಿಗಳು ಬೇರೆ ಬಲವಾದ ಪಕ್ಷಗಳ ಅಭ್ಯರ್ಥಿಗಳಿಗೆ ಬುಕ್ ಆಗಿ, ಅವರಿಂದ ಹಣ ಪಡೆದು ಒಳಗಿಂದೊಳಗೇ ಆ ಅಭ್ಯರ್ಥಿಗಳ ಪರವಾಗಿ ಪ್ರಚಾರ ಮಾಡಿದ್ದಾರೆ ಎಂದು. ಸುದ್ದಿ ವದಂತಿಗಳಿಗಂತೂ ಮಿತಿಯೇ

ಇಲ್ಲ. ಓರ್ವ ಅಭ್ಯರ್ಥಿಯಂತೂ ನಾಮಪತ್ರ ಸಲ್ಲಿಸಿ, ಅಧಿಕೃತವಾಗಿ ಅಭ್ಯರ್ಥಿಯೆಂದು ಘೋಷಿಸಲ್ಪಟ್ಟ ಮೇಲೆ ಬೇರೆಯವರನ್ನೂ ನಿಲ್ಲಿಸಲಾರದಂತೆ ಮಾಡಿ ಕಾಂಗ್ರೆಸ್ಸಿನತ್ತ ಸಾಗಿದರು. ಧಾರ್ಮಿಕ ಜಗತ್ತಿನಲ್ಲೇ ಸಾಕಷ್ಟು ವಿಶ್ವಾಸ ದ್ರೋಹ ನಡೆಯುವಾಗ ಕೇವಲ ಧನ ಬಲದ ಮೇಲೆ ನಿಂತ ರಾಜಕಾರಣದಲ್ಲಿ ಎಷ್ಟು ವಿಶ್ವಾಸದ್ರೋಹ ನಡೆಯಬಹುದು ಆಲೋಚಿಸಿರಿ. ಧಾರವಾಡ ಗ್ರಾಮೀಣದ ಈ ವ್ಯಕ್ತಿ ಇಂಥ ಕೆಲಸ ಮಾಡಿದ ಮೇಲೆ ಆ ಕ್ಷೇತ್ರದಲ್ಲಿ ನಾವು ಪ್ರಚಾರ ಮಾಡುವುದಾದರೂ ಹೇಗೆ? ನಮಗೆ ಆ ಹಳ್ಳಿಗಳ ಪರಿಚಯವೇ ಇರಲಿಲ್ಲ.

ವಿದ್ಯುನ್ಮಾನ ಮತ ಯಂತ್ರ ಸೂಕ್ತವಲ್ಲ

ಅವಿದ್ಯಾವಂತರೇ ಹೆಚ್ಚಿನ ಸಂಖ್ಯೆಯಲ್ಲಿರುವ ಭಾರತಕ್ಕೆ ಎಲೆಕ್ಟ್ರಾನಿಕ್ ಮತಯಂತ್ರ ಬಳಕೆ ಸೂಕ್ತವಲ್ಲ. ಹಿಂದೆ ಮತಪತ್ರಗಳ ಮೇಲೆ ಮುದ್ರೆಯೊತ್ತುತ್ತಿದ್ದುದೇ ಸರಿ. ನಂತರ ಸಂಶಯ ಬಂದಾಗ ಎಣಿಸಿ ನೋಡಲು ಅವಕಾಶವಿರುತ್ತಿತ್ತು. ಬೆಳಕಿಲ್ಲದ ಕತ್ತಲೆಯ ಶಾಲಾಕೋಣೆಗಳು, ಮತಯಂತ್ರದ ಬಟನ್‌ಗಳು ಸರಿಯಾಗಿ ಕಾಣುತ್ತಿರಲಿಲ್ಲ. ಅವಿದ್ಯಾವಂತರು, ಮುದುಕರಿಗೆ ಆ ಯಂತ್ರದ ಮುಂದೆ ನಿಂತು ಏನು ಮಾಡಬೇಕೆಂಬುದೇ ತಿಳಿಯುತ್ತಿರಲಿಲ್ಲ. ಬೇರೆಯವರನ್ನು ಕೇಳುವಂತಿಲ್ಲ. ತಮಗೆ ತಿಳಿಯಲಿಲ್ಲ ಎಂದುಕೊಳ್ಳುವುದಕ್ಕೆ ನಾಚಿಕೆ. ಕರ್ನಾಟಕದಲ್ಲಿ ಬಿ.ಜೆ.ಪಿ. ಹೆಚ್ಚಿನ ಸೀಟು ಪಡೆದುಕೊಳ್ಳಲು ಈ ಮತಯಂತ್ರಗಳು ಸಹಾಯಕವಾಗಿರಬಹುದು ಎಂದು ನನ್ನ ಊಹೆ. ಮೊಟ್ಟಮೊದಲ ಬಟನ್ ಬಿ.ಜೆ.ಪಿ.ಯದು. ಯಾರಿಗೆ ಬಟನ್ ಒತ್ತಬೇಕು ಎಂಬುದು ತಿಳಿಯದವರು ಮೊದಲನೆಯ ಬಟನ್ ಒತ್ತಿ ಹೊರಬಂದಿದ್ದಾರೆ. ಹೀಗೆ ಎಲೆಕ್ಟ್ರಾನಿಕ್ ಮತಯಂತ್ರ ಗ್ರಾಮಾಂತರ ಪ್ರದೇಶದಲ್ಲಿ ಬಿ.ಜೆ.ಪಿಗೆ ವರವಾಗಿ ಕೆಲಸ ಮಾಡಿರುವಂತೆ ತೋರುತ್ತದೆ. ಜೊತೆಗೆ ದೌರ್ಜನ್ಯದ ಮೂಲಕ ಸಾಕಷ್ಟು ಖೋಟಾ ಮತದಾನ ಆಗಿದೆ. ಕಾಂಗ್ರೆಸ್ ಅಭ್ಯರ್ಥಿಗಳು ಜೋರಾಗಿದ್ದಲ್ಲಿ ಅವರು, ಬಿ.ಜೆ.ಪಿ. ಜೋರಾಗಿದ್ದಲ್ಲಿ ಅವರು ಪ್ರಾಕ್ಸಿ ಓಟ್ ಒತ್ತಿಸಿಕೊಂಡಿರುವ ಸಾಧ್ಯತೆ ಇದೆ. ಓರ್ವ ಸಚಿವರು ಸಿ.ಪಿ.ಐ. ಅನ್ನೇ ಬೆದರಿಸಿದ್ದರೂ ಅದನ್ನು ಇನ್ನಿತರ ಪೋಲೀಸರು ಮೂಕ ಪ್ರೇಕ್ಷಕರಂತೆ ನೋಡುತ್ತಿದ್ದುದನ್ನು ಪತ್ರಿಕೆಗಳು ವರದಿ ಮಾಡಿವೆ. ಲೋಕಾಯುಕ್ತರು, ಚುನಾವಣಾ ಆಯೋಗದವರು ಇವರೆಲ್ಲ ಕಾಗದದ ಹುಲಿಗಳು ಮಾತ್ರ ಎನ್ನದೇ ಗತ್ಯಂತರವಿಲ್ಲ.

ವಿದ್ಯುನ್ಮಾನ ಮತ ಯಂತ್ರ ಕುರಿತು ಮತ್ತು ಅಧಿಕಾರಶಾಹಿಯ ಕೈವಾಡ ಕುರಿತು ನನಗೆ ಕೆಲವು ಸಂದೇಹ ಉಳಿದಿವೆ. ಈ ಬಗ್ಗೆ ನಮ್ಮ ಪರಿಚಯದ ಕೆಲವು ಅಧಿಕಾರಿಗಳ ಜೊತೆ ಚರ್ಚಿಸಿದೆ. ಹಾಗೆಲ್ಲ ಸಾಧ್ಯವಿಲ್ಲ ಎಂದೇನೋ ಅವರುಗಳು ಹೇಳಿದರೂ ನನಗೆ ಸಂದೇಹ ಹೋಗಿಲ್ಲ.

ಹುಮ್ನಾಬಾದ್ ಉಪಚುನಾವಣೆಯಲ್ಲಿಯೂ ಈ ಅನುಭವ ಆಯಿತು ಎಂದು ಅನೇಕರು ಹೇಳಿದರು. ಪಕ್ಷೇತರ ಅಭ್ಯರ್ಥಿಗಳ ಬಟನ್ ಒತ್ತಿದರೂ ಅದು ಕಾಂಗ್ರೆಸ್‌ಗೇ ಹೋಗುವಂತೆ ಸಂಪರ್ಕ ಕಲ್ಪಿಸಲಾಗಿತ್ತು ಎಂಬುದವರ ಅನುಭವ. ಈ ಬಗ್ಗೆ ವಿಜಯ ಸಂಕೇಶ್ವರ ಅವರಿಗೆ ತಿಳಿಸಿದಾಗ, ''ಉಪಚುನಾವಣೆಗಳಲ್ಲಿ ಹಾಗೆ ಆಗಬಹುದಾದರೂ ಮುಖ್ಯ ಚುನಾವಣೆಯಲ್ಲಿ ಅಷ್ಟೊಂದು ಅವ್ಯವಹಾರ ಸಾಧ್ಯವಿಲ್ಲ. ಏಕೆಂದರೆ ಉಪಚುನಾವಣೆಗಳಲ್ಲಿ ಅಧಿಕಾರಿಗಳು ಸರ್ಕಾರದ ಅಧೀನರಾಗಿರುತ್ತಾರೆ. ಮುಖ್ಯ ಚುನಾವಣೆಯಲ್ಲಿ ಸರ್ಕಾರವು ಅಧಿಕೃತವಾಗಿರುವುದಿಲ್ಲ'' ಎಂದರು.

ಚುನಾವಣಾ ಸಮಯದಲ್ಲಿ ಪೋಲಿಂಗ್ ಏಜೆಂಟ್‌ಗೆ ತೋರಿಸಿ, ಯಂತ್ರಗಳನ್ನು ಸೀಲ್ ಮಾಡಿ, ಭದ್ರತೆಯ ಮಧ್ಯೆ ಅವನ್ನು ತಂದು ಸ್ಟ್ರಾಂಗ್ ರೂಮಲ್ಲಿ ಇಟ್ಟು ಕೋಣೆಗೆ ಕೀಲಿ ಹಾಕುವರಂತೆ. ನಂತರ ಎಣಿಕೆ ದಿವಸ ಏಜೆಂಟುಗಳ ಎದುರಿಗೆ ಕೀಲಿ ತೆಗೆಯುವರಂತೆ. ಇವೆಲ್ಲ ನಮ್ಮಲ್ಲಿ ಓದಲು, ಕೇಳಲು ಆಪ್ಯಾಯಮಾನ ಅಷ್ಟೆ. ಸಿ.ಪಿ.ಐಗೆ ಹೊಡೆದು, ಎಲ್ಲಿಂದಲೋ ಬಸ್ಸಿನಲ್ಲಿ ಜನರನ್ನು ತುಂಬಿಸಿಕೊಂಡು ಬಂದ ಜನರಿಂದ ಸಚಿವರು ಪ್ರಾಕ್ಸಿ ಓಟು ಹಾಕಿಸುವಾಗ ಇಡೀ ಪೋಲೀಸ್ ಸಿಬ್ಬಂದಿ ಬೆಪ್ಪಾಗಿ ನಿಲ್ಲುವ ದೇಶವಿದು.

ಕೆಲವು ಜಾತಿವರ್ಗಗಳ ಅಧಿಕಾರಿಗಳು ಕಾಂಗ್ರೆಸ್, ಜೆ.ಡಿ.ಎಸ್ ಮುಂತಾದ ಪಕ್ಷಗಳ ಹಿತಚಿಂತಕರಿದ್ದರೆ, ಮತ್ತೆ ಕೆಲವು ಜಾತಿ ವರ್ಗಗಳವರು ಬಿ.ಜೆ.ಪಿ.ಯ ಅಭಿಮಾನಿಗಳು. ಅದಕ್ಕೆಂದೇ ರಾಜಕಾರಣಿಗಳು ತಮಗೆ ಬೇಕಾದ ಅಧಿಕಾರಿಗಳನ್ನು ತಮ್ಮ ಕ್ಷೇತ್ರಗಳಿಗೆ, ಕ್ಷೇತ್ರಗಳಿಂದ ಮಗಳು, ಸೊಸೆಯಂತೆ ಕರೆಸಿಕೊಳ್ಳಲು, ಕಳಿಸಲು ತೆರೆಮರೆಯ ರಾಜಕಾರಣ ಮಾಡುವುದು. ಇಂಥದೇ ನಂಬರ್ ಯಂತ್ರದ ಮೂಲಕ ಮತದಾನ ಮಾಡಲಾಗಿದೆ ಎಂದು ಏಜೆಂಟ್ಸ್ ಬರೆದಿಟ್ಟುಕೊಳ್ಳುವರೆ ? ಪೇಪರ್ ಸೀಲ್ ಮಾಡಿರಲಾಗುವುದು. ಪೋಲಿಂಗ್ ಏಜೆಂಟ್ಸ್ ಬೇರೆ, ಎಣಿಕೆ ಏಜೆಂಟ್ಸ್ ಬೇರೆ. ಮತದಾನ ಯಂತ್ರಗಳು ಎಕ್ಸ್‌ಟ್ರಾ ಇರುತ್ತವೆ. ಅವುಗಳಲ್ಲಿ ಒತ್ತಿಟ್ಟುಕೊಂಡು ಇವುಗಳ ಮಧ್ಯೆ ಸೇರಿಸಿದ್ದರೆ ಹೇಗೆ ಎಂದೇಕೆ ಸಂದೇಹಿಸಬಾರದು ? ಪ್ರಾಮಾಣಿಕತೆ ಎಂಬುದು ಹಗಲಲ್ಲಿ ದೀಪ ಹಚ್ಚಿ ಹುಡುಕಿದರೂ ಸಿಕ್ಕದ ಈ ದೇಶದಲ್ಲಿ ಮತದಾರರ ಅಭಿಪ್ರಾಯವಾದರೂ ಮತಯಂತ್ರಗಳ ಮೂಲಕ ಪ್ರಾಮಾಣಿಕವಾಗಿ ವ್ಯಕ್ತವಾಗಲು ಸಾಧ್ಯವೇ ಎಂಬ ಸಂದೇಹವೂ ನನ್ನನ್ನು ಕಾಡುತ್ತದೆ.

ಶ್ರೀ ವಿಜಯ ಸಂಕೇಶ್ವರರ ಉದ್ದೇಶ ಘನವಾಗಿತ್ತು, ರಾಜ್ಯದ ಸರ್ವಾಂಗೀಣ ಅಭಿವೃದ್ಧಿಯ ಕನಸು ಅವರದಾಗಿತ್ತು. ಸಂಸತ್ ಸದಸ್ಯರಾಗಿದ್ದ ಅವರು ತಮಗೆ ಬಂದ ಅನುದಾನದ ಹಣವನ್ನು ಅದರ ಬಡ್ಡಿ ಸಹಿತವಾಗಿ ಮತಕ್ಷೇತ್ರದ ಅಭಿವೃದ್ಧಿಗೆ ವಿನಿಯೋಗಿಸಿದ್ದಾರೆ. ಹೀಗಾಗಿ ಧಾರವಾಡ ಉತ್ತರ ಲೋಕಸಭಾ ಮತ ಕ್ಷೇತ್ರದ ಕನ್ನಡ ನಾಡು ಪಾರ್ಟಿಯ ಅಭ್ಯರ್ಥಿಯಾಗಿ ನಿಂತ ನನ್ನನ್ನು ಪ್ರಾಮಾಣಿಕ ಸೇವಾಕಾಂಕ್ಷೆಯುಳ್ಳ, ಹುಬ್ಬಳ್ಳಿ ಗ್ರಾಮೀಣ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಅವರನ್ನು ಖಂಡಿತಾ ಗೆಲ್ಲಿಸುವರೆಂದು ಪ್ರಾಜ್ಞ ಜನರು ನಂಬಿದ್ದರು ಮತ್ತು ಶ್ರೀ ಸಂಕೇಶ್ವರರಿಗೆ ಅಷ್ಟೇ ಆತ್ಮವಿಶ್ವಾಸವೂ ಈ ಬಗ್ಗೆ ಇತ್ತು. ಆದರೆ ಮತದಾರರು ಸಾಬೀತು ಮಾಡಿದ್ದಾರೆ. "ನೀವು ನಮ್ಮ ಊರಿಗೆ, ಪ್ರದೇಶಕ್ಕೆ ಏನು ಉಪಕಾರ ಮಾಡಿದ್ದೀರಿ ಎಂಬುದು ಮುಖ್ಯವಲ್ಲ, ಚುನಾವಣಾ ಸಮಯದಲ್ಲಿ ನಮಗೆ ಎಷ್ಟು ಹಣ ಕೊಡುತ್ತೀರಿ ಎಂಬುದು ಮುಖ್ಯ! ಎಷ್ಟು ಹೆಂಡ ಕುಡಿಸುತ್ತೀರಿ ಎಂಬುದು ಮುಖ್ಯ !" ಇಂದು ಯಶಸ್ವಿ ಉದ್ಯಮಿಯಾದ ಅವರು ತಮ್ಮ ಸಾರಿಗೆ, ಬಸ್ ಮತ್ತು ಪತ್ರಿಕೆಗಳ ಮೂಲಕ ಸಹಸ್ರಾರು ಕುಟುಂಬಗಳಿಗೆ ಜೀವನೋಪಾಯ ಕಲ್ಪಿಸಿದ ಅನ್ನದಾತರಾಗಿದ್ದಾರೆ. ಹುಬ್ಬಳ್ಳಿ ಗ್ರಾಮೀಣ, ಹುಬ್ಬಳ್ಳಿ ನಗರ, ಕಲಘಟಗಿ ತಾಲ್ಲೋಕುಗಳಲ್ಲಿ ವಿ.ಆರ್.ಎಲ್ ಸಂಸ್ಥೆಯ ಉದ್ಯೋಗಿಗಳು ನೆಲೆಸಿದ್ದಾರೆ. ಆ ಜನರು ಓಟು ಕೊಟ್ಟಿದ್ದರೂ ವಿಜಯ ಸಂಕೇಶ್ವರರು ಬಹುಮತ ಹೊಂದಿ ವಿಧಾನ ಸಭಾ ಅಭ್ಯರ್ಥಿಯಾಗಿ ಆಯ್ಕೆಯಾಗಿ ಬರಬೇಕಿತ್ತು. ಆದರೆ ಚುನಾವಣಾ

ಪ್ರಕ್ರಿಯೆಯಲ್ಲಿ ಅವರು 9000 ಮತ ಪಡೆದುದನ್ನು ನೋಡಿದರೆ ಅನ್ನವಿಕ್ಕುವ ಮನೆಗೆ ಕನ್ನವಿಕ್ಕುವ ವಿಶ್ವಾಸ ದ್ರೋಹಿಗಳೇ ಇಂದು ಜಾಸ್ತಿ ಇದ್ದಾರೆ ಎನ್ನಿಸಿ ವಿಷಾದವೆನಿಸದೆ ? ಜೀವನ ಪರ್ಯಂತರ ಉದ್ಯೋಗ ನೀಡಿದವರಿಗಿಂತಲೂ ಚುನಾವಣಾ ಸಮಯದಲ್ಲಿ ನೂರು, ಇನ್ನೂರು ಮತ್ತು ಹೆಂಡ ಕೊಟ್ಟ ವ್ಯಕ್ತಿಗಳೇ ಹಿತಚಿಂತಕರೆಂದು ಭಾವಿಸುವ ಮತದಾರರು ಇರುವ ಈ ರಾಜ್ಯ ಮತ್ತು ರಾಷ್ಟ್ರ ಒಳ್ಳೆಯ ಭವಿಷ್ಯ ಹೊಂದಬಹುದೆ ? ಧಾರವಾಡ ಮತದಾರರು ಅಪ್ರಬುದ್ಧರು ಎಂದು ನಾನು ಅಂದುದಕ್ಕೆ ಮತದಾರರ ಆಕ್ರೋಶಕ್ಕೆ ಒಳಗಾಗಿ 'ಸೋಲಬೇಕಾಯಿತು ಎಂದು ಕನ್ನಡ ಪ್ರಭಾ ವರದಿ ಮಾಡಿತ್ತು. ನಾನು ಆಡಿದ ಮಾತಿನ ಹಿನ್ನೆಲೆಯೇ ಬೇರೆ. ಮತ್ತು ಚುನಾವಣೆಯ ಮರುದಿನ ನಾನು ಹೀಗೆ ಅಂದುದು. ಈಗ ಹೇಳುವುದೇ ಆದರೆ, ಆದರ್ಶವಾದಿಗಳು, ಸಾತ್ವಿಕರು, ಸಜ್ಜನರು, ತ್ಯಾಗಿಗಳು, ದೇಶ ಸೇವೆಯ ಕಳಕಳಿಯಿಂದ ರಾಜಕೀಯ ಕ್ಷೇತ್ರಕ್ಕೆ ಬಂದವರೂ ಆದ ನಮ್ಮಂತಹವರ ಚಿಂತನೆಯನ್ನೇ ಅರ್ಥ ಮಾಡಿಕೊಳ್ಳದೆ ತೀರಾ ಕ್ಷುಲ್ಲಕವಾಗಿ ಒಂದು ನೋಟಿಗಾಗಿ ಓಟು ಮಾರಿಕೊಂಡು ಅತಂತ್ರ ಸರಕಾರಗಳನ್ನು ಹುಟ್ಟುಹಾಕುವ ಕನ್ನಡಿಗ ಮತ್ತು ಭಾರತೀಯ ಮತದಾರರನ್ನು ಪ್ರಬುದ್ಧರೆಂದು ಕರೆಯಲು ಸಾಧ್ಯವೆ ? ಹೆಚ್ಚು ಹಣವನ್ನು ಸೂರೆ ಮಾಡಿ ಗೆದ್ದು ಬಂದವನು ಅದಕ್ಕೆ ಹತ್ತುಪಟ್ಟುಗಳಿಸುವ ಸ್ವಾರ್ಥಿಯಾಗುತ್ತಾನೆ ಎಂಬ ತಿಳುವಳಿಕೆ ಜನರಲ್ಲಿ ಬೇಡವೆ ?

ತಮ್ಮ ಅಧಿಕಾರದ ಅವಧಿಯಲ್ಲಿ ಅತ್ಯಂತ ನಿಸ್ಪೃಹತೆ, ಕಳಕಳಿಯಿಂದ ಮತಕ್ಷೇತ್ರಕ್ಕೆ ಅನುದಾನದ ಹಣ ವಿನಿಯೋಗಿಸಿದವರಿಗಿಂತಲೂ ತಮ್ಮ ಸ್ವಂತಕ್ಕೆ ಆಸ್ತಿ ಮಾಡಿಕೊಂಡಂತಹ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಮತದಾರರನ್ನು ಪ್ರಬುದ್ಧರೆಂದು ಕರೆಯಲು ಸಾಧ್ಯವೆ ? ತಮಗೆ ಜೀವನೋಪಾಯ ನೀಡಿದವರಿಗೇ ವಿಶ್ವಾಸ ದ್ರೋಹ ಮಾಡಿ ತನುವಿನಲ್ಲಿ ಒಂದು, ಮನದಲ್ಲಿ ಇನ್ನೊಂದು ಲೆಕ್ಕಾಚಾರ ಮಾಡುವ ಕೃತಘ್ನರನ್ನು ಪ್ರಬುದ್ಧರೆಂದು ಕರೆಯಬಹುದೆ ?

ಅಂತೂ ಇಂಥ ಒಂದು ವಿಲಕ್ಷಣ ಅನುಭವ ನೀಡಿದ ಪ್ರಸಂಗ ಚುನಾವಣೆ!

ಭದ್ರಾವತಿಯಲ್ಲಿ ಬಸವ ಮೂರ್ತಿ ಸ್ಥಾಪನೆ

ರಾಷ್ಟ್ರೀಯ ಬಸವ ದಳದ ಭದ್ರಾವತಿ ಘಟಕವು ಸುಂದರವಾದ ಬಸವ ಮಂಟಪವನ್ನು ಕಟ್ಟಿಸಿದ್ದು ಇದರ ಪ್ರಾರಂಭೋತ್ಸವವು ದಿ. 1-4-2004 ರಂದು ನೆರವೇರಿತು. ಬಸವ ಧರ್ಮ ಪೀಠದ ಅಧ್ಯಕ್ಷರಾದ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿಯವರು ಬಸವ ಮಂಟಪವನ್ನು ಉದ್ಘಾಟಿಸಿದ್ದಲ್ಲದೆ ವಿಶ್ವಗುರು ಬಸವಣ್ಣನವರ ಸುಂದರವಾದ ಅಮೃತ ಶಿಲಾ ಪುತ್ಥಳಿಯನ್ನು ಪ್ರತಿಷ್ಠಾಪಿಸಿ ಚಿತ್ಕಳೆಯನ್ನು ತುಂಬಿದರು. ಪ್ರತಿಷ್ಠಾಪನೆಯ ನಂತರ ಧರ್ಮಚಿಂತನ ಗೋಷ್ಠಿ ನಡೆಯಿತು. ಶಾಸಕರಾದ ಸಂಗಮೇಶ್ವರ ಅವರು ಅತಿಥಿಗಳಾಗಿ ಭಾಗವಹಿಸಿದ್ದರು. ಸಂಜೆ ಧ್ಯಾನಿಗಳನ್ನು ಸತ್ಕರಿಸಲಾಯಿತು.

ವರದಿ - ಗಂಗಾಂಬಿಕೆ ಬಸವರಾಜ್

★ ಚುನಾವಣೆ ಮತ್ತು ಕಲ್ಯಾಣ ಪರ್ವಗಳಿಂದಾಗಿ ಮೇ ಸಂಚಿಕೆ ಪ್ರಕಟಗೊಂಡಿಲ್ಲ. ಅದಕ್ಕಾಗಿ ಜೂನ್ ಸಂಚಿಕೆಯಲ್ಲಿ ಹೆಚ್ಚುವರಿ ಪುಟಗಳನ್ನು ಕೊಡಲಾಗಿದೆ.

ಹರಿದು ಬಂದ ಬಸವ ಭಕ್ತರ ಮಹಾಪೂರ
ಅದ್ಭುತ ಯಶಸ್ಸು ಕಂಡ ಮೂರನೆಯ ಕಲ್ಯಾಣ ಪರ್ವ

12ನೆಯ ಶತಮಾನದಲ್ಲಿ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗಿನ ಎಲ್ಲ ಭೂಭಾಗಗಳಿಂದ ಸತ್ಯದ ಹಂಬಲಿಗರನ್ನು ಆಕರ್ಷಿಸಿದ ಬಸವ ಕಲ್ಯಾಣವು ಶರಣ ಭೂಮಿ. ಅನುಭವ ಮಂಟಪದ ಮೂಲಕ ವಿಶ್ವಗುರು ಬಸವಣ್ಣನವರು ಮನುಕುಲದ ಸ್ವಾತಂತ್ರ್ಯ-ಸಮಾನತೆ-ಸಹೋದರತೆ ಸಾರಿದ ಕ್ರಾಂತಿ ಭೂಮಿ. ಬಸವ ತತ್ತ್ವಾಭಿಮಾನಿಗಳನ್ನೆಲ್ಲ ಒಂದೆಡೆ ಸೇರಿಸುವ ಉದ್ದೇಶದಿಂದ ಪ್ರತಿ ವರ್ಷದ ವಿಶ್ವ ಕಾಯಕ ದಿನದ ಸ್ಮರಣಾರ್ಥ ಮೇ 1, 2 ಮತ್ತು 3 ರಂದು ಕಲ್ಯಾಣ ಪರ್ವ ಎಂಬ ಸಮಾವೇಶವು ನಡೆಯುತ್ತಿದ್ದು 2002ರ ಮೇ 1 ರಂದು ಮೊದಲನೆಯ ಕಲ್ಯಾಣ ಪರ್ವವು ಆರಂಭವಾಯಿತು. ಇದೇ ಮೇ 1, 2 ಮತ್ತು 3 ರಂದು ಮೂರನೆಯ ಕಲ್ಯಾಣ ಪರ್ವವು ಯಶಸ್ವಿಯಾಗಿ ಜರುಗಿತು.

ಉದ್ಘಾಟನೆ: ಮೇ 1 ರಂದು ಬೆಳಗಿನ 10-30 ಕ್ಕೆ ಉದ್ಘಾಟನೆಗೊಂಡ ಕಲ್ಯಾಣ ಪರ್ವದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು "ವ್ಯಕ್ತಿ ಮತ್ತು ಸಮಾಜವನ್ನು ಸಂಸ್ಕರಿಸಿ, ಸುವ್ಯವಸ್ಥಿತವಾಗಿ ಸುಂದರವಾಗಿ ಎತ್ತಿ ಹಿಡಿಯುವ ತತ್ತ್ವ ವಿಶೇಷವೇ ಧರ್ಮ. ಸಂಸ್ಕಾರ ನೀಡಿ, ಸಂಘಟಿಸಿ, ವಿಶ್ವ ಸಹೋದರತ್ವವನ್ನು ಬೆಳೆಸುವ ವಿಶ್ವಧರ್ಮವನ್ನು ವಿಶ್ವಗುರು ಬಸವಣ್ಣನವರು ನಮಗೆ ಕೊಟ್ಟಿದ್ದಾರೆ. ನಮ್ಮ ಧರ್ಮ ಸಂಹಿತೆಯಾಗಿರುವ ವಚನ ಸಾಹಿತ್ಯವು ರಚನೆಯಾಗಿದ್ದು ಇದೇ ಶರಣ ಭೂಮಿಯಲ್ಲಿ ಆದ್ದರಿಂದ ಬಸವ ಕಲ್ಯಾಣವು ನಮಗೆಲ್ಲಾ ತವರುಮನೆ, ಧರ್ಮ ಪ್ರಜ್ಞೆಯ ಜೊತೆಗೆ ರಾಷ್ಟ್ರ ಪ್ರಜ್ಞೆಯನ್ನು ಮೂಡಿಸುವುದೇ **'ಕಲ್ಯಾಣ ಪರ್ವ'**ದ ಮುಖ್ಯ ಉದ್ದೇಶ" ಎಂದು ನುಡಿದರು.

ವಿಶ್ವಗುರು ಬಸವಣ್ಣನವರ ತತ್ತ್ವ ಸಿದ್ಧಾಂತಗಳು ಇಂದು ಇಡೀ ಜಗತ್ತಿಗೆ ಅತ್ಯವಶ್ಯಕವಾಗಿವೆ. ಪಟ್ಟಭದ್ರರು ಇದನ್ನು ಹತ್ತಿಕ್ಕಲು ಎಷ್ಟೇ ಪ್ರಯತ್ನ ನಡೆಸಿದರೂ ಈ ಮಣ್ಣಿನಲ್ಲಿ ಹುದುಗಿರುವ ಬಸವಾದಿ ಪ್ರಮಥರ ದೈವೀ ಸಂಕಲ್ಪದ ತರಂಗಗಳು ಇನ್ನಷ್ಟು ತೀವ್ರವಾಗಿ ಜಗತ್ತಿನಾದ್ಯಂತ **'ಬಸವ ಧರ್ಮ'** ಹಬ್ಬಲಿದೆ. ಜಾತಿ, ಮತ, ಪಂಥಗಳ ಭೇದವಿಲ್ಲದೆ, ಇವನಮ್ಮವ, ಇವನಮ್ಮವ, ಇವನಮ್ಮವ ಎಂದು ಎಲ್ಲರನ್ನು ಇಂಬಿಟ್ಟುಕೊಳ್ಳುವ ಸಮತಾವಾದಿ ಸಮಾಜ ನಿರ್ಮಾಣ ಮಾಡುವುದೇ ಕಲ್ಯಾಣ ಪರ್ವದ ಇನ್ನೊಂದು ಪ್ರಮುಖ ಗುರಿಯಾಗಿದೆ ಎಂದು ಮಾತಾಜಿ ವಿವರಿಸಿದರು. ಕಲ್ಯಾಣ ಪರ್ವವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಅಮೇರಿಕಾದ ಯುನಿವರ್ಸಲ್ ಸೆಂಟರ್ ಆಫ್ ಬಸವ ಫಿಲಾಸಫಿಯ ಮುಖ್ಯಸ್ಥೆ ಶರಣೆ. ಯೋಗೀಶ್ವರಿ ಅವರು ಮಾತನಾಡುತ್ತ - ಕಲ್ಯಾಣ ಪರ್ವ ಹಾಗೂ ಶರಣ ಮೇಳಗಳು ಗುರು ಬಸವಣ್ಣನವರ ದಿವ್ಯ ಸಂಕಲ್ಪದಂತೆ ನಡೆಯುತ್ತಿವೆ. ಆದಿ ಶರಣರ ಪ್ರತಿನಿಧಿಯಾಗಿಯೇ ಪೂಜ್ಯ ಮಾತಾಜಿಯವರು ಅವತರಿಸಿ ಬಂದು ಶರಣರ ಭಕ್ತಿ ಸಾಮ್ರಾಜ್ಯದ ಪುನಃ ಸ್ಥಾಪನೆಯನ್ನು ಮಾಡುತ್ತಿದ್ದಾರೆ ಎಂದು ತಮ್ಮ ದೈವೀ ಅನುಭವ ಹಂಚಿಕೊಂಡರು. ಗುರು ಬಸವಣ್ಣನವರು ಅಧ್ಯಾತ್ಮದ ತಳಹದಿಯ ಮೇಲೆ ಈ ಲಿಂಗಾಯತ ಧರ್ಮ ಸಂಸ್ಥಾಪಿಸಿದರು. ತಮ್ಮ ಅಂತರಂಗದಲ್ಲಿಯೇ ಇರುವ ಜೀವನಾನುಭವವನ್ನು ಎಲ್ಲ ಮಾನವರಿಗೂ ಮಾಡಿಸಿದರು ಎಂದರು. ಪೂಜ್ಯ ಶ್ರೀ ಜಗದ್ಗುರು

ಮಾತೆ ಗಂಗಾದೇವಿ, ಕನ್ನಡ ನಾಡು ಪಕ್ಷದ ಧುರೀಣರಾದ ಸುರೇಂದ್ರ ದಂಡೆ, ಶರಣಬಸಪ್ಪ ಖೇಣಿ, ಶಿವಪ್ಪ ಹೊಳಕುಂದೆ, ಶಿವರಾಜ ಪಾಟೀಲ ಅತಿವಾಳ, ಲಿಂಗಾಯತ ಧರ್ಮ ಮಹಾಸಭಾ ಅಧ್ಯಕ್ಷರಾದ ಎಸ್. ಪುಟ್ಟರುದ್ರಪ್ಪ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಮಾಜಿ ಸಚಿವರಾದ ಸುಭಾಷ್ ಅಷ್ಟೂರೆ ಅಧ್ಯಕ್ಷತೆ ವಹಿಸಿದ್ದರು.

ದಿ. 1 ರಂದು ಸಾಯಂಕಾಲ 7 ಘಂಟೆಗೆ ಜರುಗಿದ ರಾಷ್ಟ್ರೀಯ ಭಾವೈಕ್ಯತಾ ಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿ - ಧರ್ಮ ಶ್ರದ್ಧೆಯ ಜೊತೆಗೆ ರಾಷ್ಟ್ರೀಯ ಪ್ರಜ್ಞೆ ಮೈಗೂಡಿಸಿಕೊಳ್ಳಬೇಕು. ಬಸವ ಧರ್ಮೀಯರಲ್ಲಿ ಸ್ವಧರ್ಮನಿಷ್ಠೆಯ ಜೊತೆಗೆ ರಾಷ್ಟ್ರ ಭಕ್ತಿಯನ್ನು ಬೆಳೆಸುವುದೇ **'ಕಲ್ಯಾಣ ಪರ್ವ'**ದ ಉದ್ದೇಶ ಎಂದು ವಿವರಿಸಿದರು - ಜಗದ್ಗುರು ಮಾತೆ ಮಹಾದೇವಿಯವರು ತಮ್ಮ ಜೀವನದುದ್ದಕ್ಕೂ ನುಡಿದಂತೆ ನಡೆದಿದ್ದಾರೆ, ನಡೆದಂತೆ ಬರೆದಿದ್ದಾರೆ. ಬದುಕು-ಬರಹ ಒಂದಾಗಿರುವ ಧೀಮಂತ ಚೇತನ ಮಾತಾಜಿ ಎಂದು ವಿವರಿಸಿದರು.

'ಬಸವಣ್ಣನವರ ಕಲ್ಯಾಣ ರಾಜ್ಯದ ಪರಿಕಲ್ಪನೆ' ವಿಷಯ ಕುರಿತು ಪ್ರವಚನ ನೀಡಿದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ಅವರು - ರೂಢಿ, ಸಂಪ್ರದಾಯಗಳಿಂದ ಕೂಡಿದ ಪುರೋಹಿತಶಾಹಿ ವ್ಯವಸ್ಥೆಯನ್ನು ತೀವ್ರವಾಗಿ ಖಂಡಿಸಿ ಅವ್ಯವಸ್ಥೆಯ ಪರಿವರ್ತನೆಗಾಗಿ ಪ್ರಾಮಾಣಿಕ ಪ್ರಯತ್ನಗೈದು ಹೊಸ ಧರ್ಮವನ್ನು ನೀಡಿದ ದ್ರಷ್ಟಾರರು ವಿಶ್ವಗುರು ಬಸವಣ್ಣನವರು, ರೂಢಿಗತವಾಗಿದ್ದ ಹೋಮ-ಹವನ, ಯಜ್ಞ-ಯಾಗವನ್ನು ಖಂಡಿಸಿ ಸಂಪ್ರದಾಯಕ್ಕಿಂತ ಸತ್ಯ ಶ್ರೇಷ್ಠ ಎಂದು ತೋರಿಸಿದರು ಎಂದರು. ದೇವರು ಮತ್ತು ಧರ್ಮದ ಹೆಸರಿನಲ್ಲಿ ಹೋತ, ಕುರಿ, ಕೋಣಗಳನ್ನು ಬಲಿ ಕೊಡುವುದು ಮಹಾನ್ ಅಪರಾಧ. ತಿನ್ನುವ ಪದಾರ್ಥಗಳಾಗಿರುವ ಹಾಲು-ತುಪ್ಪದಿಂದ ಅಭಿಷೇಕ ಮಾಡುವದನ್ನು ಸಹ ಬಸವ ಧರ್ಮವು ನಿಷಿದ್ಧಗೊಳಿಸಿದೆ. ವೈಚಾರಿಕತೆಯ ತಳಹದಿಯ ಮೇಲೆ ಜಾತಿ, ವರ್ಣ, ವರ್ಗ ರಹಿತವಾದ ಧರ್ಮ ಸಹಿತವಾದ ಕಲ್ಯಾಣ ರಾಜ್ಯ ನಿರ್ಮಾಣ ವಿಶ್ವಗುರು ಬಸವೇಶ್ವರರ ಧ್ಯೇಯವಾಗಿತ್ತು. ಅದನ್ನವರು ಕಟ್ಟಿ ತೋರಿಸಿದರು ಎಂದು ವಿವರಿಸಿದರು. ಧರ್ಮ ಸ್ವೀಕಾರ ಮಾಡುವುದು ಪ್ರತಿಯೊಬ್ಬ ವ್ಯಕ್ತಿಯ ಮೂಲಭೂತ ಹಕ್ಕು ಅದನ್ನು ಬೇಡ ಎನ್ನಲು ಯಾರಿಗೂ ಹಕ್ಕಿಲ್ಲ ಎಂದು ಹೇಳಿದ ಮಾತಾಜಿಯವರು 'ಮತಾಂತರ ನಿಷೇಧ'ವನ್ನು ತಾವು ತೀವ್ರವಾಗಿ ವಿರೋಧಿಸುತ್ತೇವೆ ಎಂದು ಸ್ಪಷ್ಟಪಡಿಸಿದರು. ಗುಲ್ಬರ್ಗಾ ರಾಷ್ಟ್ರೀಯ ಬಸವ ದಳದ ಅಧ್ಯಕ್ಷರಾದ ಶಂಕರಪ್ಪ ಮಹಾಂತಗೋಳ್ ಅವರು ಅಧ್ಯಕ್ಷತೆ ವಹಿಸಿದ್ದರು. ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ)ಯ ರಾಜ್ಯ ಸಮಿತಿಯ ಸಂಚಾಲಕ - ರಮೇಶ್ ಡಾಕುಳಗೆ ಅವರು ಮಾತನಾಡಿ 'ಮಾತಾಜಿಯವರು ಸತ್ಯವನ್ನು ನಿರ್ಭಿಡೆಯಿಂದ ಹೇಳುತ್ತಾರೆ. ನೈಜ ಬಸವ ತತ್ತ್ವವನ್ನು ಬಿತ್ತರಿಸುವವರು ಮಾತಾಜಿ ಒಬ್ಬರೇ ಎಂದರಲ್ಲದೆ, ಕಲ್ಯಾಣ ಪರ್ವಕ್ಕೆ ತಮ್ಮ ಸಂಪೂರ್ಣ ಬೆಂಬಲವಿದೆ' ಎಂದು ಘೋಷಿಸಿದರು. ಕನ್ನಡ ನಾಡು ಪಕ್ಷದ ಹುಲಸೂರು ವಿಧಾನ ಸಭಾ ಅಭ್ಯರ್ಥಿ ವಿಠ್ಠಲ ಡಾಕುಳಗಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದಿ. 2ರಂದು ಬೆಳಗಿನ 11 ಘಂಟೆಗೆ ಆರಂಭಗೊಂಡ 'ವಿಶ್ವ ಕಾಯಕ ದಿನ'ದ ಅಂಗವಾಗಿ 'ಶರಣ ವಂದನೆ' ಕಾರ್ಯಕ್ರಮದ ದಿವ್ಯ ಸನ್ನಿಧಿವಹಿಸಿ ಆಶೀರ್ವಚನ ನೀಡಿದ ಪೂಜ್ಯ ಶ್ರೀ

ಮಹಾಜಗದ್ಗುರು ಮಾತೆ ಮಹಾದೇವಿ ಅವರು ಶರಣಭೂಮಿ ಬಸವ ಕಲ್ಯಾಣದಲ್ಲಿ ವಿಶ್ವಕಾಯಕದಿನದಂದು ಆಯೋಜಿಸಲ್ಪಡುವ ಕಲ್ಯಾಣ ಪರ್ವದಲ್ಲಿ ಪ್ರತಿಯೊಬ್ಬ ಬಸವ ಧರ್ಮೀಯನೂ ಭಾಗವಹಿಸಬೇಕು ಎಂದು ಕರೆ ನೀಡಿದರು. ಬಸವ ಧರ್ಮೀಯರು ಪ್ರತಿವರ್ಷವೂ ಕಲ್ಯಾಣ ಪರ್ವದಲ್ಲಿ ಭಾಗವಹಿಸಿ ಆರು ಜನ ಶರಣರಿಗೆ ಬಸವ ರಕ್ಷೆ ಕಟ್ಟಿ ಪರಸ್ಪರ ಶುಭ ಹಾರೈಕೆಯ ವಿನಿಮಯ ಮಾಡಿಕೊಳ್ಳಬೇಕು ಈ ಸತ್ಪರಂಪರೆಯನ್ನು ಇಂದಿನಿಂದ ಪ್ರಾರಂಭಿಸುತ್ತಿದ್ದೇವೆ ಎಂದು ಸಾಂಕೇತಿಕವಾಗಿ ಷಡ್ ಗಣಾಧೀಶರಿಗೆ ಬಸವೇಶ್ವರರ ಭಾವಚಿತ್ರವಿರುವ ರಾಖಿಯನ್ನು ಕಟ್ಟಿ ಶುಭಾಶೀರ್ವಾದ ಮಾಡಿದರು. ಜ್ಯೋತಿಯನ್ನು ಹಚ್ಚುವ ಮೂಲಕ ಪೂಜ್ಯ ಮಾತಾಜಿ ಗೋಷ್ಠಿಯನ್ನು ಉದ್ಘಾಟಿಸಿದರು. ನಂತರ ಜಗದ್ಗುರು ಮಾತೆ ಗಂಗಾದೇವಿ, ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿ, ಪೂಜ್ಯ ಶ್ರೀ ಚನ್ನಬಸವರಾಜ ಸ್ವಾಮೀಜಿ, ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮೀಜಿ ಮತ್ತು ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ ಜ್ಯೋತಿ ಹಚ್ಚಿದರು. ಸಾಮೂಹಿಕ ಪ್ರಾರ್ಥನೆಯನ್ನು ಪೂಜ್ಯ ಮಾತಾಜಿಯವರು ನಡೆಸಿಕೊಟ್ಟರು. ಸಹಸ್ರಾರು ಶರಣರು ಶರಣ ವಂದನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ನಂತರ ರಾಖಿ ಕಟ್ಟಿ ಶರಣ-ಶರಣೆಯರು ಶುಭಾಶಯ ವಿನಿಮಯ ಮಾಡಿಕೊಂಡರು.

ಬಸವ ಧರ್ಮ ಪೀಠದ ಪೂಜ್ಯರಾದ ಮಾತೆ ಮಂಗಳಾದೇವಿ ಹಾಗೂ ಮಾತೆ ನೀಲಗಂಗಾದೇವಿ ಅವರು ಮೊದಲಿಗೆ ಗುರು ಬಸವಣ್ಣನವರ ಪೂಜೆ ನಡೆಸಿಕೊಟ್ಟರು. ಷಡ್ ಗಣಾಧೀಶರು ಶ್ರೀ ಶಿವಯೋಗಿ ಸಿದ್ಧರಾಮೇಶ್ವರ ವಿರಚಿತ ತ್ರಿವಿಧಿಯ ಪಠಣ ಮಾಡಿದರು. ಅರುಣ್ ಕುಮಾರ್ ಪಾಟೀಲರು ಮಾತನಾಡಿ ಅದ್ಭುತ ಯಶಸ್ಸು ಕಾಣುತ್ತಿರುವ ಕಲ್ಯಾಣ ಪರ್ವ ಪೂಜ್ಯ ಮಾತಾಜಿಯವರ ಅಪೂರ್ವ ಅಧ್ಯಾತ್ಮ, ಜ್ಞಾನ-ಕ್ರಿಯಾ ಶಕ್ತಿಗಳ ಪರಿಣಾಮವಾಗಿದೆ ಎಂದು ನುಡಿದರು. ಬಸವರಾಜ ಭರಗುಂಡಿ, ಚಂದ್ರಮ್ಮ ಪಾಟೀಲ ಗಾದಗಿ, ಸುರೇಶ ತುಮಕೂರು, ವಿಜಯಪುರದ ಬಸವರಾಜೇಂದ್ರಪ್ಪನವರು ಅತಿಥಿಗಳಾಗಿ ಭಾಗವಹಿಸಿದ್ದರು.

''ಜಾತಿಯ ಅಡ್ಡಗೋಡೆಯನ್ನು ತೆಗೆದುಹಾಕಿ ಅಖಂಡ ಶರಣ ಸಮಾಜ ರೂಪಿಸಲು ಪೂರಕವಾಗಿರುವ ಇಷ್ಟಲಿಂಗವನ್ನು ಧರ್ಮ ಲಾಂಛನವನ್ನಾಗಿ ಹೊಂದಿರುವ ಲಿಂಗಾಯತ ಧರ್ಮ ಅಂದರೆ ಬಸವ ಧರ್ಮವು ಸ್ವತಂತ್ರ ಹಾಗೂ ಪರಿಪೂರ್ಣ ಧರ್ಮವಾಗಿದೆ '' ಎಂದು ಮಹಾಜಗದ್ಗುರು ಮಾತೆ ಮಹಾದೇವಿಯವರು ಪ್ರತಿಪಾದಿಸಿದರು. ಅವರು ಮೇ 2 ರಂದು ಸಂಜೆ ನಡೆದ ಧರ್ಮ ಚಿಂತನಗೋಷ್ಠಿಯ ದಿವ್ಯ ಸಾನ್ನಿಧ್ಯವಹಿಸಿ ಆಶೀರ್ವಚನ ನೀಡುತ್ತಿದ್ದರು.

12ನೇ ಶತಮಾನದಲ್ಲಿ ಜಾತಿ, ವರ್ಣ, ವರ್ಗ ರಹಿತವಾದ ಆದರ್ಶ ಶರಣ ಸಮಾಜವನ್ನು ಗುರು ಬಸವಣ್ಣನವರು ರೂಪಿಸಿದರು. ಧರ್ಮ ಸಂಸ್ಕಾರ, ಅಭಿವ್ಯಕ್ತಿ ಸ್ವಾತಂತ್ರ್ಯಗಳು ಬಸವ ಧರ್ಮದ ಜೀವಾಳ ಎಂದು ಮಾತಾಜಿ ವಿವರಿಸಿದರು. ಚಿಂತನ ಗೋಷ್ಠಿಯನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಮನಸೂರಿನ ರೇವಣಸಿದ್ಧೇಶ್ವರ ಮಹಾಮಠದ ಪೂಜ್ಯ ಶ್ರೀ ಬಸವರಾಜ ದೇವರು ಮಾತನಾಡಿ ' ಬಸವ ಧರ್ಮವು 20ನೇ ಶತಮಾನದಲ್ಲಿ ಪ್ರಜ್ವಲ್ಯಮಾನವಾಗಿ ಬೆಳಗಲು ಮಹಾಜಗದ್ಗುರು ಮಾತೆ ಮಹಾದೇವಿ ಅವರೇ ಕಾರಣರಾಗಿದ್ದಾರೆ. ಅವರ ಅದ್ಭುತ ಜ್ಞಾನ, ಕ್ರಿಯಾ, ಆಧ್ಯಾತ್ಮ ಶಕ್ತಿಗಳ ಸಂಗಮದಿಂದ ಬಸವ ಧರ್ಮ ಎಲ್ಲೆಡೆ ಬೆಳಗುತ್ತಿದೆ ಎಂದು ನುಡಿದರು.

ಮುಖ್ಯ ಉಪನ್ಯಾಸ ನೀಡಿದ ಕೆ.ಎ.ಎಸ್. ಅಧಿಕಾರಿ ಎಸ್. ದಿವಾಕರ್ ಮಾತನಾಡಿ ''ಬಸವ ಧರ್ಮಕ್ಕೂ ವೀರಶೈವ ಧರ್ಮಕ್ಕೂ ಯಾವುದೇ ರೀತಿಯ ಸಂಬಂಧವಿಲ್ಲ - ಬಸವ ಧರ್ಮವು ಬೇರಾವುದೇ ಧರ್ಮದ ಅಂಗವೂ ಅಲ್ಲ, ವಚನ ಸಾಹಿತ್ಯವನ್ನೇ ತನ್ನ ಸಂವಿಧಾನವನ್ನಾಗಿಸಿಕೊಂಡು ವೈಚಾರಿಕತೆಯ ಬುನಾದಿಯ ಮೇಲೆ ರೂಪುಗೊಂಡ ಅದ್ಭುತ ಧರ್ಮ '' ಎಂದೂ ದಿವಾಕರ್ ವಿವರಿಸಿದರು. ಕೃಷಿ ಅಧಿಕಾರಿ ಸಿ.ಬಿ. ಬೇವನೂರು, ಎಲ್.ಐ.ಸಿ. ಅಧಿಕಾರಿ ಕೆ. ಬಸವರಾಜ, ಉಪನ್ಯಾಸಕಿ ವಿಜಯಾ ನಂಜುಂಡಪ್ಪ, ಭದ್ರಾವತಿಯ ಗಂಗಾಂಬಿಕಾ ಬಸವರಾಜ, ಮಾತನಾಡಿ ಪೂಜ್ಯ ಮಾತಾಜಿಯವರ ಆಧ್ಯಾತ್ಮಿಕ ಸಂಘಟನಾತ್ಮಕ ಶಕ್ತಿಯಿಂದ ಬಸವ ಕಲ್ಯಾಣ ನಮಗೆಲ್ಲಾ ಇಂದು ತವರು ಮನೆಯಾಗಿದೆ, ದೂರದೂರದಿಂದ ಬಂದ ನಮ್ಮಲ್ಲಿ ಧಾರ್ಮಿಕ ಸಹೋದರತ್ವ ಬೆಸೆಯಲು ಕಾರಣವಾಗಿದೆ ಎಂದು ನುಡಿದರು.

ಧರ್ಮಚಿಂತನ ಗೋಷ್ಠಿ : ಮೇ 3 ರಂದು ಬೆಳಗಿನ 10-30ಕ್ಕೆ ಏರ್ಪಾಟಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿಯವರ ಶೂನ್ಯಪೀಠಾರೋಹಣ ಸಮಾರಂಭದಲ್ಲಿ ಅಸಂಖ್ಯಾತ ಭಕ್ತರ ಹರ್ಷೋದ್ಗಾರ, ಜಯಕಾರಗಳ ಮಧ್ಯೆ ಪೂಜ್ಯರು ಪೀಠಾರೋಹಣಗೈದು ಸಂದೇಶ ನೀಡಿದರು. ಇದಕ್ಕೂ ಮೊದಲು ಸ್ವಾಮೀಜಿ ಬಸವ ಧ್ವಜಾರೋಹಣ ನೆರವೇರಿಸಿದರು. ಆದಿ ಪ್ರಮಥ ವಿಶ್ವಗುರು ಬಸವಣ್ಣನವರ ಪುತ್ಥಳಿಯೊಂದಿಗೆ ಆದಿ ಷಡ್‌ಗಣಾಧೀಶರ ಭಾವಚಿತ್ರಗಳನ್ನು ಶೂನ್ಯಪೀಠದ ಮೇಲಿರಿಸಿ ಪೂಜೆ ಸಲ್ಲಿಸಲಾಯಿತು. ನಂತರ ಮಹಾಜಗದ್ಗುರು ಲಿಂಗೈಕ್ಯ ಪೂಜ್ಯ ಶ್ರೀ ಲಿಂಗಾನಂದ ಮಹಾಸ್ವಾಮಿಗಳವರಿಗೆ ಪೂಜೆ ಸಲ್ಲಿಸಿ ಶ್ರೀ ಅಲ್ಲಮಪ್ರಭು ಸ್ವಾಮೀಜಿ ಪೀಠಾರೋಹಣಗೈದರು.

ಪೀಠಾರೋಹಣ ಕಾರ್ಯಕ್ರಮವನ್ನು ಉದ್ಘಾಟಿಸಿದ ಧಾರವಾಡ ಸಮೀಪದ ಮನಸೂರಿನ ಶ್ರೀ ಜಗದ್ಗುರು ರೇವಣ ಸಿದ್ಧೇಶ್ವರ ಮಹಾಮಠದ ಪೀಠಾಧಿಪತಿ ಪೂಜ್ಯ ಶ್ರೀ ಬಸವರಾಜ ದೇವರು ಮಾತನಾಡಿ ''ಲಿಂಗಾಯತ ಸಮಾಜ ಇಂದು ಅತ್ಯಂತ ಸಂಕೀರ್ಣ ಸ್ಥಿತಿಯಲ್ಲಿದ್ದು ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರು ಮಾತ್ರ ಈ ಸಮಾಜಕ್ಕೆ ನವೀನ ಆಶಾಕಿರಣವಾಗಿದ್ದಾರೆ, ಈ ಹಿಂದೆ ಸಜ್ಜಲಗುಡ್ಡದ ಶರಣಮ್ಮನವರಿಗೆ ವಿಪರೀತ ಕಾಟ ಕೊಡುತ್ತಿದ್ದ ಈ ಜಾತಿವಾದಿಗಳು-ದುಷ್ಟ ಶಕ್ತಿಗಳು ಈಗ ಮಾತಾಜಿಯವರಿಗೂ ತೊಂದರೆ ಕೊಡುತ್ತಿವೆ. ಆದರೆ ಪೂಜ್ಯ ಮಾತಾಜಿಯವರ ಅಧ್ಯಾತ್ಮ ಶಕ್ತಿಯ ಎದುರು ಯಾವ ದುಷ್ಟ ಶಕ್ತಿಯ ಆಟವೂ ನಡೆಯದು - ಮುಂದೆಯೂ ನಡೆಯುವುದಿಲ್ಲ ಅವರಿಗೆ ಬಸವ ತಂದೆಯ ಶ್ರೀರಕ್ಷೆ ಇದೆ'' ಎಂದು ನುಡಿದರು. ''ಕಲ್ಯಾಣ ಪರ್ವಕ್ಕೆ ಅಡ್ಡಿ ಪಡಿಸಲು ಯತ್ನಿಸುವವರು ಮಹಾಪಾಪಿಗಳು ಎಂದು ಕಟುವಾಗಿ ಟೀಕಿಸಿದ ಸ್ವಾಮೀಜಿ ಶರಣರಿಗೆ ಕಿರುಕುಳ ನೀಡಿದವರು ದೇವರು ನೀಡುವ ಶಿಕ್ಷೆಯನ್ನು ಅನುಭವಿಸ ಬೇಕಾಗುತ್ತದೆ'' ಎಂದು ಗುಡುಗಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರು ''ಗುರುತ್ವ ಜಾತಿಯಿಂದ ಬರದು, ಅರ್ಹತೆ, ಭಕ್ತಿ, ಜ್ಞಾನ, ವೈರಾಗ್ಯದಿಂದ ಬರುತ್ತದೆ. ಜಾತಿ, ಮತ, ಪಂಥಗಳ ಭೇದವಿಲ್ಲದೆ ಅರ್ಹತೆ ಹೊಂದಿದ ಯಾವುದೇ ವ್ಯಕ್ತಿಯೂ ಗುರು - ಜಂಗಮ - ಜಗದ್ಗುರು ಆಗಬಹುದು ಎಂಬುದನ್ನು ಸಾಧಿಸಿ ತೋರಿದವರು ಶ್ರೀ ಗುರು ಬಸವಣ್ಣನವರು. ವೈದಿಕ

ವರ್ಣಾಶ್ರಮದ ಸಾಮಾಜಿಕ ವ್ಯವಸ್ಥೆಯ ಅತ್ಯಂತ ಕೀಳು ವರ್ಗದಿಂದ ಬಂದ ವೈರಾಗ್ಯ ನಿಧಿ ಅಲ್ಲಮಪ್ರಭುದೇವರನ್ನು ಬಸವಣ್ಣನವರು ಶೂನ್ಯ ಪೀಠದ ಪ್ರಥಮ ಅಧಿಪತಿಯನ್ನಾಗಿ ಮಾಡಿದರು.

ಬಸವಾದಿ ಶರಣರ ಕ್ರಾಂತಿಯು ಉತ್ಕ್ರಾಂತಿಯಾಗಿದೆ. ಜಾತಿ, ವರ್ಣ, ವರ್ಗ ರಹಿತವಾದ ಕಲ್ಯಾಣ ರಾಜ್ಯವನ್ನು ಅಂದು ಸ್ಥಾಪಿಸಿದರು. ಅಂದಿನ ಅನುಭವ ಮಂಟಪದ ಶ್ರೀ ಗುರು ಬಸವಣ್ಣನವರು ಹಾಗೂ ಶ್ರೀ ಪ್ರಭುದೇವರ ಪರಂಪರೆಯನ್ನು ಮುಂದುವರೆಸುವುದಕ್ಕಾಗಿಯೇ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿಯವರು ಶ್ರೀ ಅಲ್ಲಮಪ್ರಭುದೇವರ ಶೂನ್ಯ ಪೀಠವನ್ನು ಬಸವ ಕಲ್ಯಾಣದಲ್ಲಿ ಸ್ಥಾಪನೆ ಮಾಡಿದ್ದಾರೆ. ಅಂದಿನ ಪ್ರಭುದೇವರು ಶಿವಮೊಗ್ಗ ಜಿಲ್ಲೆಯವರು ಇಂದಿನ ಅಲ್ಲಮಪ್ರಭುಸ್ವಾಮಿಗಳು ಸಹಿತ ಶಿವಮೊಗ್ಗ ಜಿಲ್ಲೆಯವರೇ ಆಗಿರುವುದು ಸಾಂಕೇತಿಕವಾಗಿದೆ ಎಂದ ಅವರು ಪೂಜ್ಯ ಮಾತಾಜಿ ಕೇವಲ ವ್ಯಕ್ತಿಯಲ್ಲ, ಗುರು ಬಸವಣ್ಣನವರ ವಿಶೇಷ ಶಕ್ತಿಯನ್ನು ಹೊತ್ತು ಬಂದ ಬಸವಾತ್ಮಜೆಯಾಗಿದ್ದಾರೆ ಎಂದು ಪೂಜ್ಯ ಮಾತಾಜಿಯವರ ಬಹುಮುಖ ವ್ಯಕ್ತಿತ್ವ ಕುರಿತು ವಿವರಿಸಿದರು. ದಿವ್ಯ ಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದ ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ ಅವರು-ಕಲ್ಯಾಣ ಕ್ರಾಂತಿಯ ನಂತರ ಬಸವಣ್ಣನವರ ಪರಂಪರೆ ಮುಂದೆ ಸಾಗಿ ಬರಲಿಲ್ಲ ಈಗ ನಾವು ಪ್ರಭುದೇವರ ಶೂನ್ಯ ಪೀಠ ಸ್ಥಾಪಿಸುವುದರ ಮೂಲಕ ಮುಂದುವರೆಸುತ್ತಿದ್ದೇವೆ, ಇಂದು ಇಡೀ ವಿಶ್ವಕ್ಕೆ ಬಸವ ತತ್ವ ಅತ್ಯಂತ ಅಗತ್ಯವಾಗಿದೆ. ವಿಶ್ವದಾದ್ಯಂತ ಶರಣ ತತ್ವ ಪ್ರಚಾರವನ್ನು ಕೈಗೊಳ್ಳುವ ಮಹಾಮಣಿಹ ನಮ್ಮದಾಗಿದೆ ಎಂದು ಹೇಳಿದರು. ಅಮೇರಿಕಾದ ಯುನಿವರ್ಸಲ್ ಸೆಂಟರ್ ಆಫ್ ಬಸವ ಫಿಲಾಸಫಿಯ ಮುಖ್ಯಸ್ಥೆ ಶರಣೆ. ಯೋಗೀಶ್ವರಿ ತಮ್ಮ ಅನುಭವ ಹಂಚಿಕೊಂಡರು. ಅಲ್ಲಮಪ್ರಭು ಶೂನ್ಯ ಪೀಠಾರೋಹಣಗೈದ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮಿಗಳಿಗೆ ಪೂಜ್ಯ ಮಾತಾಜಿಯವರು ರುದ್ರಾಕ್ಷಿ ಕಿರೀಟ ಧಾರಣೆ ಮಾಡಿ, ಆರತಿ ಬೆಳಗಿದರು ಶರಣ-ಶರಣೆಯರ ಪುಷ್ಪವೃಷ್ಟಿ ಜಯಘೋಷ, ಬಸವ ಮಂತ್ರ ಪಠಣದೊಂದಿಗೆ ಪೀಠಾರೋಹಣ ಸಮಾರಂಭ ಮತ್ತು ಕಲ್ಯಾಣ ಪರ್ವ ಸಮಾರೋಪವು ಅದ್ದೂರಿಯಾಗಿ ನಡೆಯಿತು.

ಜನಮನ ರಂಜಿಸಿದ ರೂಪಕ ಎಲ್ಲರಿಗೂ ಬೆಲ್ಲಾದ ಕಲ್ಯಾಣ ಬಸವಯ್ಯ

ಎಲ್ಲಾ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ
ಚೆಲ್ಲಿದನು ತಂದು ಶಿವಬೆಳಕ। ನಾಡೊಳಗೆ
ಸೊಲ್ಲೆತ್ತಿ ಜನವು ಹಾಡುವದು.

ಈ ಅಪರೂಪದ ಜನಪದ ಗೀತೆಯ ತಾಳಕ್ಕೆ ತಕ್ಕಂತೆ ನರ್ತಿಸಿ ಸಮಗ್ರ ಕಲ್ಯಾಣ ಕ್ರಾಂತಿಯ ಚಿತ್ರಣ ಬಿಂಬಿಸಿದ ಧಾರವಾಡದ ಕುಮಾರಿ ಪ್ರತಿಭಾ ಗರಗ , ಬೀದರ್‌ನ ಕುಮಾರಿ ವಚನ ಸುಧಾ ಮತ್ತು ತಂಡದವರು ಅಭಿನಯಿಸಿದ ನೃತ್ಯ ರೂಪಕ ಎಲ್ಲ ಜನರ ಮನಸೂರೆಗೊಂಡಿತು.

ಬಸವಣ್ಣನವರ ಪಾತ್ರಧಾರಿಯಾಗಿ ಕೊಪ್ಪಳದ ಇಂಜನಿಯರ್ ವೀರಣ್ಣ ಕೊರ್ಲಳ್ಳಿ, ಹರಳಯ್ಯ ಪಾತ್ರಧಾರಿಯಾಗಿ ಬೆಂಗಳೂರಿನ ಶ್ರೀಕಂಠ ಕುಮಾರ್ ಅದೇ ರೀತಿ ರಾಷ್ಟ್ರೀಯ ಬಸವ ದಳದ ಪದಾಧಿಕಾರಿಗಳು, ಬಸವ ಧರ್ಮ ಪೀಠದ ಜಂಗಮ ಮೂರ್ತಿಗಳು ಶರಣರ ಪಾತ್ರಧಾರಿಗಳಾಗಿ ಅಭಿನಯಿಸಿದ್ದು ವಿಶೇಷವಾಗಿತ್ತು, ಮಂತ್ರಪುರುಷ ಬಸವಣ್ಣನವರ ಜನನ,

ಅನುಭವ ಮಂಟಪ ಸ್ಥಾಪನೆ, ಮೊದಲ ವರ್ಣಾಂತರ ವಿವಾಹ, ಹರಳಯ್ಯ ಮಧುವರಸರಿಗೆ ಎಳೆಹೂಟೆ ಶಿಕ್ಷೆ, ಬಸವಣ್ಣನವರ ಗಡಿಪಾರು, ಕಲ್ಯಾಣದಲ್ಲಿ ಕ್ರಾಂತಿ, ಬಿಜ್ಜಳನ ವಧೆ, ವಚನ ಸಾಹಿತ್ಯ ರಕ್ಷಣೆಗೆ ಕಲ್ಯಾಣದಿಂದ ನಿರ್ಗಮನ. ವೀರಗಣಾಚಾರಿ ಮಡಿವಾಳ ಮಾಚಿದೇವರ, ಚಿನ್ಮಯ ಜ್ಞಾನಿ ಚನ್ನಬಸವಣ್ಣನವರ ನೇತೃತ್ವದಲ್ಲಿ ವಚನ ಸಾಹಿತ್ಯ ರಕ್ಷಣೆಗೆ ಸಹ್ಯಾದ್ರಿಯ ಅರಣ್ಯ ಪ್ರದೇಶದತ್ತ ಆಗಮನ, ಉಳವಿಯಲ್ಲಿ ವಾಸ್ತವ್ಯ ಹೀಗೆ ಕಲ್ಯಾಣದ ಘಟನಾವಳಿಗಳ ಸಮಗ್ರ ಚಿತ್ರಣ ಬಿಂಬಿಸಿತು. ಸಮಾರಂಭದಲ್ಲಿ ಸಂಗೊಳಗಿ ರಾಷ್ಟ್ರೀಯ ಬಸವ ದಳದ ಯುವಕರ ಕೋಲಾಟ ಮೆರುಗು ತಂದಿತು. 'ಕಲ್ಯಾಣ ಕರೆದಿದೆ ಕಲ್ಯಾಣ, ಗುರು ಬಸವಣ್ಣನ ಕಲ್ಯಾಣ, ಶರಣರಾಡಿದ ಕಲ್ಯಾಣ' ಗೀತೆಗೆ ಪ್ರತಿಭಾ-ವಚನ ಸುಧಾರ ನೃತ್ಯವಂತೂ ಸಭೆಗೆ ವಿಶೇಷ ಸ್ಫೂರ್ತಿ ನೀಡಿತು. ಸಮಾರಂಭದಲ್ಲಿ ಕಲ್ಯಾಣ ಕ್ರಾಂತಿಯ ಘಟನಾವಳಿಗಳ ರೂಪಕ ವೀಕ್ಷಿಸುತ್ತಿದ್ದ ದಲಿತ ಸಂಘರ್ಷ ಸಮಿತಿಯ ಮುಖಂಡರು ಕಂಬನಿಗರೆಯುತ್ತಿದ್ದುದು ಹೃದಯ ಸ್ಪರ್ಶಿಯಾಗಿತ್ತು.

- ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು

ಬಸವ ಧರ್ಮ ಪೀಠದ ದಾನಿಗಳಿಗೆ ಸೂಚನೆ

1. 80 G ಸೌಲಭ್ಯ ನವೀಕರಣ : ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್‌ಗೆ 80 ಜಿ ಇನ್‌ಕಂ ಟ್ಯಾಕ್ಸ್ ಸೌಲಭ್ಯ 1-4-2004ನೆಯ ದಿನಾಂಕದಿಂದ ಅನ್ವಯವಾಗುವಂತೆ ನವೀಕರಣಗೊಂಡಿದೆ. ಆದ್ದರಿಂದ ಈ ಸೌಲಭ್ಯ ಪಡೆದುಕೊಳ್ಳಬೇಕೆಂಬ ದಾನಿಗಳು ಮತ್ತು ಈಗಾಗಲೇ ಕಳೆದ ವರ್ಷ ರಸೀತಿ ಪಡೆದುಕೊಂಡು ಸೌಲಭ್ಯ ಪಡೆದುಕೊಳ್ಳಲಾಗದೆ ಇದ್ದವರು ಬೆಂಗಳೂರಿನ ವಿಳಾಸಕ್ಕೆ ಸಂಪರ್ಕಿಸಬೇಕೆಂದು ಕೋರುತ್ತೇವೆ. ಫೋನ್ ಮೂಲಕವೂ ಸಂಪರ್ಕಿಸಬೇಕೆಂದು ಸೂಚಿಸುತ್ತೇವೆ. 080-23325335 - 23322790.

2. ಪುಸ್ತಕ ಮುದ್ರಣಕ್ಕೆಂದು ಧನ ಸಹಾಯವನ್ನು ಅನೇಕ ದಾನಿಗಳು ಮಾಡಿದ್ದು ಅವರ ಹೆಸರಿನಲ್ಲಿ ಪುಸ್ತಕಗಳು ಮುದ್ರಣಗೊಂಡಿವೆ. ಒಂದು ವೇಳೆ ದಾನಿಗಳ ಹೆಸರಿನಲ್ಲಿ ಇನ್ನು ಪುಸ್ತಕಗಳು ಪ್ರಿಂಟಾಗದೆ ಇದ್ದರೆ, ಇದನ್ನು ನಮ್ಮ ಗಮನಕ್ಕೆ ತರಬೇಕೆಂದು ಸೂಚಿಸುತ್ತೇವೆ. ಪತ್ರ ಬರೆದಾಗಲಿ, ಫೋನ್ ಮೂಲಕವಾಗಿ ತಿಳಿಸಬೇಕೆಂದು ಕೋರಿಕೆ.

3. ಸಿಂಗಲ್ ರೂಂ, ಡಬ್ಬಲ್ ರೂಂ, ಡಾರ್ಮಿಟರಿ ಕಟ್ಟಲು ಬಸವ ಧರ್ಮ ಪೀಠಕ್ಕೆ ಅನೇಕ ದಾನಿಗಳು ಧನ ಸಹಾಯ ಮಾಡಿದ್ದಿದೆ. ಕೂಡಲ ಸಂಗಮ ಮತ್ತು ಬಸವ ಕಲ್ಯಾಣ ಎರಡೂ ಕಡೆ ವಸತಿ ಗೃಹಗಳನ್ನು ಕಟ್ಟಲು ಧನ ಸಹಾಯ ಮಾಡಿರುವವರೂ ಉಂಟು. ಕೂಡಲ ಸಂಗಮದಲ್ಲಿ ಎರಡನೆಯ ವಸತಿ ಗೃಹ ಸರ್ವಜ್ಞ ಶರಣಧಾಮದ 4 ಅಂತಸ್ತುಗಳ ಕೊಠಡಿಗಳು ಪೂರ್ಣಗೊಳ್ಳುತ್ತಲಿವೆ. ಈಗಾಗಲೇ ಅನೇಕ ದಾನಿಗಳ ಹೆಸರಿನ ಕಲ್ಲುಗಳನ್ನು ಕೆತ್ತಿಸಲಾಗಿದೆ. ಜೊತೆಗೆ 4 ವಿಶಾಲವಾದ ಡಾರ್ಮಿಟರಿ ಮತ್ತು ಅವುಗಳ ಪಕ್ಕದಲ್ಲಿ ಸಿಂಗಲ್ ಕೋಣೆಗಳನ್ನು, ಅದೇ ರೀತಿ ಅವುಗಳ ಮೇಲೆ ಡಾರ್ಮಿಟರಿ, ಜೊತೆಗೆ ಸಿಂಗಲ್ ಕೋಣೆ ಕಟ್ಟಿಸಲಾಗಿದೆ. ಇನ್ನು ಯಾವ ದಾನಿಗಳ ಹೆಸರು ಉಳಿದಿವೆ. ಆ ಬಗ್ಗೆ ನೆನಪಿನ ಓಲೆಗಳನ್ನು ಬರೆಯಿರಿ. ಪ್ರತಿ ಕೋಣೆಗೆ 1-ಎರಡು ಅಂತಸ್ತಿನ ಕಬ್ಬಿಣದ ಮಂಚವನ್ನು ಮಾಡಿಸಬೇಕಾಗಿದೆ. ಫ್ಯಾನ್ ಹಾಕಿಸಬೇಕಾಗಿದೆ. ಇದಕ್ಕೆ ಸುಮಾರು 5000(ಐದು ಸಾವಿರ)ರೂ. ಖರ್ಚು ತಗಲುತ್ತದೆ. ಆದ್ದರಿಂದ ಕೋಣೆಯ ದಾನಿಗಳು ಮಂಚ ಮತ್ತು ಫ್ಯಾನ್ ಹಣವನ್ನು ಕಳಿಸಿದರೆ ಎಲ್ಲ ಕೋಣೆಗಳಿಗೂ ಮಂಚಮಾಡಿಸಲು ಅನುಕೂಲವಾಗುತ್ತದೆ.

ತಿಪಟೂರಿನ ಸರ್ವೋದಯ ವಿದ್ಯಾಸಂಸ್ಥೆಯ

ಅನಾಥಾಶ್ರಮಕ್ಕೆ ಪ್ರವೇಶಾವಕಾಶ

ತುಮಕೂರು ಜಿಲ್ಲೆಯ ತಿಪಟೂರಿನ ಸರ್ವೋದಯ ವಿದ್ಯಾಸಂಸ್ಥೆಯನ್ನು ಅದರ ಸಂಸ್ಥಾಪಕರಾದ ಸ್ವಾತಂತ್ರ್ಯ ಹೋರಾಟಗಾರ ಸನ್ಮಾನ್ಯ ಟಿ. ಎ. ದಾಸಪ್ಪನವರು ವಿಶ್ವಕಲ್ಯಾಣ ಮಿರ್ಷ್ ಚಾರಿಟಬಲ್ ಟ್ರಸ್ಟ್‌ಗೆ ವಹಿಸಿಕೊಟ್ಟಿದ್ದಾರೆ. ಪ್ರಸುತ್ತ ಸಂಸ್ಥೆ ನಡೆಸುತ್ತಿರುವ ಅನಾಥಾಶ್ರಮಕ್ಕೆ ಮಕ್ಕಳನ್ನು ಸೇರಿಸಿಕೊಳ್ಳಲಾಗುತ್ತಿದ್ದು ಆಸಕ್ತರು ಅರ್ಜಿ ಸಲ್ಲಿಸಬಹುದು.

1. ವಿದ್ಯಾಸಂಸ್ಥೆಯ ಆವರಣದಲ್ಲೇ ಪ್ರೈಮರಿ ಒಂದರಿಂದ ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ.ಯವರೆಗೂ ಶಾಲಾ ಶಿಕ್ಷಣ ಸೌಲಭ್ಯವಿದೆ.
2. ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳು ಉಭಯತರಿಗೂ ಪ್ರವೇಶವಿದೆ ಮತ್ತು ಪ್ರತ್ಯೇಕವಾದ ವಸತಿ ವ್ಯವಸ್ಥೆ ಇದೆ.
3. ತಾಯಿತಂದೆ ಇಲ್ಲದ ಪೂರ್ಣ ಅನಾಥರಿರಬಹುದು ಇಲ್ಲವೇ ಇಬ್ಬರಲ್ಲಿ ಒಬ್ಬರನ್ನು ಕಳೆದುಕೊಂಡವರಿರಬಹುದು.
4. ಅನಾಥ ಮಕ್ಕಳಿಗೆ ಶಾಲಾ ಖರ್ಚು, ಹಾಸ್ಟೆಲ್ ಸೌಲಭ್ಯ ಎಲ್ಲ ಉಚಿತ.
5. ಅತ್ಯಂತ ಬಡವರಾದ ಮಕ್ಕಳಿಗೂ ಉಚಿತ ಶಿಕ್ಷಣದ ಅವಕಾಶವಿದೆ.
6. ರಿಯಾಯಿತಿ ದರದಲ್ಲಿ ಹಾಸ್ಟೆಲ್ ಸೌಲಭ್ಯಕ್ಕೆ ವಿದ್ಯಾಸಂಸ್ಥೆಯಲ್ಲಿ ಅವಕಾಶವಿದೆ.

ಶಾಲೆ ಮತ್ತು ಅನಾಥಾಶ್ರಮದ ಪ್ರವೇಶ ಪ್ರಾರಂಭವಾಗಿರುವುದರಿಂದ ಆದಷ್ಟು ಬೇಗನೆ ಸೇರಿಸಬಹುದು. ಶಾಲಾ ಪ್ರವೇಶಕ್ಕೆ ಕೊನೆಯ ದಿನಾಂಕ ಜೂನ್ 30. ಹೆಚ್ಚಿನ ವಿವರಗಳಿಗಾಗಿ :

ಸಂಪರ್ಕಿಸುವ ವಿಳಾಸ

ಪೂಜ್ಯ ಚನ್ನಬಸವರಾಜ ಸ್ವಾಮಿಗಳು,
ಆಡಳಿತಾಧಿಕಾರಿಗಳು
ಸರ್ವೋದಯ ವಿದ್ಯಾಸಂಸ್ಥೆ
ಎಡೆಯೂರು ರಸ್ತೆ, ತಿಪಟೂರು
ಜಿ - ತುಮಕೂರು.
ಮೊಬೈಲ್ : 94481 42240


ವಿಶ್ವಕಲ್ಯಾಣ ಮಿರ್ಷ್ ಚಾರಿಟಬಲ್ ಟ್ರಸ್ಟ್
ಬಸವ ಮಂಟಪ
2035, 20ನೇ ಮುಖ್ಯ ರಸ್ತೆ,
2ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು - 560010
ದೂ : 080 - 23325335/23322790

ಧನ ಸಹಾಯಕ್ಕೆ ಮನವಿ

ಅನಾಥಾಶ್ರಮದ ಹಾಸ್ಟೆಲ್‌ಗೆ ಊಟದ ತಟ್ಟೆ ಲೋಟ, ಅಡಿಗೆ ಪಾತ್ರ, ನೆಲಕ್ಕೆ ಹಾಸುವ ಜಮಖಾನಾ, ಮಕ್ಕಳಿಗೆ ಬೇಕಾಗುವ ನೋಟ್‌ಬುಕ್ ಇತ್ಯಾದಿ ಸಾಮಗ್ರಿಗಳನ್ನು ಸ್ವಯಂ ಪ್ರೇರಣೆಯಿಂದ ಕೊಡುವವರಿಗೆ ಅವಕಾಶವಿದೆ.




871ನೇ ಬಸವಜಯಂತಿ ಉತ್ಸವದ ಉದ್ಘಾಟನೆ ಮಾಡುತ್ತಿರುವ ಅಧೀಕ್ಷಕರಾದ ಡಿ. ಸಂಗಪ್ಪನವರು



ಮಾತನಾಡುತ್ತಿರುವವರು ಉಪ ಕಾರಾಗೃಹದ ಅಧೀಕ್ಷಕರಾದ ಶರಣ ಡಿ. ಸಂಗಪ್ಪ, ರಾ.ಬ. ದಳ ಅಧ್ಯಕ್ಷರಾದ [illegible]

CPMG/KA/BGW - 50/2003 - 2005
WPP (W) - 17 R. No. 19980/70



ಕಲ್ಯಾಣ ಪರ್ವದ ಶರಣ ವಂದನ ಕಾರ್ಯಕ್ರಮದಲ್ಲಿ ಜ್ಯೋತಿಯ ಜ್ವಲನ ಷಡುಗಣಾಧೀಶರಿಂದ